Veterinary Dispensary at Hosakere, Gubbi Taluk.

Q.—902. Sri B. C. NANJUNDAIYA (Kora).—

Will the Government be pleased to state :—

(*a*) whether it is a fact that Sri H. V. Panchakshara Aradhya of Hosakere village in Hagalvadi hobli in Gubbi taluk has given in writing on a stamped paper agreeing to provide a building freely for locating a veterinary dispensary in that village :

(*b*) whether the District Board, Tumkur, has agreed for this proposal and resolved to pay its quota for this hospital ;

(*c*) whether Government will sanction this hospital during 54-55 ?

A.—Dr. R. NAGAN GOWDA (Minister for Agriculture).—

(*a*) Yes.

(*b*) Yes.

(*c*) This will be considered.

Government Transport from Bangalore to Shimoga via Tiptur-Arsikere.

Q.—905. Sri T. G. THIMME GOWDA (Tiptur).—

Will the Government be pleased to state :—

(*a*) whether there have not been representations to run a Government transport service from Bangalore to Shimoga *via* Tiptur-Asrikere ;

(*b*) whether they will consider the feasibility when new buses are put into service ?

A.—Sri H. SIDDAVEERAPPA (Minister for Home and Industries).—

(*a*) Some representations have been received.

(*b*) Yes.

Plant Protection Equipment, Agricultural Department.

Q.—923. Sri V. MASIYAPPA (Hiriyur).—

Will the Government be pleased to state :—

(*a*) the number of plant protection equipment in the Department of Agriculture ;

(*b*) if it has come to their notice that it is not sufficient to cope up with the demand ?

A.—Dr. R. NAGAN GOWDA (Minister for Agriculture).—

(*a*)—

Dusters	
Rotary dusters	184
Power dusters	6
Wheel Barrow duster	1
Cyanogas pumps	9
Sireeco duster	1
Seed treatment drums	37
Sprayers	
One gallon sprayers	108
Sapperlot sprayer	115
Power sprayers	6
Kanpsac sprayer	1
Flame sprayer	1
Hudson sprayers	12

(*b*) Yes.

PRIVILEGE MOTION.

Budget Speech of the Chief Minister in the Council.

Mr. SPEAKER.—I have received notice of a motion on a matter of privilege from Sri S. Gopala Gowda. It is to the effect that the speech of the Hon'ble the Chief Minister in the Legislative Council on the 15th when introducing the Budget, as reported in *Viswakarnataka*, contains matter which casts reflection on the debates of the Members of this House.

At this stage I do not want to examine whether the complaint involves a *prima facie* case of breach of privilege. I request the Member to kindly wait till the official proceedings of the debates of the Council on the 15th are published and to renew the notice thereafter if he considers it necessary to do so. I shall then treat the notice as having been received at the earliest opportunity and shall not disallow the notice on that ground.

BUDGET FOR 1954-55—DEMANDS FOR GRANTS.

(Procedure with respect to Debate.)

Mr. SPEAKER.—Now, the voting of Demands for Grants for the year 1954-55. We have now seven Demands to-day 1 to 5, 13 and 36. I hope the members will agree if the time is allotted as follows:

Land Revenue till 2-30 P.M., State Excise Duties from 2-30 to 3 P.M. Forest from 3 to 4 P.M., 4 to 5 P.M. General Administration. I think this will suit the House. If any alternative is acceptable to the House, I will adopt it.

Sri J. MOHAMED IMAM (Jagalur).—I suggest that we may concentrate our attention on Land Revenue and State Excise Duties.

Mr. SPEAKER.—In fact, some of the cut motions tabled by some of the members under Land Revenue, strictly speaking, fall under the District Administration. That is why at least two hours for the General Administration would be necessary and desirable. It is left to you.

Sri J. MOHAMED IMAM.—All right, Sir.

Mr. SPEAKER.—Now, we will take up Land Revenue. Instead of moving any particular cut motion, I would like to propose that members may choose to speak on the particular motion and the Hon'ble Minister will make a reply and put the whole Demand to vote. I think, members would agree to this. Instead of moving every cut motion or a particular cut motion, general remarks may be made and the Minister will reply. Then, the whole demand will be put to vote. All that is to just see that within the specified time these Demands will be over.

Sri A. BHEEMAPPA NAIK (Molakalmuru).—It will be another general debate. The object of bringing in the cut motion is........

Mr. SPEAKER.—I know the object; that means two or three cut motions under each Demand will be taken up for consideration. If the House is so satisfied, I will leave it. But, there may be some very important cut motions which are tabled at the end, at the close of each Demand. It is with a view to give chance to such members I suggested this. But, if the alternative is acceptable to the House, I leave it to Members.

Sri T. MARIAPPA (Mysore City North).—May I suggest, Sir, a number of cut motions are of similar nature. You can avoid cut motions of similar nature and cut motions which raise important matters may be taken up. I believe, we will keep in mind the advice tendered by the Chair and avoid cut motions of similar nature, and the other members may also be allowed to speak.

Mr. SPEAKER.—Provided other members would agree; that is the difficulty. If a particular cut motion is taken, each member would like to prefer to speak on his own cut motion. Just to avoid it, I suggested this. Anyhow, some practice is to be followed to-day.

Sri M. LINGANNA (Nanjangud).—With great respect to the Chair, I want to submit as follows:—This practice of sending cut motions on Demands is in vogue for several years. I believe that a time has arisen when this Hon'ble House has to consider this form of practice, because as everyone of us are aware, most of the cut motions resolve or level themselves down to some sort of local grievances and they are being urged before the House. I believe, Sir, that the very effect of the cut motions that have been tabled is a sort of censure against the Treasury Bench. I am not reflecting against the cut motions tabled by the Members in opposition or by the Members of the Party in power. That apart, all these cut motions pertain to local grievances mostly which could have been put before the House by interpellations. I suggest therefore that the practice of tabling cut motions may be stopped and the Rules of Procedure amended in such a manner that these ten days or more may be allowed for discussion of several Heads when we can concentrate ourselves to a particular Head.

In fact the object of discussion on several Demands according to parliamentary practice is to give the Opposition the greatest number of hours so

that remarks made by them be effective on the Treasury Benches. That is how I have understood the practice prevailing in the British Parliament. Therefore it is better that we revise our system of cut motions being taken up for discussion by allowing a member to move his cut motion and other members either to support or to oppose the cut motion. This practice not merely takes away a large part of the time of the House but also the effect of the suggestions offered by the Opposition Members would vanish. In fact these cut motions, as I have said, refer to some sort of local grievances. So we may debate one or two cut motions and the rest of the time can be devoted for a general discussion of the Demand. I believe that with this little deviation in practice we can go to the practical and parliamentary method of debating these Demands as is obtaining in other legislatures or in the British Parliament. I suggest and I hope the House will agree, that in course of time cut motions should be done away with and we should devote our time to debate on one or two grants each day. Of course the number of days may have to be more. In that case, the general discussion of the Demand will be more effective, because we will be dealing with each and every item of Demand. Thereby not merely we will have definite control over each item of Demand but also our voice will be felt effectively. So from this point of view I suggest that only two or three cut motions be taken under each Demand and the rest of the time devoted for general discussion on the particular heads of Demands. I believe this practice will become a regular one by suitable changes in our Rules of Procedure.

Sri D. DEVARAJ URS (Hunsur).—I wholeheartedly agree to that suggestion.

Mr. SPEAKER.—The House has already agreed to the Land Revenue demand being over by 2-30 P.M. 20 minutes are already over. I do not want any further suggestion in the matter. I think that is unnecessary. If members come to an ageeement, it is well and good. Otherwise, I will take up cut motions one by one.

(Sri J. Mohamed Imam rose).

Mr. SPEAKER.—No further speech.

Sri J. MOHAMED IMAM.—Of course. We are agreeable to the suggestion made by you. We are not very particular to move cut motions. Since we have got only very limited time I think we can discuss the Demand and while discussing, members who have sent cut motions may cover those points. I think a time limit may also be fixed.

Mr. SPEAKER.—That is agreed upon.

(Sri M. Madiah interrupted).

Mr. SPEAKER.—The Hon'ble Member may please resume his seat. I will take up cut motions in the order they are tabled.

Sri M. MADIAH.—I said, Sir......

Mr. SPEAKER.—There was no necessity for you to speak. Motion moved :

> "That a sum not exceeding Rs. 33,69,000 be granted to the Government to defray the charges which will come in course of payment during the year ending 31st day of March 1955, in respect of 'Land Revenue'."

I will now adopt the procedure adopted last time. If the Minister wishes to make a statement at the very outset, he can do so; or he can reply at the end to each cut motion.

*Sri S. SRINIVASA IYENGAR (T.-Narasipur).—Sir, I beg to oppose the Demand. As it is today, the record of rights work is being done by the revenue authorities. By record of rights I mean maintaining the indexing of land records and posting mutations slips in that book. The Sub-Registrar collects the mutation fee at the time of any transaction that is registered in the Sub-Registry Office and the same slip noting thereon the survey number that is contained in the document is forwarded to the Revenue Department for posting in the index of land records. Last year also I had brought to the notice of the Government that there has been a lot of arrears in posting mutation slips. The position has improved a little but it is not being worked efficiently. When you have

SRI S. SRINIVASA IYENGAR.)

raised our taxes to the level of taxes in the Madras State in the wake of the merger of Bellary to this State, it is but right that you should also adopt the procedure adopted in the Madras State for the maintenance of these raiyatwari records. In the Madras State, this indexing of land records under the raiyatwari system is being done in the Sub-Registrar's office. So I urge that the maintenance of the index of records and the posting of mutations be entrusted to the Sub-Registrar himself. That will avoid delay in posting. It will also assure that the name of the person getting a right of registration is registered in the index of land records. That would solve a number of difficulties. At present for several years the right of an individual in his land is not posted in the Land Records Register. The Revenue authorities take time to post. In some cases the recital in the document presented for registration at the Sub-Registrar's office will not correspond with that in the original record. For measurements they refer to Survey Department. For making a division of survey number in accordance with the registered document they must automatically refer the case to Taluk Surveyor. The Sub-Registrar can as well refer the cases to the Taluk Surveyor.

Sri Kadidal MANJAPPA (Minister for Revenue and Public Works).—If there is a dispute ?

Sri S. SRINIVASA IYENGAR.—In such cases there are other courses open. There is the civil court.

Sri B. T. KEMPA RAJ (Bangalore South—Scheduled Castes).—On a point of order. I cannot understand the procedure adopted. The Hon'ble Member who is just speaking has got a cut motion of the same nature. He can move it when his cut motion is taken up.

Mr. SPEAKER.—That means you have not listened to me or to what some member said.

ಶ್ರೀ ಎಂ. ಮಾದಯ್ಯ (ನಂಜನಗೂಡು—ಅನುಸೂಚಿತ ಜಾತಿಗಳು).—ನನಗೆ ಕೇಳಿಸಲಿಲ್ಲ. ತಾವು ಏನು ಹೇಳುತ್ತಿದ್ದಿರೆಂಬುದೇ ಗೊತ್ತಾಗಲಿಲ್ಲ. ಈಗ ಈ ಲಿಸ್ಟ್‌ನಲ್ಲಿ ನಮೂದಾಗಿರುವ cut motions ಗಳನ್ನು ಒಂದಾದಮೇಲೊಂದು ತೆಗೆದುಕೊಳ್ಳುತ್ತೀರೆಂದು ತಿಳಿದುಕೊಂಡಿದ್ದೆ. Usually members move cut motions. If they are not allowed to move cut motions, I submit that our privileges may be safeguarded. That is how we have understood about the procedure adopted now.

A MEMBER.—You are in the back bench and that is why...

Sri J. MOHAMED IMAM.—Let me recall to the House the understanding arrived at during the last session of the Assembly.

Sri B. V. NARAYANA REDDY (Bagepally—Gudibanda).—Please give a ruling. We do not want to handicap the Chair.

A MEMBER.—I submit to the Chair that an opportunity may be given to at least some of the movers of cut motions by fixing a time limit for each member.

Sri M. MADIAH.—For the last three years, even after the Constitution came into force, members of the ruling party did not press their cut motions. As suggested by some friends, the practice already followed may be continued.

ಶ್ರೀ ಎಸ್. ಗೋಪಾಲಗೌಡ (ಸಾಗರ—ಹೊಸನಗರ).—Treasury Bench ನವರಿಗೆ ಈ cut motions move ಮಾಡಲು ಅವಕಾಶ ಇರಬಾರದು. Opposition ನವರಿಗೆ ಮಾತ್ರ cut motions move ಮಾಡುವುದಕ್ಕೆ ಅವಕಾಶ ಇರಬೇಕು.

Sri P. R. RAMAIYA (Basavangudi).—A couple of minutes may be given to each cut motion.

Sri D. DEVARAJ URS (Hunsur).—In obedience to the ruling already given by the Chair, I suggest that such of those members who are anxious to speak on the Demands and who have already tabled cut motions, may be given preference to others who have not tabled cut motions. Thereby some of these members can speak on the demands. In that way we may overcome the difficulties.

Sri B. HUTCHE GOWDA (Turuvekere) —But we can oppose the Demand.

Mr. SPEAKER.—So it is obvious that there is no common understanding. May I take it like that ? I am bound to follow the usual practice as per rules. The first cut motion stands in the name of Sri Kempa Raj.

1-30 P.M.

Administration of the Revenue Department.

ಶ್ರೀ ಬಿ. ಟಿ. ಕೆಂಪರಾಜ್ (ಬೆಂಗಳೂರು ದಕ್ಷಿಣ—ಅನುಸೂಚಿತ ಜಾತಿಗಳು).—ಸ್ವಾಮಿ, ಈ ಸಭೆಯ ಮುಂದೆ ತಮ್ಮ ಅಪ್ಪಣೆಯನ್ನು ಬೇಡಿ ಈ ಖೋತಾ ನಿರ್ಣಯವನ್ನು ಇಡುತ್ತಾ ಇದ್ದೇನೆ :—

"7. 'ಜಮೀನು ಕಂದಾಯ' ಎಂಬ ಬಾಬಿನಲ್ಲಿ ಕೋರಿರತಕ್ಕ 33,69,000 ರೂಪಾಯಿಗಳ 'ಡಿಮ್ಯಾಂಡ್' ಮನವಿಯ ಸಂಬಂಧದಲ್ಲಿ 100 ರೂಪಾಯಿಗಳನ್ನು ಕಡಮೆ ಮಾಡಬೇಕು. (ರೆವಿನ್ಯೂ ಇಲಾಖೆಯ ಆಡಳಿತ ವಿಚಾರಗಳ ಬಗ್ಗೆ ಒಂದು ಚರ್ಚೆ ನಡೆಯುವಂತೆ ಮಾಡುವುದಕ್ಕಾಗಿ)."

ಸ್ವಾಮಿ, ಈಗ ಹಾಲಿ ನಮ್ಮ ಸಂಸ್ಥಾನದಲ್ಲಿ ಪ್ರತಿಯೊಂದು ಜಿಲ್ಲೆಯಲ್ಲೂ ಈ ರೆವಿನ್ಯೂ ಇಲಾಖೆಗಳು ಬಹಳ ಕಾಲದಿಂದ ಕೆಲಸಮಾಡುತ್ತಾ ಇವೆ. ಮುಖ್ಯವಾಗಿ ಜಿಲ್ಲೆಯ ಕಾರ್ಯಕಲಾಪಗಳು ಜಿಲ್ಲಾಧಿಕಾರಿಗಳ ದಕ್ಷತೆ ಮತ್ತು ಅವರಿಗೆ ಇರತಕ್ಕಂಥ ಕೆಲಸಗಳ ಮೇಲೆ ನಿಂತಿರುವುದು. 1947ರಿಂದ ಸ್ವರಾಜ್ಯ ಬಂದ ಮೇಲೆ ಜನರಲ್ಲಿ ಒಂದು ಹೊಸ ಹುರುಪುಹುಟ್ಟಿ ತಮ್ಮ ಕುಂದುಕೊರತೆಗಳು ಏನಿದ್ದರೂ ಆದಷ್ಟು ಬೇಗ ಪರಿಹಾರವಾಗುತ್ತದೆ ಎಂದು ಜಿಲ್ಲಾಧಿಕಾರಿಗಳ ಮುಂದೆ, ಸಬ್ ಡಿವಿಜನ್ ಆಫೀಸರುಗಳ ಮುಂದೆ, ಅಮಲ್ದಾರರುಗಳ ಮುಂದೆ ಅನೇಕ ರೀತಿಯ ಮನವಿಗಳನ್ನು ಇಡುತ್ತಾ ಇದ್ದಾರೆ. ಕಾರ್ಯಕಲಾಪಗಳು ಎಷ್ಟು ತ್ವರಿತವಾಗಿ ಆಗುತ್ತಾ ಇವೆ ಎಂಬುದನ್ನು ನಾವು ಯೋಚನೆಮಾಡಿದರೆ ನಾವು ನಿರೀಕ್ಷಿಸಿದಷ್ಟು ಬೇಗ ಆಗುತ್ತಾ ಇಲ್ಲ ಎಂದು ಹೇಳಿ ಈ ಸಂದರ್ಭದಲ್ಲಿ ಸರ್ಕಾರದವರ ಗಮನಕ್ಕೆ ತರಲು ಬಯಸುತ್ತೇನೆ.

ಸ್ವಾಮಿ, ರೆವಿನ್ಯೂ ಇಲಾಖೆಯಲ್ಲಿ ಇರತಕ್ಕ ಮುಖ್ಯವಾದ ಕೆಲಸಗಳು ಎರಡು. ಒಂದು, ರೈತರು ತಮಗೆ ಜಮೀನುಬೇಕು ಎಂದು ಅರ್ಜಿಗಳನ್ನು ಹಾಕಿಕೊಳ್ಳುತ್ತಾರೆ. ಈ ಅರ್ಜಿಗಳು ಅನೇಕವೇಳೆ, ಹಾಗೆಯೇ, ಯಾವ ಒಂದು ರೂಪವನ್ನೂ ತಾಳದೆ ಪತ್ತೆ ಇಲ್ಲದಂತಾಗುತ್ತವೆ. ಕೆಲವು ಅರ್ಜಿಗಳಿಗೆ ಗೋಮಾಳಗಳು ಇವೆ, ಅಥವಾ ಇಲ್ಲ ಎಂಬ ಬಗ್ಗೆ ಎಂಡಾರ್ಸ್‌ಮೆಂಟ್ ಕೊಡುವುದಕ್ಕೂ ಕೂಡ ಅನೇಕ ತಿಂಗಳುಗಳ ಕಾಲ ಡಿಪಾರ್ಟ್‌ಮೆಂಟಿಗೆ ಬೇಕಾಗುತ್ತದೆ. ಆದ್ದರಿಂದ ಈ ಕೆಲಸಗಳು ಆದಷ್ಟು ಜಾಗ್ರತೆ ಆಗುವುದಕ್ಕೆ ಸರಿಯಾದ ನಿಗಾ ಸರ್ಕಾರದವರು ತೆಗೆದುಕೊಳ್ಳಬೇಕೆಂದು ಈ ಮೂಲಕ ಪ್ರಾರ್ಥಿಸುತ್ತೇನೆ.

ಎರಡನೆಯದು ಅಕ್ವಿಸಿಷನ್ ಕೇಸುಗಳು. ಸ್ವಾಮಿ, ಪ್ರತಿಯೊಂದು ಗ್ರಾಮದಲ್ಲೂ ಜನಸಂಖ್ಯೆ ಹೆಚ್ಚುತ್ತಿದೆ. ಜನರಿಗೆ ವಾಸಮಾಡಲು ಮನೆಗಳ ಸೌಕರ್ಯ ಬೇಕಾಗುತ್ತದೆ. ಗ್ರಾಮ ಪಂಚಾಯತಿಗಳವರು ನಿರ್ಣಯ ಮಾಡಿ ಸರ್ಕಾರದವರಿಗೆ ತಮ್ಮ ಮನವಿಯನ್ನು ಕಳುಹಿಸಿದರೂ. ಸಹ ಕೇಳಿದ ಜಮೀನುಗಳನ್ನು ಅಕ್ವೈರ್ ಮಾಡುವುದಕ್ಕೆ ಅನೇಕ ವರ್ಷಗಳನ್ನೇ ತೆಗೆದುಕೊಳ್ಳುತ್ತಾರೆ. ಈ ರೀತಿ ರೈತರಿಗೆ ವಾಸಮಾಡಲು ಅನುಕೂಲವಾದಂಥ ನಿವೇಶನಗಳನ್ನು ಕಲ್ಪಿಸಿಕೊಡುವುದಕ್ಕೆ ಸರ್ಕಾರದವರು ರೆಕಾರ್ಡುಗಳನ್ನು ಆದಷ್ಟು ತ್ವರಿತವಾಗಿ ತೀರ್ಮಾನಗೊಳ್ಳುವಂತೆ ಮಾಡಬೇಕಾಗುತ್ತದೆ.

ಮೂರನೆಯದಾಗಿ, ಲ್ಯಾಂಡ್ ಅಕ್ವಿಸಿಷನ್ ಆಫೀಸರು ಎಂದು ಹೇಳಿ ಒಂದು ಸ್ಥಾನವನ್ನು ಕಲ್ಪಿಸಿದ್ದೀರಿ. ಅಕ್ವಿಸಿಷನ್ ರೆಕಾರ್ಡು ಕಂಪ್ಲೀಟ್ ಆಗಲಿಕ್ಕೆ ಸುಮಾರು ಒಂದೆರಡು ವರ್ಷಗಳು, ಕೆಲವು ಕೇಸುಗಳಲ್ಲಿ 4—5 ವರ್ಷಗಳು, ಹಿಡಿಯುತ್ತದೆ. ಈ ಆಫೀಸುಗಳಲ್ಲಿ, ಮುಖ್ಯವಾಗಿ, ಕೆಲಸ ಹೆಚ್ಚಾಗಿದ್ದು ಕೆಲಸಮಾಡಲಿಕ್ಕೆ ಗುಮಾಸ್ತರುಗಳ ಸಾಲದಾಗಿದ್ದಾರೆ. ಅನೇಕವೇಳೆ ನಾನು ವಿಚಾರಿಸಿದ್ದರಲ್ಲಿ, ಸಾಕಾದಷ್ಟು ಸಿಬ್ಬಂದಿ ಸರ್ಕಾರದವರು ಕೊಟ್ಟಿಲ್ಲ. ಆದ್ದರಿಂದ ತ್ವರಿತವಾಗಿ ಕೆಲಸಮಾಡಲಿಕ್ಕೆ ಆಗುತ್ತಾ ಇಲ್ಲ ಎಂದು ಹೇಳತಕ್ಕ ಪರಿಸ್ಥಿತಿ ಉಂಟಾಗಿದೆ. ಆದ್ದರಿಂದ ಯಾವ ಇಲಾಖೆಯಲ್ಲಿ ಹೆಚ್ಚಿನ ಕೆಲಸ ಇರುತ್ತದೆಯೋ ಅಂಥ ಇಲಾಖೆಗೆ ಸರಿಯಾದ ಸಿಬ್ಬಂದಿಯನ್ನು ಕೊಟ್ಟು ಜನರ ಕೆಲಸಕಾರ್ಯಗಳು ತ್ವರಿತವಾಗಿ ಆಗುವುದಕ್ಕೆ ಸಹಾಯ ಮಾಡಿಕೊಡಬೇಕು ಎಂದು ಹೇಳಿ ಈ ಸಂದರ್ಭದಲ್ಲಿ ಪ್ರಾರ್ಥಿಸುತ್ತೇನೆ.

Mr. SPEAKER.—Cut motion moved:

"That the demand be reduced by Rs. 100."

Sri Kadidal MANJAPPA.—Sir, I concede that there is some amount of delay in some cases. But I do not concede that there is delay in general. Sir, regarding darkbasts, the figures available reveal the fact that the disposal is considerably quick. In the year 1951-52 including pending balances, the total number of darkhasts pending were 30,739. But of this, 20,995 were disposed of during that year leaving a balance of 9,839. In the year 1952-53 the total receipts including the balance of the previous year were 31,280. Out of these, 21,172 have been disposed of leaving a balance of 10,108. In the year 1953-54, the total number of receipts as 23,013 and the number disposed of was 12,714. We are doing our best to dispose of the darkhast petitions as quickly as possible. There are certain practical difficulties. The petitioners for land apply indiscriminately to all the authorities. They apply to the Amildar, they apply to the Sub-Division Officer and in spite of receiving an endorsement, the petitioner straightaway applies to the Minister and sometimes even without affixing the required stamp. A man applies for gomal. The Amildar issues an endorsement that the gomal is not available and therefore it cannot be granted. He once again applies to the Sub-Division Officer and goes up to the Minister. In some cases they apply for some forest lands. When they apply for the forest lands, the records will have to be referred to the

(SRI KADIDAL MANJAPPA.)

Forest Department for their opinion. Naturally it takes some time for the Forest Department to give their opinion. In some cases, they take six months or one year to furnish their opinion. In some cases, they apply for date groves which are not released. In such cases, we will have to obtain the opinion of the Excise Department. These are some instances of unavoidable delays. All the same, Sir, I do not say we have to shirk our responsibility. Even the Deputy Commissioners, sometimes the Revenue Commissioner and even Ministers are continuing to have surprise inspections and I have instructed all the Deputy Commissioners to conduct surprise inspection of Taluk offices, and Sub-Division offices.

As for the acquisition cases, here also certain amount of delay is unavoidable and there are causes for the delay. The acquisition has to be sanctioned invariably by the Government. After the acquisition is sanctioned, in some cases, the disputes start in village on account of faction. They approach the highest authorities and sometimes obtain stay orders. Even in this branch, we are doing our best to minimise delay. And I am seriously thinking of changing the procedure itself in the Revenue Department. The usual practice at present prevailing is that records should go through some officers, for instance, if a record is called for, the Amildar sends it to the Sub-Division Officer and if the Government calls for a report, the records have to go from the Taluk offices to the Sub-Division Officer, from the S.D.O. to the Deputy Commissioner, from him to the Revenue Commissioner and from the Revenue Commissioner to the Government. I am therefore thinking of changing the procedure itself. I am paying my immediate attention to this matter.

Sir, I am sure that Sri Kempa Raj is really satisfied with my reply and I am sure he is also convinced about the *bona fides* and the seriousness of the Government and therefore, I trust he will withdraw the cut motion.

Sri B. T. KEMPA RAJ.—On the assurance of the Minister, I seek leave to withdraw the cut motion.

The cut motion was, by leave, withdrawn.

Mr. SPEAKER.—The next cut motion stands in the name of Sri Madiah. Some members have sent more than one cut motion. The next cut motion falls under Demand No. 30. The next cut motion may be moved.

ಶ್ರೀ ಎಂ. ಮಾದಯ್ಯ.—ಖೋತಾ ನಿರ್ಣಯಗಳನ್ನು ಚರ್ಚೆ ಮಾಡುವುದಕ್ಕೆ one by one ತೆಗೆದುಕೊಳ್ಳಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ಅಧ್ಯಕ್ಷರಿಗೆ ವಂದಿಸುತ್ತೇನೆ.

Mr. SPEAKER.—You have a right to it, as per rules. You need not thank the Chair for that purpose.

Appointment of stipendiary village officers.

***Sri M. MADIAH.**—Sir, I beg to move :

> "That the demand under the head '7. Land Revenue b. charges on account of land revenue collections' for Rs. 21,79,600 be reduced by Rs. 100 (to raise a discussion on the urgent need for appointing stipendiary minor village officers, namely, thoties, talaries and nirganties after confirming the service inam lands held by them at present)."

ಸ್ವಾಮಿ, ಗ್ರಾಮ ನೌಕರರಿಗೆ ಮಿರಾಸೆ ಕೊಡತಕ್ಕ ವಿಚಾರ ಮೊದಲಿನಿಂದಲೂ ಪದೇ ಪದೇ ಈ ಸಭೆಯ ಮುಂದೆ ಬರುತ್ತಾ ಇರತಕ್ಕದ್ದು ತಮಗೆ ಗೊತ್ತಿರತಕ್ಕ ವಿಚಾರ. ಆದರೆ ಈಗ ನಾನು ತಂದಿರತಕ್ಕ ನಿರ್ಣಯ ಏನು ಎಂಬುದನ್ನು ತಿಳಿಸುತ್ತೇನೆ. 1943ನೇ ಇಸವಿಯೊಳಗೆ ಒಂದು ಸ್ಪೆಷಲ್ ಕಮಿಟಿ ನೇಮಕಮಾಡಿದಾಗ ಯಾವ ರೀತಿ ಮಾಡಿದರು ಎಂದರೆ ಆಗಲೂ ಸಹ ಒಂದು ಕಟ್ ಮೋಷನ್ ಬಂದು ಅದರ ಮೇಲೆ ಸ್ಪೆಷಲ್ ಕಮಿಟಿ ನೇಮಕಮಾಡಿ ಅವರ ವರದಿಯನ್ನು ತರಿಸಿಕೊಂಡು ಆರ್ಡರ್‌ಮಾಡಿದರು. ಆಗಿದ್ದ ಪರಿಸ್ಥಿತಿಗೆ ಅನುಸಾರವಾಗಿ ತೋರಿಸತಕ್ಕ ರಿಯಾಯಿತಿಗಳು ಯಾವ ರೀತಿ ಆಗಬೇಕೆಂಬ ವಿಧಾನವನ್ನು ಗೊತ್ತುಮಾಡಿ ಆ ರೀತಿ ಸಲ್ಲಬೇಕು, ಅಗತ್ಯವಿದ್ದರೆ 5 ವರ್ಷಗಳ ಮೇಲೆ ಪುನಃ ಪರಿಶೀಲನೆಗೆ ತೆಗೆದುಕೊಳ್ಳಬಹುದೆಂದು ಸಮಿತಿಯವರು ಸಲಹೆಮಾಡಿದರು. ಆಗ ಅದರಂತೆ ಸರ್ಕಾರದವರು ಒಪ್ಪಿಕೊಂಡು ಆರ್ಡರ್‌ಮಾಡಿದರು. ಈಗ ನಾನು ಹೇಳುತ್ತಾಯಿರುವುದು ಏನೆಂದರೆ, ಪ್ರತಿಯೊಂದು ಗ್ರಾಮದಲ್ಲೂ ಸಹ ಗ್ರಾಮಾಧಿಕಾರಿಗಳು ಮಿರಾಸೆ ತೆಗೆದುಕೊಳ್ಳಬೇಕೆಂದು ಮಾಡಿ, ಆ ವರ್ಷದಲ್ಲಿ ಯಾರು ಯಾರು ಜಮೀನುದಾರರು ರೂಲ್ಸಿಗನುಶಾರವಾಗಿ ಸಲ್ಲಿಕೆ ಕೊಟ್ಟಿದ್ದಾರೆ, ತಖ್ತೆಯಲ್ಲಿರುವಷ್ಟು ಪ್ರಮಾಣದ ಸಲ್ಲಿಕೆ ಆ ನೌಕರರಿಗೆ ಸಲ್ಲಿಸಿದ್ದಾರೆ ಎಂಬು

ದನ್ನು ಪರಿಶೀಲನೆ ಮಾಡಿ,ಸಲ್ಲಿಸಿದ್ದಲ್ಲಿ ಕ್ರಮ ಜರುಗಿಸಬೇಕೆಂದೂ ಮತ್ತು ಸಲ್ಲಿಸದೇ ಇದ್ದಪಕ್ಷದಲ್ಲಿ ಆಯಾ ಜಮಾಬಂದಿ ಕಾಲದಲ್ಲಿ ಆಯಾ ರಿಯಾಯಿತಿಗಳು ಸಲ್ಲುವಂತೆ ಮಾಡಬೇಕೆಂದೂ ಆಗ ಆರ್ಡರ್ ಮಾಡಿದರು. ಇದು ಬಹಳ ಪ್ರಾಮುಖ್ಯವಾದ ಆರ್ಡರ್. ಇದೇ ವರದಿಯ ಮುಖ್ಯವಾದ ಅಂಶ. ಇನ್ನೂ ಕೆಲವು ಮಾರ್ಪಾಡುಗಳನ್ನು ಮಾಡಿದರು. ಅವು ಅಷ್ಟು ಪ್ರಾಧಾನ್ಯವಾದುವಲ್ಲದೇ ಇದ್ದರೂ ನಾನು ಸರ್ಕಾರದವರ ಮತ್ತು ಇಲಾಖೆಯ ಮುಖ್ಯಾಧಿಕಾರಿಗಳ ಗಮನಕ್ಕೆ ತರಬೇಕಾದ ವಿಚಾರ ಏನೆಂದರೆ, ಆ ಆರ್ಡರ್ ಪ್ರಕಾರ ಆಗಿಲ್ಲ ಎಂಬುದೇ ಇವೊತ್ತು ನಾನು ತಂದಿರುವ ಕಟ್‌ಮೋಷನ್ನಿನ ಉದ್ದೇಶ. ಆ ಆರ್ಡರ್ ಪ್ರಕಾರ ಎಂದರೆ 24ನೇ ನವಂಬರ್ 1946ನೇ ಇಸವಿಯೊಳಗೆ ಆದ ಗೌವರ್ನಮೆಂಟ್ ಆರ್ಡರ್ ಪ್ರಕಾರ—enclosures (A) (B) (C) ಎಂದು ಮಾಡಿದ್ದರು—ಅದರಂತೆ ನಡೆಸದೇಯಿರುವುದರಿಂದ ಸಮಿತಿಯವರು ಯಾವ ಶಿಫಾರಸು ಮಾಡಿದರೋ ಆ ಶಿಫಾರಸ್ಸಿನಿಂದ ಆಗಬೇಕಾಗಿದ್ದ ಫಲ ಆಗಿಲ್ಲ. ಇದರಿಂದ ಬಹಳ ದಿವಸದಿಂದ ಏನು ಕೊರತೆ ಇತ್ತೋ ಆ ಕೊರತೆ ಇವೊತ್ತೂ ಇದೆ. ಅದು ನಿವಾರಣೆಯಾಗಬೇಕಾದರೆ ಈಗಿರತಕ್ಕ ಹೆರಿಡಿಟೆರಿ ಸಿಸ್ಟಂ ವಜಾ ಮಾಡಿ ಸ್ಟೈಪೆಂಡರಿ ಆಫೀಸರುಗಳನ್ನು ನೇಮಕಮಾಡಬೇಕೆಂದು ಈಗ ಕೇಳಿಕೊಂಡಿದ್ದೇನೆ.

ಸರ್ಕಾರದವರು ಮನಸ್ಸುಮಾಡಿದರೆ ಏನು ಬೇಕಾದರೂ ಕೊಡಬಹುದು. ಅದಕ್ಕೆ ಫೀಸಿಬಲ್ ಸೆಲ್ಯೂಷನ್ ನಾನು ಸೂಚಿಸುತ್ತೇನೆ. ಮೈಸೂರು ಸಂಸ್ಥಾನದಲ್ಲಿ ಸುಮಾರು 26 ಸಾವಿರ ಜನ ಗ್ರಾಮ ನೌಕರರಿದ್ದಾರೆ. ಅವರಿಗೆ ಸುಮಾರು 64 ಸಾವಿರ ಎಕರೆ ಜಮೀನಿನಲ್ಲಿ ಮಿರಾಸೆ ಕೊಡಬೇಕೆಂದು ಗೊತ್ತಾಗಿದೆ. ಆ ಪೈಕಿ ಅನೇಕರು ಕೊಡಬೇಕಾದ ಮಿರಾಸೆಯ ಪ್ರಮಾಣ ಮಾಲೀಕರಿಂದ ಸಲ್ಲದಿರುವುದರಿಂದ ನೇರವಾಗಿ ಅವರಿಗೆ ಧಾನ್ಯವನ್ನು ತೆಗೆದುಕೊಳ್ಳಲು ಸಾಧ್ಯವಿಲ್ಲದಿರುವುದರಿಂದ ಅವರಿಗಿರುವ ಆಲ್ಟರ್ನೇಟಿವ್ ಪ್ರಪೋಸಲ್ ಹಣದ ರೂಪದಲ್ಲಿ ಅವರಿಗೆ ಬರಬೇಕಾದ್ದನ್ನು ವಸೂಲು ಮಾಡಿಕೊಡುವುದು ಅಥವಾ ಹಾಗೆ ಮಾಡಲು ಅವಕಾಶವಿಲ್ಲದಿದ್ದರೆ ಸ್ಟೈಪೆಂಡರಿಯಾಗಿ ಗ್ರಾಮ ನೌಕರರನ್ನು ಗೊತ್ತುಮಾಡುವುದು. ಹಣಕಾಸಿನ ಮುಗ್ಗಟ್ಟಿನಿಂದ ಸಂಬಳ ಕೊಡಲು ಸಾಧ್ಯವಿಲ್ಲವೆಂದು ಹೇಳುವುದಾದರೆ ಖಂಡಿತವಾಗಿಯೂ ಕೂಡ ಪ್ರಾಡ್ಯೂಸಿಗೆ ಮಾರ್ಕೆಟ್ ಬೆಲೆಯೇನಿರುತ್ತದೋ ಅಷ್ಟನ್ನು ರೈತರಿಂದ ವಸೂಲುಮಾಡಿ ಈ ನೌಕರರಿಗೆ ಸಲ್ಲಿಸಬೇಕು. ಬೇರೆ ಮಾರ್ಗವಿದ್ದರೆ ಕಂಡುಹಿಡಿದು ಹೇಗಾದರೂ ಅವರಿಗೆ ಮಿರಾಸೆ ಸಲ್ಲುವಂತೆ ಮಾಡಬೇಕು.

ಇನ್ನೊಂದು ವಿಷಯ. ಪ್ರತಿಯೊಂದು ಸಾರಿಯೂ, ಈ ವಿಷಯ ಬಂದಾಗಲೆಲ್ಲಾ, ಸಂಬಳ ಕೊಟ್ಟರೆ ಸರ್ಕಾರಕ್ಕೆ ಜಾಸ್ತಿ ಖರ್ಚಾಗುತ್ತದೆಂದು ಹೇಳುತ್ತಾರೆ; ಸುಮಾರು 20 ಅಥವಾ 23 ಲಕ್ಷದ ಮೇಲೆ ಖರ್ಚಾಗುವುದೆಂದು ಹೇಳುತ್ತಾರೆ. ಆದರೆ ಅನೇಕ ಸುಧಾರಣೆಗಳನ್ನು ಮಾಡುವಾಗ ಇಷ್ಟು ಹಣ ಕೊಡುವುದಕ್ಕೆ ಸರ್ಕಾರ ಹಿಂಜರಿಯುವುದಿಲ್ಲವೆಂದು ನಂಬಿದ್ದೇನೆ. ಸರ್ಕಾರದಲ್ಲಿ ಕೆಲಸಮಾಡುವ ಅನೇಕ ವಿಧವಾದ ನೌಕರರ ವಿಚಾರದಲ್ಲಿ ಅನೇಕ ಸುಧಾರಣೆಗಳನ್ನು ಮಾಡುತ್ತಿದ್ದೇವೆ. ಈಗ ನಾನ್‌ಗೆಜೆಟೆಡ್ ನೌಕರರಿಗೆ, ಕಾರ್ಖಾನೆಗಳಲ್ಲಿರುವ ಕೂಲಿಗಾರರಿಗೆ ಮುಂತಾದವರಿಗೆ ಅನುಕೂಲ ಮಾಡಿದ್ದೀರಿ. ಆದರೆ ಇಡೀ ರೆವೆನ್ಯೂ ಇಲಾಖೆಯ ತಳಹದಿಯಾಗಿರುವ ಮೈನರ್‌ವಿಲೇಜ್ ಆಫೀಸರುಗಳ ವರಮಾನ ಮಾತ್ರ ಶತಮಾನಗಳಿಂದ ಮೊದಲು ಹೇಗಿತ್ತೋ ಹಾಗೆಯೇ ಇದೆ. ಅವರಿಗೆ ಹೆಚ್ಚಾಗಿ ಕೊಡಬೇಕಾದ ಕಾಲ ಈಗ ಬಂದಿದೆ. ಇದಕ್ಕೆ ಸಂಬಂಧಪಟ್ಟ ಮಂತ್ರಿಗಳು ಶ್ರೀ ಕಡಿದಾಳ್ ಮಂಜಪ್ಪನವರೇ ಆಗಿರುವಾಗ, ಬಡವರ ಬಂಧು ಎಂದು ಅವರು ಹೆಸರು ತೆಗೆದುಕೊಂಡಿರುವಾಗ, ಜನಸಾಮಾನ್ಯರ ಪ್ರಾಬ್ಲಂಗಳನ್ನು ಅವರು ಎಷ್ಟುಮಟ್ಟಿಗೆ ಪರಿಹರಿಸುತ್ತಿದ್ದಾರೋ ಅದೇ ರೀತಿಯಲ್ಲಿ ಇದನ್ನೂ ಪರಿಹರಿಸುತ್ತಾರೆ, ಇದಕ್ಕೆ ಪರಿಣಾಮಕಾರಿಯಾದ ಒಂದು ರೆಮೆಡಿ ಕಂಡುಹಿಡಿಯುತ್ತಾರೆ ಎಂದು ನಾನು ನಂಬಿದ್ದೇನೆ. ಇತರ ಸಮಸ್ಯೆಗಳೆಷ್ಟೇ ಇದ್ದರೂ ಕೂಡ ಇದಕ್ಕೆ ಮನಸ್ಸುಕೊಟ್ಟು ತಕ್ಕ ವ್ಯವಸ್ಥೆ ಮಾಡಬೇಕು. ಮನಸ್ಸಿದ್ದರೆ ಮಾರ್ಗ ಎಂಬಂತೆ ಈ ಸಮಸ್ಯೆಯನ್ನು ಇತ್ಯರ್ಥಪಡಿಸದಿದ್ದರೆ ಸಾಧ್ಯವಿಲ್ಲ. ಬಡ ನೌಕರರನ್ನು 'ನೀವೇ ಹೋಗಿ ಪ್ರಾಡ್ಯೂಸ್ ರೂಪವಾಗಿ ಮಿರಾಸೆ ತೆಗೆದುಕೊಳ್ಳಿ' ಎಂದು ಮಾಡಿರುವ ಆರ್ಡರೇ ಇದರ ಸಂಬಂಧದಲ್ಲಾಗಿರುವ ತೊಂದರೆಗೆ ಕಾರಣವಾಗಿದೆ. ತಮಗೆ ಗೊತ್ತಿರುವ ಹಾಗೆ, ದಿನ ದಿನಕ್ಕೆ ತೆರಿಗೆ ಹೆಚ್ಚುತ್ತಿರುವುದರಿಂದ ಜನರು ಖಂಡಿತ ಕೊಡಬೇಕಾದ್ದನ್ನು ಕೊಡಲು ಹಿಂತೆಗೆಯುತ್ತಾರೆ. ಈ ವಿಚಾರ ಹೆಚ್ಚಾಗಿ ಹೇಳಬೇಕಾದ ಅಗತ್ಯವಿಲ್ಲ. ಪ್ರಾಡ್ಯೂಸ್ ರೂಪವಾಗಿ ವಸೂಲುಮಾಡಿ ತೆಗೆದುಕೊಳ್ಳಲು ಸಾಧ್ಯವಿಲ್ಲದಿರುವುದರಿಂದ ಮಾರ್ಕೆಟ್ ವ್ಯಾಲ್ಯೂ ಕೊಡಿಸಲು ಸರ್ಕಾರ ಯಾವ ರೀತಿಯಲ್ಲಾದರೂ ಏರ್ಪಾಡು ಮಾಡಬೇಕು. ಲ್ಯಾಂಡ್ ರೆವೆನ್ಯೂ ಕೋಡಿನಲ್ಲಿ ವಿಧಾಯಕಮಾಡಿರುವ ರೀತಿಯಲ್ಲಿ ಬರಬೇಕಾದ್ದನ್ನು ವಸೂಲು ಮಾಡಿಕೊಡಬೇಕು. ಈಗ ಸರ್ಕಾರದವರು ಇನಾಂ ಜಮೀನುಗಳಿಗೆ, ಪರ್ಸನಲ್ ಇನಾಂಗಳಿಗೆ ಶಾಸನ ಮಾಡುವಾಗ ಸುಮಾರು 18-20 ಲಕ್ಷ ರೂಪಾಯಿಗಳನ್ನು ಪರಿಹಾರ ರೂಪವಾಗಿ ಕೊಡಲು ಒಪ್ಪಿರುತ್ತಾರೆ. ಹಾಗೆಯೇ ಇಂಥ ಅನೇಕ ಸಂದರ್ಭಗಳಲ್ಲಿ ಹಿಂಜರಿಯುತ್ತಿಲ್ಲ. ಅದೇ ರೀತಿಯಲ್ಲಿ ಹೇಗಾದರೂ ಮಾಡಿ ಈ ಬಡ ನೌಕರರ ವಿಚಾರದಲ್ಲಿ ಒಂದು ಪರಿಹಾರ ಮಾರ್ಗ ಕಂಡುಹಿಡಿದು ಅವರ ಕಷ್ಟ ನಿವಾರಣೆಮಾಡಿ ಸರ್ಕಾರದ ಕೆಲಸ ಹೆಚ್ಚಿನ ರೀತಿಯಲ್ಲಿ ಆಗುವಹಾಗೆ ಮಾಡಬೇಕೆಂದು ಪ್ರಾರ್ಥನೆ ಮಾಡುತ್ತೇನೆ.

ನಾನು ಹೇಳುತ್ತಿರುವ ಗ್ರಾಮ ನೌಕರರಲ್ಲಿ ಮೂರು ತರಹ ನೌಕರರಿದ್ದಾರೆ. ತೋಟಿಗಳು, ತಳವಾರರು, ನೀರಗಂಟಿಗಳು ಎಂಬವರೇ ಆ ಮೂರು ತರಹ ನೌಕರರು. ಮೂರು ವರ್ಷಗಳಲ್ಲಾದರೂ ಮಾಡಿ ಒಂದೊಂದು ಪಂಗಡದವರಿಗೆ ಒಂದೊಂದು ವರ್ಷ ಸಹಾಯ ಮಾಡಿದರೆ ಅಷ್ಟೇನೂ ಕಷ್ಟವಾಗುವುದಿಲ್ಲ. ಆದ್ದರಿಂದ ಇದನ್ನು ಆದಷ್ಟು ಯೋಚನೆಮಾಡಿ ಸಂಬಳದ ರೂಪದಲ್ಲಿ ಈ ನೌಕರರಿಗೆ ಸಂಭಾವನೆ ನೀಡಿ ಅವರಿಗೆ ಖಾಯಮ್ಮಾಗಿ ವಂಶಪಾರಂಪರ್ಯವಾಗಿ ಬಂದಿರುವ ಜಮೀನನ್ನು ಉಳಿಸಿ ಸಂಬಳವನ್ನು ಮದರಾಸು, ಬೊಂಬಾಯಿ ಮುಂತಾದ ಪ್ರಾಂತಗಳಲ್ಲಿ ಕೊಡುತ್ತಿರುವಂತೆ ಕೊಟ್ಟು ಸಹಾಯ ನೀಡಬೇಕೆಂದು ಪ್ರಾರ್ಥಿಸಿ ಈ ಖೋತಾ ಸೂಚನೆಯನ್ನು ಸಭೆಯ ಮುಂದಿಡುತ್ತೇನೆ.

Mr. SPEAKER.—Cut motion moved:

"That the demand be reduced by Rs. 100."

ಶ್ರೀ ಕಡಿದಾಳ್ ಮಂಜಪ್ಪ.—ಅಧ್ಯಕ್ಷರೇ, ಸ್ವಾಮಿ, ಈ ಪ್ರಶ್ನೆ ನಾನಾ ರೂಪದಲ್ಲಿ ಈ ಸಭೆಯಮುಂದೆ ಪದೇ ಪದೇ ಬರುತ್ತಲೇ ಇದೆ. ಪದೇಪದೇ ಸರ್ಕಾರದವರು ಉತ್ತರವನ್ನು ಕೊಡುತ್ತಿದ್ದಾರೆ. ಅಲ್ಲಲ್ಲ

(ಶ್ರೀ ಕಡಿದಾಳ್ ಮಂಜಪ್ಪ.)

ಕೆಲವು ಲೋಪದೋಷಗಳಿದ್ದರೂ, ಕೆಲವರಿಗೆ ಮಿರಾಸೆ ಸರಿಯಾಗಿ ಸಿಕ್ಕದಿದ್ದರೂ ಕೂಡ ಒಟ್ಟಿನಲ್ಲಿ ಹೇಳುವುದಾದರೆ ಸಾಮಾನ್ಯವಾಗಿ ಈಗಿರುವ ಪದ್ಧತಿ ತೃಪ್ತಿಕರವಾಗಿ ನಡೆದುಕೊಂಡು ಬರುತ್ತಿದೆ. ಇತರ ಗ್ರಾಮಾಧಿಕಾರಿಗಳ ಪ್ರಶ್ನೆಯೊಡನೆ ಈ ಪ್ರಶ್ನೆಯೂ ಹೊಂದಿಕೊಂಡಿದೆ. ಅವರುಗಳಿಗೆ ಈಗ ಹಕ್ಕುದಾರಿಯನ್ನು ತೆಗೆದುಹಾಕಿ ಸ್ಟೈಪೆಂಡರಿ ಗ್ರಾಮಾಧಿಕಾರಿಗಳನ್ನು ನೇಮಕ ಮಾಡುವುದಾದರೆ, ಅವರಿಗಿರುವ ಇನಾಂತಿಗಳನ್ನು ಕ್ಯಾನ್ಸಲ್ ಮಾಡುವ ಪರಿಸ್ಥಿತಿ ಬಂದರೆ, ಅವರಿಗಿರುವ ಇನಾಂ ಜಮೀನುಗಳನ್ನು ವಜಾ ಮಾಡುವುದಾದರೆ, ಅದಕ್ಕೆ ಬಹಳ ಮಟ್ಟಿಗೆ ಗ್ರಾಮ ನೌಕರರು ಒಪ್ಪಲಾರರು.

ಆಮೇಲೆ ಸಂಬಳ ಕೊಡಬೇಕೆಂದು ಹೇಳಿದರೆ ಕೊನೆಯಪಕ್ಷ ವರ್ಷಕ್ಕೆ 30 ಲಕ್ಷ ರೂಪಾಯಿಗಳು ಬೇಕಾಗುತ್ತವೆ. ಅನೇಕ ಸಂದರ್ಭಗಳಲ್ಲಿ ಮಿರಾಸೆಗಳನ್ನು ಸಲೀಸಾಗಿ ರೈತರು ಕೊಡದೆ ತೊಂದರೆಯಾಗುತ್ತಿದೆ, ಅದನ್ನು ಯಾವರೀತಿಯಲ್ಲಾದರೂ ಕ್ರಮಪಡಿಸಬೇಕು ಎಂದು ಹೇಳಿದರು. ಈಗಿರುವ ಪದ್ಧತಿ ಪ್ರಕಾರ ಮಿರಾಸೆ ಕೊಡದಿದ್ದರೆ ಯಾರಿಗೆ ಅದು ಬರಬೇಕಾಗಿತ್ತೋ ಅವರು ರೆವಿನ್ಯೂ ಅಧಿಕಾರಿಗಳಿಗೆ ಅರ್ಜಿ ಹಾಕಿದರೆ ಆ ಅಧಿಕಾರಿಗಳು ಅದನ್ನು ವಸೂಲು ಮಾಡಿಕೊಡುವುದಕ್ಕೆ ಅವಕಾಶವಿದೆ. ಈಗ ಎಲ್ಲ ವಿಷಯಗಳಿಗೂ ಕೂಡ ನಿರ್ದಿಷ್ಟವಾಗಿ ಜವಾಬು ಹೇಳುವುದಿಲ್ಲ. ಈ ವಿಚಾರವನ್ನು ಬಹಳ ಸಹಾನುಭೂತಿಯಿಂದ ವಿಮರ್ಶೆ ಮಾಡುತ್ತೇವೆ. ಈ ಪ್ರಶ್ನೆ ಮತ್ತು ಇದಕ್ಕೆ ಹೊಂದಿಕೊಂಡಿರುವ ಇತರ ಗ್ರಾಮಾಧಿಕಾರಿಗಳ ಸಮಸ್ಯೆ ಇವೆಲ್ಲವನ್ನೂ ಪರಿಶೀಲಿಸುತ್ತೇವೆ ಎಂದು ಹೇಳುವುದರ ಮೇಲೆ ಮಾನ್ಯ ಸದಸ್ಯರಾದ ಶ್ರೀಮಾನ್ ಮಾದಯ್ಯನವರು ಅವರ ಕತ್ತರಿ ನಿರ್ಣಯವನ್ನು ವಾಪಸು ಪಡೆಯುತ್ತಾರೆಂದು ನಂಬಿದ್ದೇನೆ.

ಶ್ರೀ ಕೆ. ಪ್ರಭಾಕರ್.—ಮಿರಾಸೆ ಸರಿಯಾಗಿ ಸಲ್ಲಿಸಿ ವರದಿ ಮಾಡಿ ಎಂದು ಅಧಿಕಾರಿಗಳಿಗೆ ತಿಳಿಸಿದರೆ ಅವರು ಹಾಗೆ ಮಾಡುವುದಿಲ್ಲವೆ ?

ಶ್ರೀ ಕಡಿದಾಳ್ ಮಂಜಪ್ಪ.—ಆಗಬಹುದು.

ಶ್ರೀ ಎಂ. ಮಾದಯ್ಯ.—ನನ್ನ ಕತ್ತರಿ ನಿರ್ಣಯವನ್ನು ವಾಪಸು ತೆಗೆದುಕೊಳ್ಳಲು ಅನುಮತಿ ಬೇಡುತ್ತೇನೆ.

The cut motion was, by leave, withdrawn.

Land grants to Scheduled Castes.

*Sri M. MADIAH.—I beg to move :

> "That the demand under the head '7 Land Revenue' for Rs. 33,69,000 be reduced by Rs. 100 (to raise a discussion with regard to procedure followed in granting of lands to the applicants belonging to the Scheduled Castes in the State)."

ಸ್ವಾಮಿ, ನಾನು ಪ್ರಾರಂಭದಲ್ಲೇ ಮಾನ್ಯ ರೆವಿನ್ಯೂ ಮಂತ್ರಿಗಳನ್ನು ಹೃತ್ಪೂರ್ವಕವಾಗಿ ಅಭಿನಂದಿಸಬೇಕೆಂದು ಎದ್ದು ನಿಂತಿದ್ದೇನೆ. ಸರ್ಕಾರದವರು ಜನಸಾಮಾನ್ಯರ ಆರ್ಥಿಕ ಸ್ಥಿತಿಯನ್ನು ಉತ್ತಮಗೊಳಿಸಲು ಕೈಹಾಕಿರುವ ಒಂದು ಉನ್ನತವಾದ ವಿಷಯದಲ್ಲಿ, ಅದರ ನೀತಿಯ ವಿಚಾರದಲ್ಲಿ ಒಂದೆರಡು ಮಾತುಗಳನ್ನು ಹೇಳುತ್ತೇನೆ. ಜಮೀನುಗಳನ್ನು ಹಂಚಲು ಮಾಡಿರುವ ಆರ್ಡರಿನಲ್ಲಿರುವ ಸಣ್ಣಪುಟ್ಟ ಕೆಲವು ನ್ಯೂನತೆಗಳಿಂದ ಸರ್ಕಾರದ ಉದ್ದೇಶ ಎಷ್ಟೋ ಘನವಾಗಿದ್ದರೂ ಅದು ಸರಿಯಾಗಿ ಕಾರ್ಯರೂಪಕ್ಕೆ ಬರುತ್ತಿಲ್ಲ, ಅದಕ್ಕಾಗಿ ಕೆಲವು ಕಾರ್ಯಕ್ರಮ ಕೈಗೊಳ್ಳಬೇಕು. ಈಗ ಮಾಡಿರುವ ವ್ಯವಸ್ಥೆಯ ಜೊತೆಗೆ ದೇಶದಲ್ಲಿ ಎಲ್ಲೆಲ್ಲಿ ಸರ್ಕಾರಕ್ಕೆ ಸೇರಿದ ಯಾವ ಯಾವ ವಿಧವಾದ ಜಮೀನುಗಳಿವೆ ಯೆಂಬುದನ್ನು ಪಟ್ಟಿಮಾಡಬೇಕು. ಆ ರೀತಿಯಾಗಿ ರೆವೆನ್ಯೂ ಕಮೀಷನರು ಮತ್ತು ಡೆಪ್ಯುಟಿ ಕಮಿಷನರಿಂದ ಪಟ್ಟಿ ತಯಾರುಮಾಡಿಸಿ ತರಿಸಿ ಅದನ್ನು ತಾಲ್ಲೂಕಾಫೀಸುಗಳಲ್ಲಿ ಜನರಿಗೆ ದೊರೆಯುವಂತೆ ಏರ್ಪಾಡು ಮಾಡಬೇಕು. ಈಗ ತಾಲ್ಲೂಕು ಆಫೀಸಿನಲ್ಲಿ ಅಂಥ ಪಟ್ಟಿಯಿದೆಯೆಂದು ಹೇಳುವುದಾದರೂ ಅದು ಜನರಿಗೆ ಸುಲಭವಾಗಿ ದೊರೆಯುತ್ತಿಲ್ಲ. ಗ್ರಾಮಾಧಿಕಾರಿಗಳೂ ಸಹ ಸುಲಭವಾಗಿ ಅದನ್ನು ಕೊಡುತ್ತಿಲ್ಲ. ದಯವಿಟ್ಟು ಇಡೀ ದೇಶದಲ್ಲಿರುವ ಜಮೀನಿನಲ್ಲಿ ಎಷ್ಟು ಕಾಡುಮೇಡು ಇದೆ, ಫಾರೆಸ್ಟಿನಲ್ಲಿ ಗಿಡಗಳು ಬೆಳೆದಿರುವ ಜಮೀನೂ, ಫಾರೆಸ್ಟಿಗೆ ಅನುಕೂಲವಿಲ್ಲದ್ದೂ ಎಷ್ಟಿದೆ, ಸಾರ್ವಜನಿಕರಿಗೆ ಕೊಡಬಹುದಾದ ಜಮೀನೆಷ್ಟಿದೆ ಎಂಬುದನ್ನು ನೋಡಿ ಬಡಜನರಿಗೆ irrespective or caste or creed ಡಿಪ್ರೆಸ್ಡ್ ಕ್ಲಾಸಿನವರಿಗೆ ಮತ್ತು ಇತರ ಜನಾಂಗದವರಿಗೆ ಸರ್ಕಾರಿ ಆರ್ಡರುಪ್ರಕಾರ ಕೊಡಲು ಅನುಕೂಲಮಾಡಿ ಅಂಥ ಜಮೀನುಗಳ ಪಟ್ಟಿಯನ್ನು ಪ್ರತಿ ತಾಲ್ಲೂಕು ಆಫೀಸುಗಳಿಗೂ ಮತ್ತು ಗ್ರಾಮಗಳಿಗೂ ಹಂಚಿ ಸಾರ್ವಜನಿಕರಿಗೆ ಸುಲಭವಾಗಿ ಅದು ದೊರೆಯುವಂತೆ ಏರ್ಪಾಡುಮಾಡಬೇಕು.

ನಿಮ್ನ ತರಗತಿಯವರಿಗೆ ಜಮೀನುಗಳನ್ನು ಕೊಡುವ ವಿಚಾರದಲ್ಲೇ ಒಂದು ಸರ್ಕಾರಿ ಆಜ್ಞೆ ಇತ್ತೀಚೆಗೆ ಆಗಿದೆ. ಶೇಕಡ 20 ಭಾಗದಷ್ಟು ಜಮೀನನ್ನು ನಿಮ್ನ ತರಗತಿಯವರಿಗಾಗಿ ಮೀಸಲಾಗಿಡಬೇಕೆಂದು ಆ ಆಜ್ಞೆಯಲ್ಲಿ ಹೇಳಿದೆ. ಈ ಆಜ್ಞೆಯಾಗುವುದಕ್ಕೆ ಮೊದಲು 100 ಎಕರೆ ಜಮೀನಿಗೆ ಯಾರು ಅರ್ಜಿ ಹಾಕಿದರೂ ಕೊಡುತ್ತಿದ್ದರು. ಈಚೆಗೆ ಈ ಹೊಸ ಆರ್ಡರಾದ ಮೇಲೇನಾಗಿದೆಯೆಂದರೆ ಶೇಕಡ 20 ಭಾಗ ಮಾತ್ರ ನಿಮ್ನ ತರಗತಿಯವರಿಗೆ ಕೊಡುತ್ತೇವೆ, ಬಾಕಿಯಾದ್ದನ್ನು ಕೊಡುವುದಿಲ್ಲ ಎಂದು ಹೇಳುತ್ತಾರೆ. ಆದ್ದರಿಂದ ಈಗ ಪ್ರಿವೆನ್ಷನ್ ಆರ್ಡರು ಬಂದಹಾಗಾಗಿದೆ. ಜಮೀನಿಲ್ಲದ ನಿಮ್ನ ತರಗತಿಯವರಿಗೆ ಶೇಕಡ 75 ಭಾಗದ ಜಮೀನಿನಲ್ಲಿ ಅವಕಾಶ ಕೊಡುತ್ತಿಲ್ಲ. ಶೇಕಡ 20 ರಷ್ಟು ಮಾತ್ರ ಕೊಡುವುದು ಸಾಲದು, ಉಳಿದ ಜಮೀನಿನಲ್ಲೂ ಕೊಡಬೇಕಾದ್ದು ಅಗತ್ಯವಾಗಿದೆ. ಅನೇಕರಿಗೆ ಸಾಕಾದಷ್ಟು ಜಮೀನು ದೊರೆತಿಲ್ಲ. ಆದ್ದರಿಂದ not less than 20 % ಎಂದು ಸರ್ಕಾರಿ ಆರ್ಡರಿನಲ್ಲಿ ಸೇರಿಸಬೇಕು. ಡಿಪ್ರೆಸ್ಡ್ ಕ್ಲಾಸಿನವರಿಗೆ ಶೇಕಡ 20 ಭಾಗ ರಿಸರ್ವ್ ಮಾಡಿರುವುದಲ್ಲದೆ ಉಳಿದ ಜಮೀನಿನಲ್ಲೂ ಅವಕಾಶಕೊಡುವಂತೆ ಮಾಡಬೇಕು. ಈ ಕೊರತೆಯನ್ನು ಸರಿಪಡಿಸಬೇಕು. ಈ ವಿಚಾರವನ್ನು ಈಗಾಗಲೆ ಸಂಬಂಧಪಟ್ಟ ಅಧಿಕಾರಿಗಳ ಗಮನಕ್ಕೆ ತಂದಿದ್ದೆವು. ಈ ಸಂಬಂಧದಲ್ಲಿ ಏನು ವ್ಯವಸ್ಥೆ ಮಾಡಿದ್ದಾರೋ ಗೊತ್ತಿಲ್ಲ. ಇದನ್ನು ವಿಚಾರಮಾಡಿ ಸರಿಪಡಿಸಿ ಸಾಮಾನ್ಯವಾಗಿ ಎಲ್ಲೆಲ್ಲಿ ತೊಂದರೆಯಿದೆಯೋ ಅದನ್ನು ನಿವಾರಣೆಮಾಡಿ ಆಗಿರುವ ಆರ್ಡರಿನ ಫಲ ಎಲ್ಲರಿಗೂ ದೊರೆಯುವಂತೆ ಮಾಡಿ ಎಲ್ಲರೂ ಅನುಕೂಲ ಪಡೆಯುವಂತೆ ಏರ್ಪಾಡ ಮಾಡಬೇಕು. ಎಲ್ಲೆಲ್ಲಿ ಜಮೀನಿದೆಯೆಂಬ ಪಟ್ಟಿಯನ್ನು ಸಹ ಜನತೆಯ ಮುಂದಿಟ್ಟು ಅವರ ಆರ್ಥಿಕಸ್ಥಿತಿಯನ್ನು ಉತ್ತಮಪಡಿಸಲು ಅನುಕೂಲ ಪಡಿಸಿಕೊಡಬೇಕೆಂದು ಸೂಚಿಸಿ

ಈ ಖೋತಾ ಸೂಚನೆಯನ್ನು ಸಭೆಯ ಮುಂದಿಡು ತ್ತೇನೆ.

Mr. SPEAKER.—Cut motion moved:

"That the demand be reduced by Rs. 100."

ಶ್ರೀ ಕಡಿದಾಳ್ ಮಂಜಪ್ಪ.—ಸ್ವಾಮಿ ಅಧ್ಯಕ್ಷರೇ, ಮೊದಲಿದ್ದ ಸರ್ಕಾರದ ಆಜ್ಞೆಯ ಪ್ರಕಾರ ಸಾಧ್ಯ ವಿರುವಮಟ್ಟಿಗೂ ಕೂಡ ನಿಮ್ನವರ್ಗದವರಿಗೆ ಜಮೀನು ಹಂಚುವಾಗ ಪ್ರಾಶಸ್ತ್ಯ ಕೊಡಬೇಕೆಂದು ವಿಧಾಯಕ ವಾಗಿದೆ. ಒಂದು ವರ್ಷ ಗವರ್ನಮೆಂಟ್ ಆರ್ಡರ್ ಪ್ರಕಾರ ಅದರ ಕೆಲಸ ನೋಡಿದ್ದರಲ್ಲಿ ಅನೇಕ ಸಂದರ್ಭ ಗಳಲ್ಲಿ ನಿಮ್ನವರ್ಗದವರಿಗೆ ಸಿಕ್ಕುತ್ತಿರಲಿಲ್ಲವೆಂದು ಗೊತ್ತಾದ ಮೇಲೆ ಅದನ್ನು ನಿರ್ದಿಷ್ಟವಾಡಿ ಅವರಿಗೇ ಸ್ವಲ್ಪ ಮೀಸಲಾಗಿಡುವುದು ಸೂಕ್ತವೆಂದು ಭಾವಿಸಿ ಶೇಕಡ 20 ಭಾಗದ ಜಮೀನನ್ನು ನಿಮ್ನ ತರಗತಿ ಯವರಿಗೆ ಮೀಸಲಾಗಿಡಲು ಆರ್ಡರು ಮಾಡಿದ್ದಾರೆ. ಇದರ ಉದ್ದೇಶ ಎಲ್ಲರಿಗೂ ಜಮೀನು ದೊರೆಯ ಬೇಕೆಂಬುದೇ ಆಗಿದೆ. ಇತ್ತೀಚಿನ ಸರ್ಕಾರಿ ಆರ್ಡರು ಹಿಂದಿರುವುದನ್ನು ರದ್ದುಮಾಡುವುದಿಲ್ಲ. ನಿಮ್ನವರ್ಗ ದವರಿಗೆ ಸಾಕಾದಷ್ಟು ಜಮೀನು ಕೊಡಲು ಅವಕಾಶ ವಿದ್ದೇ ಇದೆ. ಈಗ ಕಾನೂನು ವಿಶದವಾಗಿದೆ. ಬೇಕಾದರೆ ಕಾನೂನು ಇಂಟರ್‌ಪ್ರಿಟೇಷನ್ ಸರಿಯಾ ಗಿಲ್ಲದಿದ್ದರೆ ಅದನ್ನು ವಿಶದೀಕರಿಸಲು ಅಡ್ಡಿಯಿಲ್ಲ. ಇಷ್ಟು ಹೇಳಿದ್ದರಮೇಲೆ ಮಾನ್ಯ ಸದಸ್ಯರು ತಮ್ಮ ಖೋತಾ ಸೂಚನೆಯನ್ನು ವಾಪಸು ತೆಗೆದುಕೊಳ್ಳು ತ್ತಾರೆಂದು ನಂಬಿದ್ದೇನೆ.

Sri M. MADIAH.—I seek leave to withdraw my cut motion.

The cut motion was, by leave, withdrawn.

---

2 P.M.

Audit of Villages' Revenue Accounts.

ಶ್ರೀ ಎಸ್. ಎಂ. ಲಿಂಗಪ್ಪ (ಕೃಷ್ಣರಾಜಪೇಟೆ).—ಸ್ವಾಮಿ, ನಾನು ಸೂಚಿಸಬೇಕೆಂದಿರುವ ಖೋತಾ ಸೂಚನೆಯು ಈ ರೀತಿ ಇದೆ:

"The demand under the head '7 Land Revenue' for Rs. 33,69,000 be reduced by Rs. 100 (to raise a debate on the necessity of appointing auditors to audit the revenue accounts of villages misappropriated by the village officers)."

ಸ್ವಾಮಿ, ಸಂಸ್ಥಾನದಲ್ಲಿ, ಅದರಲ್ಲಿಯೂ ಮಂಡ್ಯ ಜಿಲ್ಲೆ ಯಲ್ಲಿ ರೈತರು ಸರ್ಕಾರಕ್ಕೆ ಕೊಟ್ಟಂಥ ಕಂದಾಯದ ಹಣ ದುರುಪಯೋಗವಾಗಿರತಕ್ಕಂಥ ಅಂಶ ಮಾನ್ಯ ಮಂತ್ರಿಗಳಿಗೂ ತಿಳಿದಿರುವ ಅಂಶವೇ ಆಗಿದೆ. ಅದ ರಲ್ಲಿಯೂ ವಿಶ್ವೇಶ್ವರಯ್ಯ ನಾಲಾ ಪ್ರದೇಶ ಮತ್ತು ಉಳಿದ ಇತರ ಪ್ರದೇಶದಲ್ಲಿರುವಂತೆಯೇ ಕೃಷ್ಣರಾಜ ಪೇಟೆ ತಾಲ್ಲೂಕಿನಲ್ಲಿಯೂ ಸುಮಾರು ಒಂದು ಲಕ್ಷಕ್ಕೆ ಮೇಲ್ಪಟ್ಟ ಹಣ ದುರುಪಯೋಗವಾಗಿದೆ. ಇದರ ಬಗ್ಗೆ ಲೆಕ್ಕವನ್ನು ತನಿಖೆ ಮಾಡಿಸಿ, ಆಡಿಟ್ ಮಾಡಿಸಿ, ರೈತರು ಎಷ್ಟು ಹಣವನ್ನು ಪಾವತಿ ಮಾಡಿರುತ್ತಾರೋ ಅಷ್ಟನ್ನು ವಜಾ ಮಾಡಿಕೊಂಡು ಅವರು ಇನ್ನು ಎಷ್ಟು ಬಾಕಿ ಕೊಡಬೇಕೆಂಬ ಬಗ್ಗೆ ಒಂದು ನಿಖರವಾದ ಲೆಕ್ಕ ವನ್ನು ಕೊಡಬೇಕೆಂಬ ಬಗ್ಗೆ ಸರ್ಕಾರಕ್ಕೆ ರೈತರು ಅನೇಕ ಬಾರಿ ಅರ್ಜಿ ಸಲ್ಲಿಸಿದ್ದರೂ ಸಹ ಇಂದಿನವರೆಗೆ ಏನೊಂದು ಏರ್ಪಾಡನ್ನೂ ಮಾಡಿರುವುದಿಲ್ಲ. ಬಡ ರೈತರಿಂದ ಗ್ರಾಮ ನೌಕರರು ಕಂದಾಯ ವಸೂಲು ಮಾಡಿ ಹತ್ತುವರ್ಷ ಕಾಲವಾಗಿದ್ದರೂ ಇಂದಿನವರೆಗೆ ಆ ಹಣ ಸರ್ಕಾರಕ್ಕೆ ಸಂದಾಯವಾಗಿಲ್ಲದೆ ಈ ರೀತಿ ರೈತರನ್ನು ಹಗಲು ದರೋಡೆಯಿಂದ ಜೀಗ ತಪ್ಪಿಸಲು ಸರ್ಕಾರದವರು ತೀವ್ರ ಕಾರ್ಯಕ್ರಮ ಕೈಗೊಳ್ಳ ಬೇಕು. ಈ ದೃಷ್ಟಿಯಿಂದ ಸರ್ಕಾರದವರು ಯಾವ ಯಾವ ಗ್ರಾಮಗಳಲ್ಲಿ ಹಣ ದುರುಪಯೋಗವಾಗಿ ದೆಯೋ ಅಂಥ ಗ್ರಾಮಗಳ ಲೆಕ್ಕವನ್ನು ತನಿಖೆ ಮಾಡಲು ಕೂಡಲೇ ಆಡಿಟರನ್ನು ನೇಮಕ ಮಾಡಿ ರೈತರ ಅಭಿವೃದ್ಧಿಗೆ ಸಹಾಯಕರಾಗಬೇಕೆಂದು ಕೋರಿ ಈ ಖೋತಾ ಸೂಚನೆಯನ್ನು ಸಭೆಯ ಮುಂದೆ ಮಂಡಿ ಸುತ್ತೇನೆ.

Mr. SPEAKER.—Cut motion moved:

"That the demand be reduced by Rs. 100."

*ಶ್ರೀ ಎಂ. ಮಾದಯ್ಯ.—ಸ್ವಾಮಿ, ನಾನು ಈ ಖೋತಾ ಸೂಚನೆಯನ್ನು ಸಮರ್ಥಿಸುತ್ತೇನೆ. ಅನೇಕ ಗ್ರಾಮಗಳಲ್ಲಿ ರೈತರು ಕಂದಾಯದ ಬಗ್ಗೆ ಹಣ ಪಾವತಿ ಮಾಡಿರುತ್ತಾರೆ. ಆದರೆ ಆ ಹಣ ಸರ್ಕಾರಕ್ಕೆ ಸಂದಾಯವಾಗಿಲ್ಲ. ಈ ವಿಚಾರ ಹಣ ಪಾವತಿ ಮಾಡಿದ ರೈತರ ತಿಳಿವಳಿಕೆಗೆ ಬಂದಿಲ್ಲ. ಅನೇಕ ಗ್ರಾಮಾಧಿಕಾರಿಗಳು ಈ ಹಣವನ್ನು ದುರುಪಯೋಗ ಪಡಿಸಿಕೊಂಡು ಇದರಬಗ್ಗೆ ಲೆಕ್ಕಪತ್ರಗಳನ್ನು ಹಾಳು ಮಾಡಿರುತ್ತಾರೆ. ರೈತರು ಪಾವತಿ ಮಾಡಿರುವ ಹಣದ ಬಾಬಿನಲ್ಲಿ ರೆವೆನ್ಯೂ ಬಾಬಿಗೆ ಸಲ್ಲಿಸಿರುವುದು, ರಿಕಾರ್ಡ್ ಆಫ್ ರೈಟ್ಸ್ ಬಾಬಿಗೆ ಸಲ್ಲಿಸಿರುವುದು, ಟ್ಯಾಂಕ್ ಕಂಟ್ರಿಬ್ಯೂಷನ್‌ಗೆ ಸಲ್ಲಿಸಿರುವುದು—ಈ ರೀತಿ ನಾನಾ ಬಾಬುಗಳು ಸೇರಿರುತ್ತವೆ. ಈ ಎಲ್ಲಾ ಐಟಂಗಳ ಲೆಕ್ಕ ವಿವರಣೆಗಳು ಅನೇಕ ಗ್ರಾಮಗಳಲ್ಲಿ ಹಾಳಾಗಿ ಹೋಗಿವೆ. ಇದು ಯಾವ ರೀತಿ ಆಯಿತು, ಯಾವ ಯಾವ ಗ್ರಾಮಾಧಿಕಾರಿಯ ಕಾಲದಲ್ಲಿ ಎಷ್ಟೆಷ್ಟು ಆಯಿತು, ಯಾರು ಯಾರು ಎಷ್ಟರಮಟ್ಟಿಗೆ ಜವಾಬ್ದಾರರು ಎಂಬ ಬಗ್ಗೆ ತೀವ್ರ ಕಾರ್ಯಕ್ರಮ ಇದುವರೆಗಾಗಲೇ ಸರ್ಕಾರ ಕೈಗೊಳ್ಳಬೇಕಾಗಿತ್ತು. ಆದರೆ ಹಾಗೆ ಮಾಡಿಲ್ಲ. ಈಗೇನೋ ಈ ಹೊಸ ರೆವೆನ್ಯೂ ಕಮೀಷನರು ಬಂದಮೇಲೆ ಈಗಿನ ದಕ್ಷತೆ ಸ್ವಲ್ಪಮಟ್ಟಿಗೆ ಹೆಚ್ಚಿದೆ. ಕೆಲವು ಗ್ರಾಮಾಧಿಕಾರಿಗಳು ಇವರ ಹೆಸರು ಕೇಳಿದರೆ ಹೆದರುತ್ತಾರೆ. ಆದರೂ ರೆವೆನ್ಯೂ ಅಧಿಕಾರಿಗಳ ದೃಷ್ಟಿಯಿಂದ ಈ ಅಂಶವನ್ನು ಪರಿಶೀಲಿಸುವುದಾದರೆ ಕೆಲವು internal matters ವಿಚಾರದಲ್ಲಿ ಮೇಲ್ಪಟ್ಟ ಅಧಿಕಾರಿಗಳು ಹೆಚ್ಚಿನ ನಿಗಾ ಕೊಡಬೇಕಾದುದು ಅತ್ಯಾವಶ್ಯಕ. ನಮ್ಮ ರೆವೆನ್ಯೂ ಮಂತ್ರಿಗಳು ಈಗ ಅಲ್ಲಲ್ಲಿ surprise visits ಇಟ್ಟು ಕೊಂಡಿರುತ್ತಾರೆ. ಅವರ ಹತೋಟಿಗೇ ಈಗ ಈ ಎಫಿಷಿಯನ್ಸಿ ಆಡಿಟ್ ಮತ್ತು ಆಂಟಿಕರಪ್ಷನ್ ಇಲಾ ಖೆಗಳೂ ಒಳಪಟ್ಟಿವೆ. ಅವರಲ್ಲಿ ನನ್ನ ವಿನಂತಿ ಏನೆಂದರೆ, ಈ surprise visits ಕಾಲದಲ್ಲಿ ಈ ವಿಚಾರವನ್ನು ಆಮೂಲಾಗ್ರವಾಗಿ ಪರೀಕ್ಷಿಸಿ, ದಯಾ ದಾಕ್ಷಿಣ್ಯವಿಲ್ಲದೆ ಕೂಡಲೇ ಸೂಕ್ತ ಎಚ್ಚರಿಕೆ ಕಾರ್ಯ

(ಶ್ರೀ ಎಂ. ಮಾದಯ್ಯ.)

ಕ್ರಮಗಳನ್ನು ಕೈಗೊಂಡರೆ ಈ ರೀತಿಯ ಅನ್ಯಾಯಗಳನ್ನು ತಡೆಗಟ್ಟಲು ಬಹುಮಟ್ಟಿಗೆ ಸಹಾಯಕಾರಿಯಾಗುತ್ತದೆಂದು ಹೇಳಿ ನಾನು ಈ ಖೋತಾ ಸೂಚನೆಯನ್ನು ಸಮರ್ಥಿಸುತ್ತೇನೆ.

ಶ್ರೀ ಎಚ್. ಕೆ. ವೀರಣ್ಣಗೌಡ (ಮದ್ದೂರು).—ಸ್ವಾಮಿ, ಈ ಖೋತಾ ನಿರ್ಣಯದ ಬಗ್ಗೆ ಒಂದೆರಡು ಅಂಶಗಳನ್ನು ತಿಳಿಸಬೇಕಾಗಿದೆ. ಹಿಂದೆ ಒಂದು ಬಾರಿ ಈ ವಿಚಾರವಾಗಿ ನಾನು ಕೆಲವು ಅಂಶಗಳನ್ನು ಸರ್ಕಾರದ ಗಮನಕ್ಕೆ ತಂದಿದ್ದೆ. ವಿಶ್ವೇಶ್ವರಯ್ಯ ನಾಲಾ ಪ್ರದೇಶದಲ್ಲಿ ರೈತರಿಂದ ಸರ್ಕಾರಕ್ಕೆ ಕಂದಾಯ ವಾಟರ್‌ರೇಟ್, ಕಂಟ್ರಿಬ್ಯೂಷನ್ ಮುಂತಾಗಿ, ಯಾರಾರಿಂದ ಎಷ್ಟೆಷ್ಟು ಬರಬೇಕೆಂಬ ಬಗ್ಗೆ ಸರಿಯಾದ ಲೆಕ್ಕಗಳಿಲ್ಲದೆ ಗೊಂದಲವಾಗಿ ಈಗ್ಗೆ 20 ವರ್ಷಗಳಿಂದಲೂ ಸರ್ಕಾರಕ್ಕೆ ಸಲ್ಲಬೇಕಾದ ಹಣವು ವರ್ಷವರ್ಷವೂ ಲಕ್ಷ ರೂಪಾಯಿಗಳು ಏರಿ ಈಗ ಸುಮಾರು ಒಂದು ಕೋಟಿ ರೂಪಾಯಿಗಳಷ್ಟು ಸರ್ಕಾರಕ್ಕೆ ರೈತರು ಬಾಕಿದಾರರಾಗಿದ್ದಾರೆಂದು ಹೇಳಲಾಗುತ್ತದೆ. ಆ ಪ್ರದೇಶದಲ್ಲಿ ರೈತರು ಸಕ್ಕರೆ ಕಂಪೆನಿಗೆ ವಿಶೇಷ ಕಬ್ಬನ್ನು ಒದಗಿಸುತ್ತಾರೆ. ಈ ಕಬ್ಬನ್ನು ಒದಗಿಸುವ ರೈತರಿಂದ ಸರ್ಕಾರಕ್ಕೇನಾದರೂ ಬಾಕಿ ಬರಬೇಕಾದುದಿದ್ದರೆ ಕಬ್ಬಿಗೆ ಸಲ್ಲಬೇಕಾದ ಹಣದಲ್ಲಿ ಸರ್ಕಾರದ ಬಾಕಿಯನ್ನು ಹಿಡಿದುಕೊಂಡು ಉಳಿದುದನ್ನು ಸಕ್ಕರೆ ಕಂಪೆನಿಯವರು ರೈತರಿಗೆ ಕೊಡುವ ಬಗ್ಗೆ ಒಂದು ಸರ್ಕಾರದ ಆರ್ಡರಾಗಿದೆ. ಈ ಆರ್ಡರಿನ ಪ್ರಕಾರ ಆ ರೈತ ಯಾವ ಸರ್ವೇ ನಂಬರಿನಲ್ಲಿ ಕಬ್ಬು ಬೆಳೆದಿರುತ್ತಾನೆಯೋ ಆ ಸರ್ವೇ ನಂಬರಿನ ಬಾಕಿ ಏನಾದರೂ ಸರ್ಕಾರಕ್ಕೆ ಸಂದಾಯವಾಗುವುದಿದ್ದರೆ ಆ ಮೊಬಲಗನ್ನು ಪಡೆದು ಉಳಿದ ಮೊಬಲಗನ್ನು ಆತನಿಗೆ ಕೊಡಬೇಕೆಂದು ನಮೂದಾಗಿದೆ. ಆದರೆ, ಅವನಿಂದ ಬರಬೇಕಾದ ಬಾಕಿ ಅದೇ ಸರ್ವೇ ನಂಬರಿಗೆ ಸಂಬಂಧಪಟ್ಟಿರಲಿ ಅಥವಾ ಬೇರೆ ಸರ್ವೆನಂಬರಿಗೆ ಸಂಬಂಧ ಪಟ್ಟಿರಲಿ ಅಥವಾ ಅದೇ ತಾಲ್ಲೂಕ್ಕಿನ ಬೇರೆ ಗ್ರಾಮಗಳ ಸರ್ವೆ ನಂಬರಿಗೆ ಸಂಬಂಧಪಟ್ಟಿರಲಿ ಆತನ ಎಲ್ಲಾ ಬಾಕಿಯನ್ನೂ ಹಿಡಿದುಕೊಳ್ಳುತ್ತಿದ್ದಾರೆ. ಸಕ್ಕರೆ ಕಂಪೆನಿಯವರು ಆತನಿಗೆ ಕೊಡುವ ರಸೀದಿಯಲ್ಲಿ ವಾಟರ್ ರೇಟಿಗಾಗಿ ಎಷ್ಟು, ಕಂಟ್ರಿಬ್ಯೂಷನ್‌ಗಾಗಿ ಎಷ್ಟು, ಲ್ಯಾಂಡ್ ರೆವಿನ್ಯೂಗಾಗಿ ಎಷ್ಟು ಮೊಬಲಗನ್ನು ಹಿಡಿದಿದೆಯೆಂಬ ಬಗ್ಗೆ ಏನೊಂದು ವಿವರವನ್ನೂ ನಮೂದಿಸಿರುವುದಿಲ್ಲ. ಉದಾಹರಣೆಯಾಗಿ, ಒಬ್ಬ ರೈತ ಹತ್ತುಸಾವಿರ ರೂಪಾಯಿಗಳಷ್ಟು ಕಬ್ಬನ್ನು ಆತನು ಸಕ್ಕರೆ ಕಂಪೆನಿಗೆ ಒದಗಿಸಿದ್ದರೆ, ಆತನಿಗೆ ಸಕ್ಕರೆ ಕಂಪೆನಿಯವರು ಕೊಡುವ ಬಿಲ್ಲಿನಲ್ಲಿ Government dues ಒಂಭತ್ತು ಸಾವಿರ ಚಿಲ್ಲರೆ ಎಂದು ತಿಳಿಸಿ ಉಳಿದ ಮೊಬಲಗನ್ನು ಆತನಿಗೆ ಪಾವತಿ ಮಾಡುತ್ತಾರೆ. ಕೆಲವು ಸಂದರ್ಭಗಳಲ್ಲಿ nil bill ಸಹ ಬರುವುದುಂಟು. ಈ ಸಲ ಕಬ್ಬಿನ ಬಾಬ್ತು ನಿನಗೆಷ್ಟು ಬಂತು ಎಂದು ಕೇಳಿದರೆ 'nil bill' ಬಂತು ಎಂದು ಹೇಳುವುದು ವಾಡಿಕೆಯಾಗಿ ಹೋಗಿದೆ. ಯಾವ ಯಾವ ಬಾಬಿಗೆ ಎಷ್ಟೆಷ್ಟು ಹಣ ಕಟ್ಟಿಕೊಂಡಿರುತ್ತಾರೆ, ಯಾವ ಯಾವ ಐಟಂಗೆ ಎಷ್ಟು, ಯಾವ ಸರ್ವೆ ನಂಬರಿಗೆ ಎಷ್ಟು—ಎಂಬ ಬಗ್ಗೆ ಏನೊಂದು ವಿವರವೂ ಆ ರಸೀದಿಯಲ್ಲಿರುವುದಿಲ್ಲ. ಇದರಿಂದ ಈ ಬಗ್ಗೆ ಲೆಕ್ಕಾಚಾರವೆಲ್ಲಾ ಏರುಪೇರಾಗಿರಲು ಅವಕಾಶವಾಗಿದೆ. ಈ ಅಂಶವನ್ನು ಹಲವಾರು ಬಾರಿ ಸರ್ಕಾರದಲ್ಲಿ ಒತ್ತಾಯಮಾಡಿ, ಅಧಿಕಾರಿಗಳಲ್ಲಿ ಒತ್ತಾಯಮಾಡಿ, ಕಾಂಗ್ರೆಸ್ ಕಮಿಟಿಗಳ ಮೂಲಕ, ರೈತ ಸಂಘಗಳ ಮೂಲಕ, ಪ್ರಜಾಪ್ರತಿನಿಧಿ ಸಭೆ ಮತ್ತು ನ್ಯಾಯವಿಧಾಯಕ ಸಭೆಗಳ ಮೂಲಕ ಒತ್ತಾಯಮಾಡಿದಮೇಲೆ ಈಗೀಗ ಇದಕ್ಕಾಗಿ ಸ್ಪೆಷಲ್ ಆಡಿಟ್ ಆಫೀಸರುಗಳನ್ನು ನೇಮಕಮಾಡಿರುತ್ತಾರೆ. ಈಗ ಅಲ್ಲಿ 20 ವರ್ಷಗಳ ಲೆಕ್ಕಗಳು ಆಡಿಟ್ ಆಗುತ್ತಿವೆ. ಈಗಿನ ವ್ಯವಸ್ಥೆಯ ಪ್ರಕಾರ ಒಂದೊಂದು ಊರಿನ ಲೆಕ್ಕದ ಆಡಿಟ್ ಆಗಬೇಕಾದರೆ 4-5-6 ತಿಂಗಳಾಗುತ್ತದೆ. ಏಕೆಂದರೆ ಒಂದೊಂದು ತಾಲ್ಲೂಕಿನಲ್ಲೂ 120-130 ಗ್ರಾಮಗಳಿರುತ್ತವೆ. ಆದುದರಿಂದ ಈ ಆಡಿಟ್ ವ್ಯವಸ್ಥೆಯ ಬಗ್ಗೆ ಹೆಚ್ಚಿನ ಸಿಬ್ಬಂದಿಯನ್ನೊದಗಿಸಿ ಲೆಕ್ಕಗಳು ಅತಿ ಜಾಗ್ರತೆಯಾಗಿ ಆಡಿಟ್ ಆಗುವ ಏರ್ಪಾಡು ಅತ್ಯವಶ್ಯಕವಾಗಿ ಆಗಬೇಕು.

ಇನ್ನೊಂದು ಅಂಶ ಈ ಆಡಿಟರುಗಳನ್ನು ನೇಮಕ ಮಾಡಿರುವುದಕ್ಕೆ ಸಂಬಂಧಿಸಿದ್ದು. ಮಂಡ್ಯ ಡಿಸ್ಟ್ರಿಕ್ಟ್‌ನಲ್ಲಿ ಈಗ್ಗೆ 10-12 ವರ್ಷಗಳಿಂದ ಡಿಸ್ಟ್ರಿಕ್ಟ್ ಆಫೀಸ್‌ನಲ್ಲಿ ಕೆಲಸಮಾಡಿಕೊಂಡಿದ್ದು ಅಲ್ಲಿನ ವಿದ್ಯಮಾನಗಳನ್ನು ಪೂರ್ಣವಾಗಿ ಅರಿತಿರುವವರೇ ಈಗ ಈ ಆಡಿಟ್ ಶಾಖೆಯಲ್ಲಿದ್ದಾರೆ. ನನಗೆ ತಿಳಿದು ಬಂದಿರುವ ಪ್ರಕಾರ ರೈತರು ಸಂದಾಯ ಮಾಡಿರುವ ಹಣಕ್ಕೆ ಹಂಗಾಮಿ ರಸೀದಿಯಾಗಲಿ ಅಥವಾ ಮತ್ಯಾವ ದಾಖಲೆಯನ್ನಾಗಲಿ ರುಜುವಾತಿಗಾಗಿ ಕೊಟ್ಟರೆ ಅದು ಅಲ್ಲಿಯೇ 'ಹಜಂ' ಆಗಿಹೋಗುತ್ತಿದೆ. ಹೀಗೆ ಆಗಿಬಿಟ್ಟರೆ ಆತನು ದಾಖಲೆ ಕೊಡುವುದೆಲ್ಲಿ ಬಂತು! ರೈತನು ಪ್ರೊಕ್ಯೂರ್‌ಮೆಂಟ್ ಕಾಲದಲ್ಲಿ ಸರ್ಕಾರದ ಡಿಪೋಗಳಿಗೆ ಭತ್ತ ಕೊಟ್ಟಿರುತ್ತಾನೆ. ಅದಕ್ಕೆ ಬರಬೇಕಾದ ಹಣವನ್ನು ಕಂದಾಯ, ವಾಟರ್‌ರೇಟ್ ಕಾಂಟ್ರಿಬ್ಯೂಷನ್ ಮುಂತಾದುವುಗಳಿಗಾಗಿ ಜಮ ಮಾಡಿಕೊಡುವುದಾಗಿ ಪಟೇಲರೋ, ಶ್ಯಾನುಭೋಗರೋ, ಶೇಕದಾರರೋ ಬಾಯಿಮಾತಿನಲ್ಲಿ ಹೇಳಿ, ಖಜಾನೆಯಿಂದ ಹಣ ಪಡೆಯಲು ಆತನಿಂದ ಅಧಿಕಾರ ಪಡೆದುಕೊಂಡು ಆ ಹಣವನ್ನು ದುರುಪಯೋಗಪಡಿಸಿಕೊಂಡಿರುವ ಉದಾಹರಣೆಗಳು ಅನೇಕ ಇವೆ. ಹೀಗಾಗಿ ಈ ಬಗ್ಗೆ ಲಕ್ಷಾಂತರ ರೂಪಾಯಿಗಳ ಬಾಕಿ ರೈತರಮೇಲೆ ಕಂಡುಬರುತ್ತಿದೆ. ಆದರೆ ರೈತರು ಮಾತ್ರ ತಾವು ಕೊಡಬೇಕಾದುದನ್ನು ಧಾನ್ಯದ ರೂಪದಲ್ಲಿಯೋ, ಕಬ್ಬಿನ ರೂಪದಲ್ಲಿಯೋ ಒದಗಿಸುವುದಾಗಿ ಹೇಳುತ್ತಾರೆ. ಇದರ ಬಗ್ಗೆ ರೈತರಲ್ಲಿ ದಾಖಲೆಗಳೇ ಇಲ್ಲ. ಇರುವ ಒಂದೆರಡು ದಾಖಲೆಗಳು ಅಲ್ಲಲ್ಲೇ ಮಾಯವಾಗುತ್ತಿವೆಯೆಂದು ಹೇಳುತ್ತಿದಾರೆ. ಈ ಕಾರಣದಿಂದ ಅಲ್ಲಿನ ಆಡಿಟ್ ಅಸಮರ್ಪಕವಾಗಿದೆ. ಈ ವಿಚಾರದಲ್ಲಿ ನನ್ನ ಸಲಹೆ ಏನೆಂದರೆ, ಅಲ್ಲಿ ಬಹಳ ಕಾಲದಿಂದ ಇರತಕ್ಕ ಕೆಲವು ಅಧಿಕಾರಿಗಳನ್ನಾದರೂ ಬದಲಾಯಿಸಬೇಕು. ಅಲ್ಲದೆ, ಈ ಆಡಿಟ್ ಸುಸೂತ್ರವಾಗಿ ನಡೆಯಲು ಅಲ್ಲಿನ ಸಿಬ್ಬಂದಿಯನ್ನು ಹೆಚ್ಚಿಸಬೇಕು. ಲೆಕ್ಕ ತನಿಖೆಯ ವಿಚಾರದಲ್ಲಿ ಅಡ್ಡಿ ಆತಂಕಗಳನ್ನು ತಂದೊಡ್ಡುತ್ತಿರುವವರಮೇಲೆ ಕೂಡಲೇ ಕಾರ್ಯಕ್ರಮ ಕೈಗೊಳ್ಳಬೇಕು. ಈ ರೀತಿ ಲೋಪದೋಷಗಳನ್ನು ಅತಿ ತ್ವರಿತವಾಗಿ, ಅತ್ಯಗತ್ಯವಾಗಿ ಸರಿಪಡಿಸಬೇಕು. ಈ ಕಾರ್ಯದಲ್ಲಿ ನಿಧಾನ ಮನೋಭಾವ ತಾಳಬಾರದು.

ಇನ್ನೊಂದು ವಿಚಾರ. ಈ ವಸೂಲಿ ಕ್ರಮದಲ್ಲಿ ಪ್ರತಿ ಸಾಲಿನಲ್ಲಿಯೂ ವಸೂಲುಮಾಡಿಕೊಳ್ಳುವ ವ್ಯವಸ್ಥೆ ಇದ್ದಿದ್ದರೆ ಚೆನ್ನಾಗಿತ್ತು. ಆದರೆ ಹಾಗೇನೂ ಇಲ್ಲ. ಉದಾಹರಣೆಗೆ, ಶಿಂಷಾಬ್ರಾಂಚನಾಲೆ ಹರಿಯುವ ಕಡೆ 10-11 ವರ್ಷಗಳಿಂದಲೂ ಡಿಮಾಂಡಿಲ್ಲ. ಮಳವಳ್ಳಿ ಕಡೆಯೂ ಹೀಗೆಯೇ ಆಗಿದೆ. ಈಗ ಶಿಂಷಾಬ್ರಾಂಚ್‌ನಲ್ಲಿ 11 ವರ್ಷಗಳ ಬಾಕಿಯನ್ನು ಒಂದೇ ಸಲ ವಸೂಲು ಮಾಡಬೇಕೆಂದು ಒತ್ತಾಯನಡೆಯುತ್ತಿದೆ. ಇಷ್ಟೊಂದು ಬಾಕಿಯನ್ನು ಒಂದೇ ಸಲ ಕೊಡಬೇಕೆಂದರೆ ಕೊಡುವ

ವನಿಗೆ ಎಷ್ಟು ತೊಂದರೆ, ಕಿರುಕುಳವಾಗುತ್ತದೆಯೆಂಬುದನ್ನು ತಾವು ಮನಗಾಣಬೇಕಾಗಿದೆ. ಇಷ್ಟು ಸಾವಕಾಶ ಏಕೆ ಆಯಿತು, ಇದಕ್ಕೆ ಯಾರು ಕಾರಣರು ಎಂಬುದನ್ನು ಸರ್ಕಾರದವರು ಪರಿಶೀಲನೆಮಾಡಬೇಕು. ಮತ್ತು ಇನ್ನು ಮುಂದೆ ಹೀಗೆ ಆಗಲು ಆಸ್ಪದವಿಲ್ಲದಂತೆ ಮಾಡಬೇಕು. ಜಮಾಬಂದಿ ನಡೆಸುವ ಕಾಲದಲ್ಲಿ ಸಂಬಂಧಪಟ್ಟ ಅಧಿಕಾರಿಗಳು ಇದಕ್ಕೆ ಸೂಕ್ತ ಗಮನ ಕೊಡಬೇಕು. ಒಟ್ಟಿನಲ್ಲಿ ಈ ವಿಚಾರದಲ್ಲಿ ಜನ ಸಾಮಾನ್ಯರಿಗೆ ಯಾವ ರೀತಿಯ ಕಿರುಕುಳವೂ ಉಂಟಾಗದ ರೀತಿಯಲ್ಲಿ ಸೂಕ್ತ ಕಾರ್ಯಕ್ರಮ ಕೈಗೊಳ್ಳಬೇಕೆಂದು ಸೂಚಿಸುತ್ತೇನೆ.

ಶ್ರೀ ಕಡಿದಾಳ್ ಮಂಜಪ್ಪ.—ಸ್ವಾಮಿ, ಇದೇ ಮಾನ್ಯ ಸಭೆಯಲ್ಲಿ ಮಂಡ್ಯ ಜಿಲ್ಲೆಯಲ್ಲಿ ರೈತರಿಂದ ಬರತಕ್ಕ ಕಂಟ್ರಿಬ್ಯೂಷನ್, ವಾಟರ್ ರೇಟ್ ಮತ್ತು ಕಂದಾಯದ ವಿಚಾರದಲ್ಲಿ ಸಮಜಾಯಿಷಿ ಆಗಿಲ್ಲವೆಂದು ಶ್ರೀ ಎಚ್. ಕೆ. ವೀರಣ್ಣಗೌಡರೂ ಮತ್ತು ಇತರ ಸದಸ್ಯರೂ ಸಹ ಈಗ್ಗೆ ಒಂದೂವರೆ ವರ್ಷದ ಕೆಳಗೆ ಹೇಳಿದ್ದರ ಮೇಲೆ ನಾವು ಅಲ್ಲಿಯ ಲೆಕ್ಕಗಳ ತನಿಖೆಗಾಗಿ ಸ್ಪೆಷಲ್ ಸಿಬ್ಬಂದಿಯನ್ನು ನೇಮಕಮಾಡಿದ್ದೇವೆ.

ಶ್ರೀ ಎಚ್. ಕೆ. ವೀರಣ್ಣಗೌಡ.—ಈಗ ಸ್ವಲ್ಪ ಹೆಚ್ಚಿಸಿದ್ದೀರಿ. ಆದರೂ ಅದು ಸಾಲದು.

ಶ್ರೀ ಕಡಿದಾಳ್ ಮಂಜಪ್ಪ.—ಈಗ ಇಬ್ಬರು ಅಸಿಸ್ಟೆಂಟ್ ಕಮಿಷನರೂ, ಒಬ್ಬರು ಆಡಿಟರೂ ಇದ್ದಾರೆ. ಅವರು ಇದನ್ನೆಲ್ಲಾ ಒಂದು ಕ್ರಮಕ್ಕೆ ತಂದು ಲೆಕ್ಕ ಸಮಜಾಯಿಷಿಮಾಡುತ್ತಾರೆ. ಅವಶ್ಯಕತೆ ಕಂಡುಬಂದರೆ ಸಿಬ್ಬಂದಿಯನ್ನು ಇನ್ನೂ ಹೆಚ್ಚಿಸಲು ತಯಾರಾಗಿದ್ದೇವೆ.

ಶ್ರೀ ಎಂ. ಚಿಕ್ಕಲಿಂಗಯ್ಯ (ಮಳವಳ್ಳಿ-ಅನುಸೂಚಿತ ಜಾತಿಗಳು).—ಇಷ್ಟೊಂದು ಸಿಬ್ಬಂದಿ ಇದ್ದರೂ ಶ್ರೀ ಎಚ್. ಕೆ. ವೀರಣ್ಣಗೌಡರು ಹೇಳಿದಹಾಗೆ 10-12 ವರ್ಷಗಳ ಬಾಕಿ ಬಿದ್ದಿರುವುದನ್ನು ತನಿಖೆಮಾಡಿ ಅದನ್ನು ಸರಿಪಡಿಸಲು ಅವರಿಂದ ಇದುವರೆಗೆ ಸಾಧ್ಯವಾಗಲಿಲ್ಲ. In addition to the Special Officer they have appointed a Sub-division Officer. But they are not giving final reports after audit. They attend to other work. That is all.

ಶ್ರೀ ಕಡಿದಾಳ್ ಮಂಜಪ್ಪ.—ನನಗೆ ಈ ಬಗ್ಗೆ ಹೆಚ್ಚು ವಿವರ ತಿಳಿದುಬಂದಿಲ್ಲ. ಅಲ್ಲಿನ ವಿದ್ಯಮಾನಗಳನ್ನೆಲ್ಲಾ ತಿಳಿದು ಸ್ಪೆಷಲ್ ಆಫೀಸರು ಆ ಲೆಕ್ಕಗಳನ್ನು ತನಿಖೆಮಾಡುತ್ತಿದ್ದಾರೆ. 10-12 ವರ್ಷಗಳ ಬಾಕಿ ಇದ್ದರೆ, ಅಷ್ಟನ್ನೂ ಒಂದೇ ಕಂತಿನಲ್ಲಿ ವಸೂಲು ಮಾಡಲು ಜನಸಾಮಾನ್ಯರಿಗೆ ತೊಂದರೆಯಾಗುತ್ತದೆಯೆಂದು ಕಂಡುಬಂದರೆ ಸರ್ಕಾರದವರು ಅದನ್ನು ಸಹಾನುಭೂತಿಯಿಂದ ಪರಿಶೀಲಿಸುತ್ತಾರೆ.

ಶ್ರೀ ಎಚ್. ಕೆ. ವೀರಣ್ಣಗೌಡ.—ಷಿಂಷಾ ಬ್ರಾಂಚ್ ಮತ್ತು ಮಳವಳ್ಳಿ ತಾಲ್ಲೂಕು tail-endನಲ್ಲಿ ಈ ಬಗ್ಗೆ ಹೆಚ್ಚಿನ ನಿಗಾ ಕೊಡಬೇಕಾಗಿದೆ.

Mr. SPEAKER.—The Government have passed orders giving temporary reduction so far as Malavalli Taluk tail-end lands are concerned in 1949. If water supply is not assured, they should not collect.

Sri Kadidal MANJAPPA.—Thank you, Sir.

Mr. SPEAKER.—You need not thank me. I am just giving the information.

ಶ್ರೀ ಕಡಿದಾಳ್ ಮಂಜಪ್ಪ.—ಎಲ್ಲೆಲ್ಲಿ ಈ ನೌಕರರುಗಳು ಬಹಳ ವರ್ಷಗಳಿಂದ ಇದ್ದು ಅವರಿಂದ ಕಿರುಕುಳ ಇದೆಯೋ ಅವರನ್ನು ವರ್ಗಮಾಡುವುದಕ್ಕೆ ಸೂಕ್ತ ಕ್ರಮ ಕೈಕೊಳ್ಳಲಾಗುತ್ತದೆ.

ಆ ಮೇಲೆ ಈ ಕೃಷ್ಣರಾಜಪೇಟೆಯಲ್ಲಿ ಕೆಲವು ಗ್ರಾಮಗಳಲ್ಲಿ, ಮಾನ್ಯ ಸದಸ್ಯರು ಲಕ್ಕಪ್ಪನವರು ಹೇಳಿದ ಹಾಗೆ, ಲೆಕ್ಕ ಸಮಜಾಯಿಷಿ ಇಲ್ಲದೆ ಹಣ ದುರುಪಯೋಗವಾದ ನಿದರ್ಶನ ಇದೆ. ಅದನ್ನು ಪರಿಶೀಲನೆ ಮಾಡಬೇಕೆಂದು ರೆವೆನ್ಯೂ ಕಮಿಷನರಿಗೆ ಆಜ್ಞೆ ಮಾಡಿದ್ದಾರೆ. ಸ್ಪೆಷಲ್ ಆಡಿಟ್ ಅನಾವಶ್ಯಕ ಎಂದು ಸರ್ಕಾರದವರ ಗಮನದಲ್ಲಿವೆ. ಈ ಪ್ರಶ್ನೆ ಬಹಳ ಹಳೆಯ ಪ್ರಶ್ನೆ. ಸುಮಾರು 20 ವರ್ಷಗಳಿಂದ—ಯಾರ ಮೇಲೂ ಹೇಳುವುದಕ್ಕಾಗುವುದಿಲ್ಲ—ಹೀಗೆ ಲೆಕ್ಕ ಸಮಜಾಯಿಷಿ ಇಲ್ಲದೆ ಒಂದು ವಿಧವಾಗಿ ಬೆಳೆದುಬಂದಿದೆ. ಇದು ಸರಿಹೋಗಬೇಕಾದರೆ ಸ್ವಲ್ಪ ಕಾಲ ಹಿಡಿಯುತ್ತದೆ. ಬಹುಶಃ ಒಂದೆರಡು ವರ್ಷಗಳಲ್ಲಿ ಎಲ್ಲಾ ಸಮಜಾಯಿಷಿ ಆಗಿಬಿಟ್ಟು ರೈತರಿಗೆ ಕಿರುಕುಳ ಕಡಮೆಯಾಗುತ್ತದೆ ಎಂದು ಭಾವಿಸುತ್ತೇನೆ. ಅವಶ್ಯಕತೆ ಇದ್ದರೆ, ಬೇಕಾದರೆ Auditors ಗಳನ್ನು ಕಳುಹಿಸುವುದಕ್ಕೆ ಪ್ರಯತ್ನಪಡುತ್ತೇವೆ. ಇಷ್ಟು ಭರವಸೆ ಮೇಲೆ ಶ್ರೀಮಾನ್ ಲಿಂಗಪ್ಪನವರು ಈ ಕತ್ತರಿ ನಿರ್ಣಯವನ್ನು ವಾಪಸು ತೆಗೆದುಕೊಳ್ಳುತ್ತಾರೆ ಎಂದು ನಂಬಿದ್ದೇನೆ.

ಶ್ರೀ ಎಸ್. ಎಂ. ಲಿಂಗಪ್ಪ.—ಮಾನ್ಯ ಸಚಿವರ ಭರವಸೆಯ ಮೇಲೆ ಈ ಖೋತಾ ನಿರ್ಣಯವನ್ನು ಸಭೆಯ ಅನುಮತಿಯ ಮೇಲೆ ವಾಪಸು ತೆಗೆದುಕೊಳ್ಳುತ್ತೇನೆ.

The cut motion was, by leave, withdrawn.

Policy in granting Gomal Lands.

Sri G. SIVAPPA (Holalkere).—Sir, I beg to move :

> "That the demand under the head '7. Land Revenue' for Rs. 33,69,000 be reduced by Rs. 100 (to discuss the policy adopted by the Government while granting gomal lands)."

ಸ್ವಾಮಿ ಈ ಖೋತಾ ನಿರ್ಣಯವನ್ನು ಮಂಡಿಸುತ್ತಾ ಸರ್ಕಾರದವರ ಗಮನಕ್ಕೆ ಕೆಲವು ವಿಚಾರಗಳನ್ನು ಸಂಕ್ಷೇಪವಾಗಿ ತಿಳಿಸುತ್ತೇನೆ. ಗೋಮಾಳದ ಜಮೀನುಗಳನ್ನು ಕೊಡತಕ್ಕ ವಿಚಾರದಲ್ಲಿ ಹಿಂದಿನಿಂದ ಅನುಸರಿಸಿಕೊಂಡು ಬಂದಿರತಕ್ಕ ಪದ್ಧತಿಯನ್ನು ಸರ್ಕಾರದವರು ಈಗ ಸ್ವಲ್ಪ ಬದಲಾಯಿಸಿರುತ್ತಾರೆ ಎಂದು ಹೇಳಿ ಗೊತ್ತಾಗುತ್ತಿದೆ. ನಾನಾದರೂ ಸಹ ಜಮೀನು ಇಲ್ಲದೆ ಇರುವವರಿಗೆ ಜಮೀನು ಕೊಡಕೂಡದು ಎಂಬ ಉದ್ದೇಶ ಇಟ್ಟುಕೊಂಡಿಲ್ಲ. ಅದು ನನ್ನ ಅಭಿಪ್ರಾಯವಲ್ಲ. ಅಷ್ಟು ಅಪೇಕ್ಷೆ ಇದ್ದರೆ ಸಾವಿರಾರು ಎಕರೆ ಜಮೀನನ್ನು ಜಮೀನಿಲ್ಲದೇಯಿರುವವರಿಗೆ ಹಂಚಿ. ಆದರೆ ಗೋಸಂಪತ್ತು ಎನ್ನುವುದು ಅತಿ ಮುಖ್ಯವಾ

(SRI G. SIVAPPA.)

ದದ್ದು. ದೇಶದ ದೃಷ್ಟಿಯಿಂದ ಇದನ್ನು ಬೆಳೆಸುವುದು ಅತ್ಯಗತ್ಯ. ಟ್ರಾಕ್ಟರುಗಳಿಂದ ನಮ್ಮ ದೇಶಕ್ಕೆ ಅನುಕೂಲವಾಗಿಲ್ಲ. ಗೋಸಂಪತ್ತನ್ನು ಹೆಚ್ಚಾಗಿ ಬೆಳೆಸಿಕೊಳ್ಳಬೇಕು; ಏಕೆಂದರೆ ಇದು ಒಂದು ಪವರ್ ಇದ್ದ ಹಾಗೆ. ಟ್ರಾಕ್ಟರುಗಳಿಂದ ವ್ಯವಸಾಯ ಮಾಡುತ್ತಾ ಇದ್ದರೂ ಸಹ ಗೋಸಂಪತ್ತನ್ನು ಬೆಳೆಸಿಕೊಂಡು ಬರತಕ್ಕದ್ದು ಅತ್ಯವಶ್ಯಕ, ಇದರಿಂದ ಅನೇಕವಿಧದಲ್ಲಿ ಅನುಕೂಲಗಳು ಇವೆ. ಉತ್ತಮವಾದ ಗೊಬ್ಬರ ಸಿಕ್ಕುತ್ತದೆ. ಅಮೆರಿಕಾ ಮುಂತಾದ ದೇಶಗಳಲ್ಲಿ ಒಳ್ಳೆಯ ಜಮೀನಿನಲ್ಲಿ 50 ಅಥವಾ 100 ಎಕರೆ ಜಮೀನನ್ನು ಹುಲ್ಲಿಗಾಗಿ ಪ್ರತ್ಯೇಕವಾಗಿ ಇಟ್ಟುಕೊಂಡಿರುತ್ತಾರೆ. ನಮ್ಮ ದೇಶದಲ್ಲಿ 10-15 ಎಕರೆಗಿಂತ ಕಡಮೆ ಜಮೀನು ಹೊಂದಿರತಕ್ಕ ರೈತಾಪಿ ಜನರು ಆ ರೀತಿ ಪ್ರತ್ಯೇಕವಾಗಿ ಹುಲ್ಲಿಗೋಸ್ಕರ ಜಮೀನಿಟ್ಟುಕೊಳ್ಳುವುದಕ್ಕೆ ಸಾಧ್ಯವಿಲ್ಲ. ಆ ರೀತಿ ಪ್ರಯತ್ನಪಟ್ಟಿದ್ದೇ ಆದರೆ ಅವರ cost of production ಜಾಸ್ತಿಯಾಗುತ್ತದೆ, ಈಗಿನ ಸರ್ಕಾರದ ಕಂದಾಯ ಇತ್ಯಾದಿಗಳನ್ನು ಕೊಟ್ಟು, ಮನೆ ಸಂಸಾರದ ಖರ್ಚು ಇತ್ಯಾದಿಗಳನ್ನು ನಡೆಸುವುದು ಕಷ್ಟವಾಗುತ್ತದೆ. ನಮ್ಮ ದೇಶದಲ್ಲಿ ಪೂರ್ವದಿಂದಲೂ ಗ್ರಾಮದಲ್ಲಿ ಒಂದು ಕಡೆ ಗೋಮಾಳ ಎಂದು ಹೇಳಿ ಸ್ವಲ್ಪ ಜಮೀನು ಇಟ್ಟುಕೊಂಡು ಬರುತ್ತಾ ಇದ್ದುದನ್ನು ಉಳಿಸಿಕೊಂಡು ಹೋಗಬೇಕು ಎಂದು ಸರ್ಕಾರದವರಿಗೆ ತಿಳಿಸಲು ಇಷ್ಟಪಡುತ್ತೇನೆ. ಈಗ ಏನಾಗಿದೆ? ಜಮೀನು ಇಲ್ಲದೇ ಇರುವವರಿಗೆ ಜಮೀನು ಕೊಡಬೇಕೆಂದು ಹೇಳಿ, ಅತಿ ಮುಖ್ಯವಾಗಿರತಕ್ಕ, ವ್ಯವಸಾಯಕ್ಕೆ ಸಾಧನವಾಗಿರತಕ್ಕ ಗೋಸಂಪತ್ತನ್ನು ಮರೆತು, ಅದಕ್ಕಾಗಿ ಮೀಸಲಾಗಿರತಕ್ಕ ಗೋಮಾಳದ ಜಮೀನನ್ನು ವ್ಯವಸಾಯಕ್ಕೆ ಕೊಟ್ಟು ನಾವು ಬಹಳ ತಪ್ಪುದಾರಿಯಲ್ಲಿ ಹೋಗುತ್ತಾ ಇದ್ದೇವೆ ಎಂದು ನನ್ನ ಮನಸ್ಸಿಗೆ ಅನ್ನಿಸುತ್ತಾ ಇದೆ. ಅನೇಕ ಉದಾಹರಣೆಗಳನ್ನು ಕೊಡಬಲ್ಲೆ. ನಮ್ಮ ಜಿಲ್ಲೆಯಲ್ಲಿ ಒಂದುಕಡೆ 100 ಎಕರೆ ಇದ್ದಾಗ ಗೋಮಾಳ ಜಮೀನಿನಲ್ಲಿ 50 ಎಕರೆ ಕೊಡಬೇಕೆಂದು ಆರ್ಡರ್ ಮಾಡಿದ್ದಾರೆ. ಮಾನ್ಯ ಮಂತ್ರಿಗಳಿಗೆ ಅಂಥ ಹಲವಾರು ನಿದರ್ಶನಗಳು ಗೊತ್ತಿರಬಹುದು ಎಂದು ತಿಳಿದುಕೊಂಡಿದ್ದೇನೆ. ಇನ್ನೊಂದು ವಿಷಯವೇನೆಂದರೆ ಹಿಂದಿನ ಪದ್ಧತಿ 100 ರಾಸುಗಳು ಒಂದು ಗ್ರಾಮದಲ್ಲಿದ್ದರೆ 30 ಎಕರೆ ಗೋಮಾಳ ಬಿಡಬೇಕೆಂದು ಇತ್ತು. ಕೆಲವು ಗ್ರಾಮಗಳಲ್ಲಿ 500, 600 ರಾಸುಗಳು ಇದ್ದರೂ ಗೋಮಾಳ ಇಲ್ಲದೇ ಇರತಕ್ಕ ಸಂದರ್ಭ ನಾವು ನೋಡುತ್ತಾ ಇದ್ದೇವೆ. ಅಲ್ಲಿ ಎಕ್ಸೈಜ್ ಖರಾಬು ಎಂದು ಇರುತ್ತಾ ಇತ್ತು. ಗೋಮಾಳ ಇಲ್ಲದೇ ಇದ್ದರೂ ಸಹ ಎಕ್ಸೈಜ್ ಖರಾಬಿನಲ್ಲಿ ರಾಸುಗಳು ಹೋಗಿ ಮೇಯುವುದಕ್ಕೆ ಅವಕಾಶವಿತ್ತು. ಈಗ ಎಕ್ಸೈಜ್ ಖರಾಬಿನಲ್ಲೂ ಸಹ ಸರ್ಕಾರದವರು ರೂಲ್ಸ್ ಮಾಡಿ ಜಮೀನು ಕೊಡುತ್ತಾ ಇದ್ದಾರೆ. ಗೋಸಂಪತ್ತಿಗೆ ಅತಿಮುಖ್ಯವಾಗಿರತಕ್ಕ ಗೋಮಾಳದ ಜಮೀನುಗಳನ್ನು ಹಿಂದೆ ಇದ್ದಂತೆಯೇ ಮುಂದುವರಿಸಿಕೊಂಡು ಬರಬೇಕೆಂದು ಮಾನ್ಯ ಮಂತ್ರಿಗಳವರಲ್ಲಿ ಬಿನ್ನೈಸಿಕೊಳ್ಳುತ್ತೇನೆ. ಇಷ್ಟು ಹೊರತು ಬೇರೆ ಉದ್ದೇಶ ಯಾವುದೂ ಇಲ್ಲ. ಶ್ರೀಮಂತರ ಹತ್ತಿರ ಇರತಕ್ಕ ಸಾವಿರಾರು ಎಕರೆ ಜಮೀನು ತೆಗೆದುಕೊಂಡು ಜಮೀನಿಲ್ಲದೇ ಇರುವವರಿಗೆ ಕೊಡಿ, ಯಾರೂ ಬೇಡವೆನ್ನುವುದಿಲ್ಲ. ಗೋಮಾಳಗಳಿಲ್ಲದೆ ಇದ್ದ ಪಕ್ಷದಲ್ಲಿ ಗೋಸಂಪತ್ತಿಗೆ ಬಹಳ ಧಕ್ಕೆ ತಗಲುತ್ತದೆ ಎಂಬ ಅಂಶವನ್ನು ಸರ್ಕಾರದವರ ಗಮನಕ್ಕೆ ತಂದು ಈ ಖೋತಾ ನಿರ್ಣಯವನ್ನು ಸಭೆಯಮುಂದೆ ಮಂಡಿಸುತ್ತೇನೆ.

Mr. SPEAKER.—Cut motion moved:

"That the demand be reduced by Rs. 100."

ಶ್ರೀ ಎಸ್. ಎಂ. ಮರಿಯಪ್ಪ (ಪೆರಿಯಾಪಟ್ಟಣ).—ಈ ಖೋತಾ ನಿರ್ಣಯವನ್ನು ಸಮರ್ಥಿಸುತ್ತಾ ಎರಡು ವಿಷಯಗಳನ್ನು ಹೇಳಬೇಕಾಗಿದೆ. ಹಿಂದೆ 100 ರಾಸುಗಳಿಗೆ 30 ಎಕರೆ ಗೋಮಾಳ ಬಿಡಬೇಕೆಂದು ಸರ್ಕಾರದವರು ನಿಗದಿಮಾಡಿದ್ದ ಹಾಗೆ ಕಾಣುತ್ತದೆ. ಈಗ ಹರಿಜನರಿಗೆ ಡಿಪ್ರೆಸ್ಡ್ ಕ್ಲಾಸ್ ರೂಲ್ಸ್ ಪ್ರಕಾರ, ಸರ್ಕಾರಿ ಆರ್ಡರ್ ಇದೆ ಎಂದು ಮನಸ್ಸಿನಲ್ಲಿಟ್ಟುಕೊಂಡು ಆ ಗ್ರಾಮದಲ್ಲಿ ಗೋಮಾಳ ಇರಲಿ, ಇಲ್ಲದೇ ಇರಲಿ ಲೆಕ್ಕಾಚಾರವಿಲ್ಲದೇ ಜಮೀನನ್ನು ದರಖಾಸ್ತು ಮೂಲಕ ಕೊಟ್ಟುಬಿಡುತ್ತಾರೆ. ನಾನು ಈಗ ಒಂದು ನಿದರ್ಶನ ಹೇಳಬೇಕೆಂದರೆ, ಒಂದೆರಡು ಗ್ರಾಮಗಳಲ್ಲಿ ಹಿಂದೆ ಶ್ರೀಮಾನ್ ಟಿ. ಮರಿಯಪ್ಪನವರು ಮಂತ್ರಿಗಳಾಗಿದ್ದಾಗ ಆ ಗ್ರಾಮಗಳಿಗೆ ಬಂದಾಗ 'ಅಲ್ಲಿ ಗೋಮಾಳವೇ ಇಲ್ಲ, ಎರಡು ಮೂರು ಸಾವಿರ ಜಾನುವಾರು ಇವೆ, ಅವಕ್ಕೆ ಗೋಮಾಳ ಬಿಟ್ಟುಕೊಡಬೇಕೆಂದು ಹೇಳಿ ಕೇಳಿಕೊಂಡಿದ್ದರು. ಆ ಗ್ರಾಮಗಳಲ್ಲಿ ಎರಡು ಮೂರು ಸಾವಿರ ಜನ ಜಾನುವಾರುಗಳಿದ್ದರೂ ಸಹ 10 ಎಕರೆ ಕೂಡ ಗೋಮಾಳ ಇಲ್ಲದೆ ಬಹಳ ತೊಂದರೆಪಡುತ್ತಾ ಇದ್ದಾರೆ. ಈ ರೀತಿ ಸರ್ಕಾರದಲ್ಲಿ ಗೋಮಾಳಕ್ಕೆ ಸಂಬಂಧಪಟ್ಟಂತೆ ನಿರ್ದಿಷ್ಟವಾದ ಕ್ರಮ ಇಲ್ಲದೆ ನಡೆಯುತ್ತಾ ಇದೆ. ಕೂಡಲೇ ಇದನ್ನು ಸರ್ಕಾರದವರು ಸರಿಪಡಿಸಬೇಕೆಂದು ಹೇಳುತ್ತೇನೆ.

ಶ್ರೀ ಡಿ. ದೇವರಾಜ ಅರಸ್ (ಹುಣಸೂರು).—ಸ್ವಾಮಿ, ಗೋಮಾಳವನ್ನು ಜನರಿಗೆ ಹಂಚಿಕೆ ಮಾಡುವಾಗ ಸರ್ಕಾರದವರೇನೋ ಈಗ ಒಂದು ಆರ್ಡರ್ ಹೊರಡಿಸಿದ್ದಾರೆ, ಜಮೀನು ಇಲ್ಲದವರಿಗೆ ಮೊದಲು ಈ ಗೋಮಾಳಗಳಲ್ಲಿ ಇರತಕ್ಕ ಜಮೀನು ಹಂಚಬೇಕೆಂದು. ಅದೇನೋ ಶ್ಲಾಘನೀಯವಾದ ಆರ್ಡರೇ ಹೌದು. ಈ ಜಮೀನು ಕೊಡುವಾಗ ಸರ್ಕಾರದ ಉದ್ದೇಶ ಏನಿದೆಯೋ ಅದು ಸಂಪೂರ್ಣವಾಗಿ ಸಫಲವಾಗುವುದಿಲ್ಲ ಎಂಬ ಮಾತನ್ನು ಆಡಲು ಅಪೇಕ್ಷೆಪಡುತ್ತೇನೆ. ಈಗ ತಮ್ಮ ಸರ್ಕಾರಿ ಆರ್ಡರ್ ಪ್ರಕಾರ ಅಮಲ್ದಾರರಿಗೆ ಎರಡು ಎಕರೆ ಜಮೀನು ಮಂಜೂರು ಮಾಡುವುದಕ್ಕೆ ಮಾತ್ರ ಅಧಿಕಾರವನ್ನು ತಾವು ಕೊಟ್ಟಿದ್ದೀರಿ. ಒಬ್ಬ ವ್ಯಕ್ತಿಗೆ, ಒಂದು ಸಂಸಾರಕ್ಕೆ ಅವರು ಎರಡು ಎಕರೆ ಕೊಡಬಹುದೆಂದು ಇದೆ. ಎರಡು ಎಕರೆಗಿಂತ ಹೆಚ್ಚಾಗಿ ಜಮೀನು ಕೊಡಬೇಕಾದರೆ ಸಬ್ ಡಿವಿಜನ್ ಆಫೀಸರಿಗೆ ಅಧಿಕಾರ ಇದೆ. 4 ಎಕರೆಯವರೆಗೂ ಅವರು ಕೊಡಬಹುದು. 4 ಎಕರೆಗಿಂತ ಹೆಚ್ಚು ಕೊಡಬೇಕಾದರೆ ಡೆಪ್ಯುಟಿ ಕಮೀಷನರಿಗೆ ಅಧಿಕಾರ ಇದೆ. ಅಮಲ್ದಾರರಿಗೆ ಅಧಿಕಾರ ಇರತಕ್ಕ ಪ್ರಕಾರ 2 ಎಕರೆಯಂತೆ ಒಬ್ಬ ಬಡ ಕುಟುಂಬಕ್ಕೆ ಕೊಡುವುದನ್ನು ತಕ್ಷಣ ಕೊಡುತ್ತಾರೆ. 5 ಎಕರೆ ಕೊಡಬೇಕಾದರೆ ಈಗಿನ ಆಚರಣೆಯಲ್ಲಿರತಕ್ಕ ಪದ್ಧತಿ ಪ್ರಕಾರ ಸಬ್ ಡಿವಿಜನ್ ಆಫೀಸಿಗೆ ಹೋಗಿ ಡೆಪ್ಯುಟಿ ಕಮೀಷನರ ಆಫೀಸಿಗೆ ಹೋಗಬೇಕು. ತಾವು ಯಾವ ಒಂದು ಘನೋದ್ದೇಶದಿಂದ ಕೂಡಲೇ ಜಮೀನು ಇಲ್ಲದವರಿಗೆ ಜಮೀನು ದೊರಕಬೇಕೆಂದು ಆರ್ಡರ್ ಜಾರಿ ಮಾಡಿದ್ದೀರೋ ಅದಕ್ಕೆ ವ್ಯತಿರಿಕ್ತವಾಗಿ ಇದರ ಪರಿಣಾಮವಾಗುತ್ತದೆ. ಹೇಗೆಂದರೆ, ಪೂರ್ವೋತಿ ಪೂರ್ವೋಭವ, ಎಂದು ಹೇಳುವಂತೆ, ಅಮಲ್ದಾರರಿಗೆ ಅರ್ಜಿ ಹಾಕಿಕೊಂಡು

ಅವರ ಆಫೀಸಿನಲ್ಲಿ 3–4 ತಿಂಗಳು ಅಲ್ಲೇ ಕುಳಿತಿದ್ದು ಅಲ್ಲಿಂದ ಸಬ್ ಡಿವಿಜನ್ ಆಫೀಸಿಗೆ ಹೋಗಬೇಕು ; ಸಬ್ ಡಿವಿಜನ್ ಆಫೀಸಿನಿಂದ ಡೆಪ್ಯುಟಿ ಕಮೀಷನರ ಆಫೀಸಿಗೆ ಹೋಗಬೇಕು ; ಇಷ್ಟೆಲ್ಲಾ ಪೂರೈಸಿಕೊಂಡು ಬರಬೇಕಾದರೆ 6 ತಿಂಗಳು ಅಥವಾ ಒಂದು ವರ್ಷ ಆಗುತ್ತದೆ. ಇದರ ಜೊತೆಗೆ ಜಮೀನು ಕೊಡುವ ವಿಚಾರದಲ್ಲಿ ಏನಾದರೂ ತಕರಾರು ಡೆಪ್ಯುಟಿ ಕಮೀಷನರ ಆಫೀಸಿನಲ್ಲೋ ಸಬ್ ಡಿವಿಜನ್ ಆಫೀಸಿನಲ್ಲೋ ಯಾವುದಾದರೂ query ಯಾರಾದರೂ ಹಾಕುತ್ತಾರೆ. ನಮ್ಮ ಆಫೀಸರುಗಳಿಗೆ ಬಹಳ ಆಸೆ, ಯಾವುದಾದರೂ ರೆಕಾರ್ಡ್ ಹೋದರೆ ಏನಾದರೂ ಒಂದು query ಹಾಕಿ ಡಿಸ್ಪೋಸಲ್ ತೋರಿಸುವುದಕ್ಕೆ. ತಾವು ತಾಲ್ಲೂಕು ಆಫೀಸು, ಸಬ್ ಡಿವಿಜನ್ ಆಫೀಸಿಗೆ ಇನ್ಸ್ಪೆಕ್ಷನ್ನಿಗೆ ಹೋದಾಗ ತಮಗೆ ಗೊತ್ತಾಗುವುದು ಆ ಡಿಸ್ಪೋಸಲ್ ಒಂದೇ. ಯಾವುದಾದರೂ ಒಂದು ನಿರ್ದಿಷ್ಟವಾದ ರಿಕಾರ್ಡ್ ತೆಗೆದುಕೊಂಡು, ' ನೋಡೋಣ ಹೇಗೆ ಇದು ಹುಟ್ಟಿತು. ಯಾವರೀತಿ ಬೆಳವಣಿಗೆ ಆಗುತ್ತಾ ಇದೆ, ಇದರ ಪರಿಣಾಮವೇನಾಗಬಹುದು ' ಎಂಬುದನ್ನು ನೋಡಿದರೆ ಅದರ ಅರ್ಥ ಚೆನ್ನಾಗಿ ಮನವರಿಕೆಯಾಗುತ್ತದೆ. ಆದರೆ ತಾವು ನೋಡುವಂತೆ ನೋಡಿದರೆ ಬರೀ ಡಿಸ್ಪೋಸಲ್ ಮಾತ್ರ ಚೆನ್ನಾಗಿ ಅರ್ಥವಾಗುತ್ತದೆ. ಆದ್ದರಿಂದ ಆಫೀಸುಗಳಲ್ಲಿ ಬಹಳ ಉಪೇಕ್ಷೆಯಿಲ್ಲದೆ ಕೆಲಸ ಮಾಡುತ್ತಾರೆ, ಪರವಾಗಿಲ್ಲ ಎಂದು ತಾವು ಅಂದುಕೊಳ್ಳುತ್ತೀರಿ ; ಅವರಿಗೆ ಶಹಭಾಸ್ ಗಿರಿಯನ್ನು ಕೊಡುತ್ತೀರಿ.

ಶ್ರೀ ಕಡಿದಾಳ್ ಮಂಜಪ್ಪ.—ಕೊಡುವುದಿಲ್ಲ.

ಶ್ರೀ ಡಿ. ದೇವರಾಜ ಅರಸ್.—ಹಾಗಾದರೆ ಇದಕ್ಕೆ ಏನುಮಾಡಬೇಕೋ ಅದನ್ನು ಮಾಡೋಣ. ಯಾವರೀತಿ ಈಗ ಬಹಳ ತೊಂದರೆಯಾಗುತ್ತಾ ಇದೆ ಎಂಬುದು ನನ್ನ ಅನುಭವಕ್ಕೆ ಬಂದಿದೆ. ಜಮೀನು ಇಲ್ಲದವರಿಗೆ ಜಮೀನು ಕೊಡಿಸಿಕೊಡಬೇಕಾಗಿ ಅಮಲ್ದಾರರು ಶಿಫಾರಸು ಮಾಡಿ ಕಳುಹಿಸಿದ ರೆಕಾರ್ಡ್ ಸಬ್ ಡಿವಿಜನ್ ಆಫೀಸು ಅಲ್ಲಿಂದ ಡೆಪ್ಯುಟಿ ಕಮೀಷನರ ಆಫೀಸಿಗೆ ಹೋಗುವುದರೊಳಗೆ 4 ತಿಂಗಳು ಆಯಿತು. ನಾನೇ ಖುದ್ದು ನನ್ನ ಪ್ರಯತ್ನಮಾಡಿಯೂ ಇಷ್ಟು ದಿವಸ ಆಯಿತು. ಆದರೆ ಆ ಜಮೀನನ್ನು ಬೇರೆ ಪಾರ್ಟಿಗಳಿಗೆ ಕೊಡಬೇಕು ಎಂದು ಹೇಳಿ ಆಫೀಸಿನಲ್ಲಿದ್ದವರು ಕೆಲವರಿಗೆ ಅಭಿಪ್ರಾಯವಿತ್ತು—ಆ ಅಭಿಪ್ರಾಯಕ್ಕೆ ಕಾರಣಗಳೇನು ಎಂಬುದನ್ನು ತಾವೇ ಊಹಿಸಿಕೊಳ್ಳಿ. ಈ ರೀತಿಯಾಗಿ ಆ ಜಮೀನು ಯಾವರೀತಿಯಲ್ಲೂ ಕೊಡದಹಾಗೆ ಮಾಡಬೇಕೆಂದು ಒಂದುಸಾರಿ ಕ್ವೆರಿ ಹಾಕಿ ಪುನಃ ಅಮಲ್ದಾರರ ಹತ್ತಿರ ಕಳುಹಿಸಿದರು. ಆ ಅಮಲ್ದಾರರು answer ಮಾಡಿ ಪುನಃ ಹಿಂದಕ್ಕೆ ಕಳುಹಿಸಿದರು ; ಮತ್ತೆ ಎರಡನೇಸಾರಿ ಇನ್ನೊಂದು ಕ್ವೆರಿ ಹಾಕಿ ಪುನಃ ಅಮಲ್ದಾರರಿಗೆ ಕಳುಹಿಸಿದರು. ಅಮಲ್ದಾರರು ಅದಕ್ಕೆ answer ಮಾಡಿ ಹಿಂದಕ್ಕೆ ಕಳುಹಿಸಿದರು. ಮೂರನೆ ಸಾರಿಯೂ ಕ್ವೆರಿ ಹಾಕಿದರು. ಇದರಿಂದಲೇ ಗೊತ್ತಾಗುತ್ತದೆ. ಅಮಲ್ದಾರರ ಆಫೀಸಿನಲ್ಲಿದ್ದ ಒಂದು ರೆಕಾರ್ಡು ಡೆಪ್ಯುಟಿ ಕಮೀಷನರ ಆಫೀಸಿಗೆ ಅಥವಾ ಸಬ್ ಡಿವಿಜನ್ ಆಫೀಸಿಗೆ ಹೋದಾಗ ಲೋಪದೋಷಗಳು ಏನಾದರೂ ಇದ್ದರೆ ಅವೆಲ್ಲವೂ ಒಂದೇಸಾರಿ ಅಲ್ಲಿರತಕ್ಕ ಹೆಡ್ ಗುಮಾಸ್ತರಿಗೆ ಅಥವಾ ಮ್ಯಾನೇಜರಿಗೆ ಅರ್ಥವಾಗಲಿಲ್ಲವೇನು ? ಅವರಿಗೆ ತಲೆ ಇರಲಿಲ್ಲವೇ ? ಒಂದಲ್ಲ ಹತ್ತು ಕ್ವೆರಿ ಇದ್ದರೂ ಕೂಡ ಒಂದೇಸಾರಿ ಕ್ವೆರಿಹಾಕಿ ಕಳುಹಿಸುವುದಕ್ಕೂ ಗೊತ್ತಿರಲಿಲ್ಲವೇನು ? ಉದ್ದೇಶ ಪೂರ್ವಕವಾಗಿ ರೆಕಾರ್ಡ್ ಡಿಲೇ ಮಾಡುವುದಕ್ಕೆ ಏನುಮಾಡುತ್ತಾರೆ ಎಂದರೆ ಯಾವುದೋ ಒಂದು ವಿಷಯದಲ್ಲಿ ಕ್ವೆರಿ ಹಾಕುವುದು ; ಆ ಕ್ವೆರಿ ಹಾಕಿದರೆ ಒಂದು ವರ್ಷ ಅಥವಾ 6 ತಿಂಗಳು ಹಿಂದಕ್ಕೆ ಬೀಳುತ್ತದೆ ಎಂದು ಅವರಿಗೆ ಚೆನ್ನಾಗಿ ಗೊತ್ತಿರುತ್ತದೆ—ಆಮೇಲೆ ಇನ್ನೊಂದು ಕ್ವೆರಿ ಹಾಕುವುದು. ಹೀಗೆ ಅನೇಕ ಅನರ್ಥಗಳು ನಡೆಯುತ್ತಾ ಇವೆ. ಏನಾದರೂ ಕ್ವೆರಿ ಹಾಕಿದರೆ ಬಹಳ ಫಾಯಿದೆಯಿದೆ. ಜಮೀನು ಬೇಕೆಂದು ಹೇಳುವ ಪಾರ್ಟಿ ಹಾಗೆ ಕ್ವೆರಿ ಹಾಕಿದರೆ ತಮ್ಮ ಹತ್ತಿರ ಬರುತ್ತಾರೆಂದು ಗೊತ್ತು. ಹೀಗೆ ಮಾಡುವುದರಿಂದ ಏನಾದರೂ ತಮಗೆ ಸಿಕ್ಕುತ್ತದೆಂದು ಒಂದು ಉದ್ದೇಶದಿಂದ ಆ ರೀತಿ ಮಾಡುತ್ತಿರುತ್ತಾರೆ. ಇದು ನಮಗೆ ದಿನವಹಿ ನೋಡಿ ಅನುಭವಕ್ಕೆ ಬಂದಿರುವ ವಿಷಯ. ನಾನು ಖಂಡಿತ ಯಾವ ವಿಧವಾದ ಉತ್ಪ್ರೇಕ್ಷೆ ಮಾಡಿ ಹೇಳುತ್ತಿಲ್ಲ. ಇದನ್ನು ಚೆನ್ನಾಗಿ ಗಮನಿಸಬೇಕು. ಕೆಲವು ಸಂದರ್ಭಗಳಲ್ಲಿ ಇದನ್ನು ಸರಿಪಡಿಸುವುದಕ್ಕೆ ಸಾಧ್ಯವಿದೆ. ಅದೇನೆಂದರೆ ಇದಕ್ಕೆ ಅವಕಾಶವಿಲ್ಲದಂತೆ ಇನ್ಸ್ಟ್ರಕ್ಷನ್ ಕೊಡುವುದು. ಇದನ್ನು ಕೂಲಂಕಷವಾಗಿ ಪರಿಶೀಲಿಸಬೇಕಾದ ಒಂದು ಜವಾಬ್ದಾರಿಯಿದೆ. ಅನ್ಯಾಯವಾಗಿ, ಅನಾವಶ್ಯಕವಾಗಿ ಈ ಕ್ವೆರಿ ಹಾಕುವುದಕ್ಕೆ ಅವಕಾಶವಿಲ್ಲದಿರುವ ಹಾಗೆ ನೋಡಿ ಸಂಬಂಧಪಟ್ಟ ಅಧಿಕಾರಿಗಳೂ ಕೂಡ ಸ್ವಲ್ಪ ಸಹಾಯ ಮಾಡಬೇಕಾದ ಅಗತ್ಯವಿದೆ. ಆದ್ದರಿಂದ ಮನಸ್ಸಿಟ್ಟು ಕಣ್ಣುಬಿಟ್ಟು ನೋಡಿ ಹೆಡ್ ಗುಮಾಸ್ತೆಯವರು ಅಥವಾ ಮ್ಯಾನೇಜರು ತೊಂದರೆಮಾಡಲು ಅನಾವಶ್ಯಕವಾಗಿ ಕ್ವೆರಿ ಹಾಕುವುದಕ್ಕೆ ಅವಕಾಶಕೊಡದಂತೆ ಮಾಡಿದರೆ ವರ್ಷಗಟ್ಟಲೆ ಈಗಿನಂತೆ ಫೈಲುಗಳು ನಿಧಾನವಾಗುವುದಕ್ಕೆ ಅವಕಾಶವಿರುವುದಿಲ್ಲ, ಕೆಲಸ ಕಾರ್ಯಗಳೂ ಬೇಗ ಆಗುತ್ತವೆ, ಸಂಬಂಧಪಟ್ಟ ಪಾರ್ಟಿಗಳಿಗೂ ಅನುಕೂಲವಾಗುತ್ತದೆ. ಸರಿಯಾಗಿ ಕೆಲಸ ನಿರ್ವಹಿಸುವ ಉದ್ದೇಶದಿಂದ ಕ್ವೆರಿ ಹಾಕದೆ ದುರುದ್ದೇಶದಿಂದ ಹಾಕುತ್ತಿದ್ದಾರೆ. ಈ ರೀತಿಯಾಗಿ ಮಾಡಿದರೆ ಜನರಿಗೆ ತೊಂದರೆಯಾಗುತ್ತದೆ. ಅನೇಕ ಸಂದರ್ಭಗಳಲ್ಲಿ ನೇರವಾಗಿ ರೈತರ ತೊಂದರೆಗಳು ಸರ್ಕಾರದ ಗಮನಕ್ಕೆ ಬರಲು ಅವಕಾಶವಿರುವುದಿಲ್ಲ. ನೇರವಾಗಿ ಗೊತ್ತಾಗುವುದು ತಾಲ್ಲೂಕು ಆಫೀಸಿನಲ್ಲಿ. ಮೊದಲು ತಾಲ್ಲೂಕು ಆಫೀಸಿನಲ್ಲಿ ಅರ್ಜಿಗಳನ್ನು ಹಾಕುವುದರಿಂದ ಅಲ್ಲೇ ನಿಧಾನವಾದರೆ ಸರ್ಕಾರದವರು ಮಾಡುವ ಉಪಕಾರ ರೈತರಿಗೆ ದೊರೆಯುವುದಿಲ್ಲ. ತಾಲ್ಲೂಕು ಆಫೀಸಿನಿಂದ ರೆಕಾರ್ಡುಗಳು ಡಿಸ್ಟ್ರಿಕ್ಟ್ ಆಫೀಸಿಗೆ ಹೋಗುತ್ತವೆ. ಆಮೇಲೆ ಸೆಕ್ರೆಟೇರಿಯಟ್ ಮುಂತಾದ ಕಡೆಗೆ ಹೋಗಬಹುದು......

Mr. SPEAKER.—There is no time for reply. At 2-30 the guillotine will be applied ; that has been agreed.

Sri D. DEVARAJ URS.—I will finish within two minutes, Sir.

2-30 P.M.

Mr. SPEAKER.—No, I am so sorry. If I create a precedent, I will have to follow it throughout.

Sri D. DEVARAJ URS.—That is all right, Sir.

Mr. SPEAKER.—The question is :

"That a sum not exceeding Rs. 33,69,000 be granted to the Government to defray the charges

(MR. SPEAKER.)

which will come in course of payment during the year ending 31st day of March 1955, in respect of 'Land Revenue'."

The motion was adopted.

DEMAND No. 2—STATE EXCISE.

8. State Excise duties.

MR. SPEAKER.—The second Demand is about the State Excise. Motion moved :

"That a sum not exceeding Rs. 8,86,000 be granted to the Government to defray the charges which will come in course of payment during the year ending 31st day of March 1955, in respect of 'State Excise'."

Effective enforcement of Prohibition.

ಶ್ರೀ ಜಿ. ಶಿವಪ್ಪ (ಹೊಳಲ್ಕೆರೆ).—ಸ್ವಾಮಿ, ನನ್ನ ಖೋತಾ ಸೂಚನೆ ಈ ರೀತಿಯಿದೆ :—

"The demand under the head '8. State Excise Duties' for Rs. 8,86,000 be reduced by Rs. 100 (to urge on the Government the need to enforce prohibition effectively in the State)."

ಅದನ್ನು ಮಂಡಿಸುತ್ತೇನೆ. ಈ ವಿಚಾರವಾಗಿ ನಾನು ಹೆಚ್ಚಾಗಿ ಹೇಳಲು ಅಪೇಕ್ಷೆಪಡುವುದಿಲ್ಲ. ಪಾನನಿರೋಧವು ನಮ್ಮ ಸಂಸ್ಥಾನದಲ್ಲಿ ಜಾರಿಗೆ ಬಂದಮೇಲೆ ಜನರಿಗೆ ಹೆಚ್ಚಿನ ಅನುಕೂಲವಾಗಿದೆ. ಇದರಲ್ಲಿ ವಾದಾಸ್ಪದವಾದ ಅಭಿಪ್ರಾಯವೇನೂ ಇಲ್ಲ. ಆದರೂ ಸಹ ಯಾವರೀತಿಯಲ್ಲಿ ಇದು ಕೆಲಸ ಮಾಡುತ್ತಿದೆಯೆಂಬುದನ್ನು ಗಮನಿಸಿ ಇನ್ನೂ ಹೆಚ್ಚು ಜಯಪ್ರದವಾಗಿ ಕೆಲಸಮಾಡಲೆಂಬ ದೃಷ್ಟಿಯಿಂದ ಕೆಲವಾರು ಸಲಹೆಗಳನ್ನು ಸರ್ಕಾರಕ್ಕೆ ಕೊಡಬೇಕೆಂಬುದೇ ನನ್ನ ಖೋತಾ ನಿರ್ಣಯದ ಬೇಡಿಕೆಯಾಗಿರುತ್ತದೆ.

ಮೊದಲನೆಯದಾಗಿ ಪಾನ ನಿರೋಧ ನಮ್ಮ ಸಂಸ್ಥಾನದಲ್ಲಿ ಕೆಲವು ಜಿಲ್ಲೆಗಳಲ್ಲಿ ಜಾರಿಗೆ ಬಂದಮೇಲೆ ಅಲ್ಲಿ ಯಾವರೀತಿ ಕೆಲಸಮಾಡುತ್ತಿದೆಯೆಂಬುದನ್ನು ನಾವು ಅವಲೋಕಿಸಿದರೆ ಅಲ್ಲಿ ಹೆಚ್ಚಿನ ಮಟ್ಟದಲ್ಲಿ ಜಯಪ್ರದವಾಗದಿರುವ ಪ್ರಯುಕ್ತ ಈ ವಿಚಾರದಲ್ಲಿ ಕೆಲವು ಕುಂದು ಕೊರತೆಗಳಿದ್ದೇ ಇದೆಯೆಂಬುದನ್ನು ನಾವು ಗಮನಿಸಬೇಕಾಗಿದೆ. ಈಗ ಅಲ್ಲಿ ಮುಖ್ಯವಾಗಿ ಒಂದು ಒಳ್ಳೆಯ ವಾತಾವರಣವನ್ನು ಕಲ್ಪಿಸಲು ಅದರ ಪರವಾಗಿ ಹೆಚ್ಚಿನ ಪ್ರಚಾರ ಅತ್ಯಗತ್ಯವೆಂದು ನಾನು ಭಾವಿಸುತ್ತೇನೆ. ಈ ವಿಚಾರವನ್ನೇ ಮದ್ರಾಸು ಸರ್ಕಾರ ಮುಖ್ಯಮಂತ್ರಿಗಳಾದ ಶ್ರೀ ಸಿ. ರಾಜಗೋಪಾಲಾಚಾರ್‌ರವರು ಆಗಾಗ್ಗೆ ಪ್ರಸ್ತಾಪಮಾಡುತ್ತಿದ್ದಾರೆ. ಒಂದು ಪ್ರಾಪೊಗ್ಯಾಂಡ ಕೈಕೊಂಡು ಸಾರ್ವಜನಿಕ ಅಭಿಪ್ರಾಯವು ಇದರ ಪರವಾಗಿದೆಯೆಂದು ಸೂಚಿಸಲು ಒಂದು ಸನ್ನಿವೇಶವನ್ನು ಕಲ್ಪಿಸುವುದು ಅತ್ಯಾವಶ್ಯಕವೆಂದು ನಾನು ಭಾವಿಸುತ್ತೇನೆ. ಅಂಥ ಸನ್ನಿವೇಶವಿದೆಯೆ, ಎಂಬುದನ್ನು ಊಹೆಮಾಡಿದರೆ, ನನ್ನ ಅಭಿಪ್ರಾಯದಲ್ಲಿ, ಹೆಚ್ಚಿನಮಟ್ಟದಲ್ಲಿ ಆ ಸನ್ನಿವೇಶವಿಲ್ಲವೆಂದು ಭಾವಿಸುತ್ತೇನೆ. ಏಕೆಂದರೆ ಪಾನ ನಿರೋಧದ ವಿಚಾರದಲ್ಲಿ ಹೆಚ್ಚಿನ ಕೇಸುಗಳನ್ನು ಹಾಕಬೇಕು, ನುಡಿದಹಾಗೆ ನಡೆಯಬೇಕು ಎಂಬ ಒಂದು ಸದ್ಭಾವನೆ ಎಲ್ಲಾ ಜನರಲ್ಲೂ ಮೂಡುವ ರೀತಿಯಲ್ಲಿ ಸನ್ನಿವೇಶ ಕಲ್ಪಿತವಾಗಿಲ್ಲ ಎಂಬುದು ನನ್ನ ಅಭಿಪ್ರಾಯವಾಗಿದೆ. ಎಲ್ಲಿ ಕೇಸುಗಳು ನಡೆಯುತ್ತಿವೆ, illicit liquor ಎಲ್ಲಿ ತಯಾರಾಗುತ್ತಿದೆ, ಎಲ್ಲಿ ಜನರು ಕುಡಿಯುತ್ತಿದ್ದಾರೆ ಎಂದು ಹೇಳುತ್ತಾರೋ ಅಲ್ಲಿ ಜವಾಬ್ದಾರಿಯುತರಾದ ಜನರು ಹೋಗಿ ಅಂಥ ಕೇಸುಗಳನ್ನು ಕಂಡು ಹಿಡಿಯಬೇಕು. ಮತ್ತು ಜನರು ಪೋಲಿಸಿನವರೊಡನೆ ಸಹಕರಿಸಿ ಕೇಸುಗಳನ್ನು ಬುಕ್‌ಮಾಡಲು ಅವಕಾಶ ಮಾಡದಿರುವ ಸಂದರ್ಭಗಳು ಕಂಡುಬರುತ್ತಿರುವುದೇ ಪಾನ ನಿರೋಧ ಸ್ವಲ್ಪಮಟ್ಟಿಗಾದರೂ ಯಶಸ್ವಿಯಾಗದಿರುವುದಕ್ಕೆ ಕಾರಣವಾಗಿದೆಯೆಂದು ಭಾವಿಸಿದ್ದೇನೆ. ನಾನು ನೋಡಿರುವಹಾಗೆ, ಸಾಧಾರಣವಾಗಿ ಪಾನನಿರೋಧದ ವಿಚಾರದಲ್ಲಿ ಎಲ್ಲಿ ಸರಿಯಾಗಿ ನಡೆಯುತ್ತಿಲ್ಲ, ಎಲ್ಲಿ ಸರಿಯಾಗಿ ನಡೆಯುತ್ತಿದೆ ಎಂಬುದನ್ನು ನೋಡಿ ನಿರೋಧ ಕಾರ್ಯ ಯಶಸ್ವಿಯಾಗುವಂತೆ ಮಾಡಬೇಕೆಂದು ಹೇಳಿದರೆ ಅನೇಕರು 'ನಾವೇನು ಮಾಡಬೇಕು, ನಡೆದರೆ ನಡೆಯುತ್ತದೆ' ಎಂದು ಹೇಳುತ್ತಾರೆ. ಒಂದು ವಿಧದಲ್ಲಿ ಸಾರ್ವಜನಿಕರ ಅಭಿಪ್ರಾಯ ಆ ರೀತಿಯಿರುವುದನ್ನು ನೋಡಿದರೆ ಒಂದು ಸದುದ್ದೇಶದಿಂದ, ಒಳ್ಳೆಯ ದೃಷ್ಟಿಯಿಂದ ಈ ಕಾರ್ಯದ ಮಹತ್ವವನ್ನು ಕೆಲವರು ಸರಿಯಾಗಿ ತಿಳಿದುಕೊಂಡಿರುವಂತೆ ಕಾಣುವುದಿಲ್ಲ. ಇದಕ್ಕೆ ಅತಿ ಮುಖ್ಯವಾಗಿ ಪ್ರಾಪೊಗ್ಯಾಂಡ ಆಗಬೇಕು. ಇದಕ್ಕಾಗಿ ಪ್ರತಿ ಜಿಲ್ಲೆಯಲ್ಲೂ, ಪ್ರತಿ ತಾಲ್ಲೂಕಿನಲ್ಲೂ ಸಮಿತಿ ಸ್ಥಾಪನೆ ಮಾಡುವುದು ಅತ್ಯಾವಶ್ಯಕವೆಂದು ನಾನು ಭಾವಿಸುತ್ತೇನೆ. ಸ್ಥಳೀಯ ಮುಖಂಡರಿಗೂ ಕೂಡ ಈ ವಿಚಾರದಲ್ಲಿ ಹೆಚ್ಚಿನ ಅಭಿಮಾನವುಂಟಾಗಿ ಪೋಲೀಸು ಇಲಾಖೆಯೊಡನೆ ಸಹಕರಿಸುವಂತೆ ಮಾಡಲು ಅವರಲ್ಲಿ ಅದಕ್ಕೆ ತಕ್ಕ ಮನೋಭಾವನೆಯನ್ನು ಕಲ್ಪಿಸಬೇಕು. ಪಟೇಲರು, ಸ್ಥಳದ ಜನರು 'ನಾವೇಕೆ ಕೇಸು ಹಾಕಬೇಕು, ಪೋಲೀಸಿನವರೊಡನೆ ಏಕೆ ಸಹಕರಿಸಬೇಕು, ಒಂದು ಕೇಸು ಹಾಕಿದರೆ 15-20 ಹಿಯರಿಂಗುಗಳಿಗೆ ಮ್ಯಾಜಿಸ್ಟ್ರೇಟರ ಕೋರ್ಟಿಗೆ ತಿರುಗಬೇಕಾಗುತ್ತದೆ, ಆರ್ಡಿನರಿ ಪೋಲಿಸು ಕಾನ್‌ಸ್ಟೇಬಲ್ಲುಗಳಿಗಾದರೆ ಪ್ರಯಾಣ ಭತ್ಯ ಕೊಡುತ್ತಾರೆ, ಅದೇ ಪಾನ ನಿರೋಧದ ಕೇಸುಗಳಲ್ಲಿ ಬಂದ ಸಾರ್ವಜನಿಕರಿಗೆ ಮತ್ತು ಪಟೇಲರಿಗೆ ಸರಿಯಾದ ಬ್ಯಾಟಾ ಕೊಡುವುದಿಲ್ಲ' ಎಂದು ಹೇಳುತ್ತಾರೆ. ಇದನ್ನು ಗಮನಿಸಿ ಕರ್ತವ್ಯ ದೃಷ್ಟಿಯಿಂದ ಇದಕ್ಕೆ ತಕ್ಕ ವ್ಯವಸ್ಥೆ ಮಾಡಬೇಕಾದದ್ದು ಅಗತ್ಯವೆಂದು ನಾನು ತಿಳಿದುಕೊಂಡಿದ್ದೇನೆ. ಸರ್ವಸಾಮಾನ್ಯವಾಗಿ ಹಳ್ಳಿಗಳಲ್ಲಿರುವವರೆಲ್ಲರಿಗೂ ಇದರ ವಿಚಾರ ತಿಳಿಯುವಂತೆ ಒಡನೆ ಒಳ್ಳೆಯ ವಾತಾವರಣ ಕಲ್ಪಿಸಬೇಕು.

ಎರಡನೆಯದಾಗಿ ಕಾನೂನಿನಲ್ಲಿ ಬದಲಾವಣೆ ಮಾಡಬೇಕು. ಸಮಾಜದಲ್ಲಿ ಒಂದು ಪರಿಣಾಮವಾಗುವ ರೀತಿಯಲ್ಲಿ ಎಕ್ಸೆಂಪ್ಲರಿ ಪನಿಷ್‌ಮೆಂಟ್ ಕೊಡುವುದು ಅತ್ಯಾವಶ್ಯಕವೆಂದು ಕಾಣುತ್ತದೆ. ಈಗ ಕೋರ್ಟುಗಳಲ್ಲಿ ನ್ಯಾಯಾಧೀಶರು ಜುಲ್ಮಾನೆ ಹಾಕಬಹುದು ಮತ್ತು ಶಿಕ್ಷೆ ವಿಧಿಸಬಹುದು. ಅದಕ್ಕೆಬದಲಾಗಿ ಶಿಕ್ಷೆಯನ್ನು ಕಂಪಲ್ಸರಿಯಾಗಿ ಮಾಡುವುದು ಅತ್ಯಾವಶ್ಯಕ

ವೆಂದು ಭಾವಿಸುತ್ತೇನೆ. ಇಷ್ಟೇ ಅಲ್ಲದೆ ಜನರಿಗೂ ಭತ್ಯ ಕೊಡತಕ್ಕ ಸೌಲಭ್ಯವನ್ನೊದಗಿಸುವುದು ಅತ್ಯಾವಶ್ಯಕ. ಒಂದೊಂದು ಕೇಸಿಗೂ 10—15 ಹೀರಂಗುಗಳಾಗುತ್ತವೆ. ಅದಕ್ಕೆ ಹೋಗಿಬರಲು ಸೌಲಭ್ಯವನ್ನೊದಗಿಸದಿದ್ದರೆ ಜನರು ಸರಿಯಾಗಿ ಸಹಕರಿಸುವುದಿಲ್ಲ. ಲಾಯರುಗಳ ಕೈಗೆ ಈ ಕೇಸುಗಳು ಸಿಕ್ಕಿದರೆ ಮುಗಿದು ಹೋಗುತ್ತವೆ. ಆಮೇಲೆ ಈ ಕೇಸುಗಳಿಗೆ ಟಾಪ್ ಪ್ರಯಾರಿಟಿ ಕೊಡುವಹಾಗೆ ಏರ್ಪಾಡು ಮಾಡುವುದು ಅತ್ಯಾವಶ್ಯಕ, ಇದನ್ನು ಸ್ಟ್ರಿಕ್ಟಾಗಿ ಎನ್‌ಫೋರ್ಸ್ ಮಾಡಬೇಕು.

ಆಫೀಸರುಗಳ ವಿಚಾರದಲ್ಲಿ ಒಂದು ಮಾತು. ಪಾನನಿರೋಧವು ಜಾರಿಗೆ ಬಂದಿರುವ ಕಡೆ ಕುಡಿಯದಿರುವ ಅಧಿಕಾರಿಗಳನ್ನು ಪೋಸ್ಟ್ ಮಾಡುವುದು ಅತ್ಯಾವಶ್ಯಕ. ಇದು ಸಾರ್ವಜನಿಕರ ಅಭಿಪ್ರಾಯವೆಂದು ತಿಳಿದುಕೊಂಡಿದ್ದೇನೆ. ಕುಡಿಯುವ ಅಭ್ಯಾಸವಿಲ್ಲದಿರುವ ಆಫೀಸರುಗಳು ಪಾನನಿರೋಧಕಾರ್ಯಕ್ಕೆ ನಿಯಮಿಸಲ್ಪಟ್ಟರೆ ಈ ಕಾರ್ಯ ಯಶಸ್ವಿಯಾಗಿಯೂ, ಜಯಪ್ರದವಾಗಿಯೂ ನಡೆಯುತ್ತದೆಂದು ಹೋದ ಸಾಲಿನಲ್ಲಿ ಶ್ರೀ ಪಟ್ಟಾಭಿರಾಮರ್‌ರವರು ಸಹ ಹೇಳಿದ್ದಾರೆ. ಪುನಃ ಅದನ್ನು ಜ್ಞಾಪಕಕ್ಕೆ ತಂದಿದ್ದೇನೆ. ಇಷ್ಟು ಹೇಳಿ ಈ ಖೋತಾ ಸೂಚನೆಯನ್ನು ಸಭೆಯ ಮುಂದಿಡುತ್ತೇನೆ.

Mr. SPEAKER.—Cut motion moved:

"That the demand be reduced by Rs. 100."

ಶ್ರೀ ಎಚ್. ಕೆ. ವೀರಣ್ಣಗೌಡ (ಮದ್ದೂರು).—ಶ್ರೀಮಾನ್ ಶಿವಪ್ಪನವರು ತಂದಿರುವ ಖೋತಾ ನಿರ್ಣಯವನ್ನು ಅನುಮೋದಿಸುತ್ತಾ ಒಂದೆರಡು ಮಾತುಗಳನ್ನು ಹೇಳುತ್ತೇನೆ. ಈ ಪಾನನಿರೋಧ ಜಾರಿಯಲ್ಲಿರುವ ಕಡೆಗಳಲ್ಲಿ ಅದು ಕಾನೂನಿಗನುಸಾರವಾಗಿ ಎಷ್ಟುಮಟ್ಟಿಗೆ ನಡೆಯಬೇಕೋ ಅಷ್ಟುಮಟ್ಟಿಗೆ ನಡೆಯುತ್ತಿಲ್ಲವೆನ್ನುವುದಕ್ಕೆ ಬೇಕಾದಷ್ಟು ಉದಾಹರಣೆಗಳನ್ನು ಕೊಡಬಹುದು. ಮೊನ್ನೆತಾನೆ ನಾನು ಆನೇಕಲ್ ತಾಲ್ಲೂಕಿನಲ್ಲಿ ಪ್ರವಾಸಮಾಡಿದೆ. ಅಲ್ಲಿ ಕಾಂಗ್ರೆಸ್ಸಿನವರೋ ಅಥವಾ ಬೇರೆಯವರೋ ಅಂತೂ ಯಾರೋ ವಿಜಿಲೆನ್ಸ್ ಸಮಿತಿಯೊಂದನ್ನು ಮಾಡಿದ್ದಾರೆಂದು ತಿಳಿಯಿತು. ಆನೇಕಲ್ ತಾಲ್ಲೂಕು ಮದ್ರಾಸು ಪ್ರಾಂತದ ಸರಹದ್ದಿನಲ್ಲಿದೆ. ಮದ್ರಾಸು ಪ್ರಾಂತದಲ್ಲಿ ಪಾನನಿರೋಧ ಜಾರಿಯಲ್ಲಿರುವುದರಿಂದ ಅದಕ್ಕೆ ತೊಂದರೆಯಾಗದಂತೆ ಆ ಸರಹದ್ದಿನ ಸುತ್ತ 10 ಮೈಲಿ ದೂರದಲ್ಲಿರುವ ಆನೇಕಲ್ ತಾಲ್ಲೂಕಿನಲ್ಲೂ ಪಾನನಿರೋಧವನ್ನು ಜಾರಿಗೆ ತಂದಿದ್ದಾರೆ. ಆದರೆ ಅಲ್ಲಿ ಅದು ಸರಿಯಾಗಿ ನಡೆಯುತ್ತಿಲ್ಲ. ಬೆಂಗಳೂರಿನ ಸುತ್ತಮುತ್ತಲಿರುವ ಜನರು ಬೆಳಿಗ್ಗೆ ಸೈಕಲ್ ಮೇಲೆ ಹಾಲನ್ನು ತಂದು ಬೆಂಗಳೂರಿನಲ್ಲಿ ಮಾರುವಂತೆ ಆನೇಕಲ್ ತಾಲ್ಲೂಕಿನಲ್ಲಿ ಕೆಲವರು ಡಬ್ಬಿಗಳಲ್ಲಿ ಹೆಂಡವನ್ನು ತುಂಬಿಕೊಂಡು ಹೋಗಿ ಮಾರುತ್ತಿದ್ದಾರೆಂದು ಕೇಳಿದೆನು. ಇದನ್ನು ಪತ್ತೆಮಾಡಿ ಪೋಲೀಸರ ವಶಕ್ಕೆ ಕೊಟ್ಟರೂ ಕೇಸು ಹಾಕುತ್ತಿಲ್ಲವೆಂದೂ, 'ಅದೇಕೆಂದು ಕೇಳಿದರೆ, ಯಾರಾದರೂ ದೂರುಕೊಟ್ಟರೆ ಅವರು ತಮಗೆ ಲಂಚ ದೊರೆಯದ ಕಾರಣ ಸುಳ್ಳು ಅಪಾದನೆ ಮಾಡುತ್ತಿದ್ದಾರೆಂದು ದೂರು ಕೊಟ್ಟವರ ಮೇಲೆಯೇ ಮಾತು ತಿರುಗಿಸುತ್ತಿದ್ದಾರೆ' ಎಂದು ಕೇಳಿದೆನು. ಅಂತು ಡಬ್ಬಿಗಳಲ್ಲಿ ಹೆಂಡ ತಂದು ಬಹಿರಂಗವಾಗಿ ಬಟವಾಡೆ ಮಾಡುತ್ತಿರುವುದು, ಬಹಿರಂಗವಾಗಿ ನಡೆಯುತ್ತಿದೆ ಎಂದು ಹೇಳಿದರು. ಹಾಗೆಯೇ ಕಾನಕಾನಹಳ್ಳಿ ತಾಲ್ಲೂಕು ಸಹ ಮದ್ರಾಸು ಪ್ರಾಂತದ ಹತ್ತಿರವಿದೆ. ಅಲ್ಲಿ ಇದೇ ರೀತಿಯಲ್ಲಿ ಬೀದಿಯಲ್ಲಿ ಜನರಿಗೆ ಹೆಂಡ ಮಾರುವುದನ್ನು ನಾನು ಖುದ್ದಾಗಿ ನೋಡಿದ್ದೇನೆ. ಆ ದಿನ ನನ್ನ ಜತೆಯಲ್ಲಿ ಶ್ರೀ ಎಸ್. ಕರಿಯಪ್ಪನವರು ಇದ್ದರು. ಹೀಗೆ ಮದ್ರಾಸು ಪ್ರಾಂತದ ಸುತ್ತಮುತ್ತಲಿರುವ ನಮ್ಮ ದೇಶದ ಡ್ರೈಬೆಲ್ಟ್ ಗ್ರಾಮಗಳಲ್ಲಿ ಹೆಂಡ ಮಾರಲು ಅವಕಾಶವಿದೆ. ಇನ್ನೂ ಕೆಲವು ಉದಾಹರಣೆಗಳನ್ನು ಕೊಡಬಹುದು. ಬೆಂಗಳೂರು ಜಿಲ್ಲೆಯ ಚನ್ನಪಟ್ಟಣ ಮತ್ತು ರಾಮನಗರ ತಾಲ್ಲೂಕುಗಳಲ್ಲಿ ಪರೀಕ್ಷಾರ್ಥವಾಗಿ ಅನೇಕ ವರ್ಷಗಳಿಂದಲೂ ಪಾನನಿರೋಧವನ್ನು ಜಾರಿಗೆ ತಂದಿದ್ದರೂ ಸಹ ಅಲ್ಲಿ ಮನೆಗಳಿಗೆ ಹೆಂಡವನ್ನು ತೆಗೆದುಕೊಂಡು ಹೋಗಿ ಹಂಚುತ್ತಿದ್ದಾರೆ ಮತ್ತು ಕಳ್ಳಬಟ್ಟಿ ಸಾರಾಯಿ ತಯಾರಿಸುವುದೇ ಕೆಲವರ ಉದ್ಯೋಗವಾಗಿದೆ ; ಅದರಿಂದ ಕೆಲವರ ಜೀವನ ನಡೆಯುತ್ತಿದೆ.

ಉದಾಹರಣೆಯಾಗಿ, ಚನ್ನಪಟ್ಟಣದಲ್ಲಿ, ಶ್ರೀ ಕೆ. ಸಿ. ರೆಡ್ಡಿಯವರು ಕಾಂಗ್ರೆಸ್ ಅಧ್ಯಕ್ಷರಾಗಿದ್ದ ಕಾಲದಲ್ಲಿ ಹಿಂದೂ ಮುಸ್ಲಿಂ ಗಲಾಟೆಯೊಂದು ನಡೆಯಿತು. ಆಗ ಕೆಲವರಮೇಲೆ ಮೊಕದ್ದಮೆ ಹೂಡಿದ್ದರು. ಅಂಥವರಲ್ಲಿ ಕೆಲವರು ಕೋರ್ಟಿಗೆ ಹೋಗಲು ರೈಲು ವೆಚ್ಚಕ್ಕೂ ಹಣವಿಲ್ಲದೆ ಸಾರ್ವಜನಿಕ ಚಂದಾ ಹಣದಿಂದ ಕೋರ್ಟುಗಳಿಗೆ ಹೋಗುತ್ತಿದ್ದುದು ನನಗೆ ಜ್ಞಾಪಕವಿದೆ. ಅಂಥವರ ಪೈಕಿ ಒಬ್ಬೊಬ್ಬರು ಈಗ ಕಳ್ಳಭಟ್ಟಿ ತಯಾರಿಕೆಯಲ್ಲಿ ನಿರತರಾಗಿದ್ದು ಅದನ್ನು ಕುಡಿತಕ್ಕೆ ಸಿಕ್ಕಿಬಿದ್ದವರಿಗೆ ಒದಗಿಸಿ ಹಣ ಶೇಖರಿಸಿ 50—60 ಸಾವಿರ ರೂಪಾಯಿಗಳ ಆಸ್ತಿವಂತರಾಗಿದ್ದಾರೆಂದು ಕೇಳಿದ್ದೇನೆ. ಇದಕ್ಕೆ ಮುಖ್ಯಕಾರಣ ಪಾನನಿರೋಧ ಜಾರಿಯಲ್ಲಿರುವ ಪ್ರದೇಶದಲ್ಲಿ ಅದನ್ನು ಕಟ್ಟುನಿಟ್ಟಾಗಿ ಪಾಲಿಸಿಕೊಂಡು ಬಾರದೇ ಇರುವುದು. ಪಾನನಿರೋಧವನ್ನು ಕಡ್ಡಾಯವಾಗಿ ಕಟ್ಟುನಿಟ್ಟಾಗಿ ಸಂಸ್ಥಾನಾಮಳೆ ಜಾರಿಗೆ ತರದೇ ಇದ್ದರೆ ಕೆಲವು ಕಡೆಗಳಲ್ಲಿ ಪಾನನಿರೋಧ ಕಾನೂನನ್ನು ನಿಷ್ಪಕ್ಷಪಾತವಾಗಿ, ನಿಷ್ಠುರವಾಗಿ ಜಾರಿಗೆ ತರುವುದು ಬಹಳ ಕಷ್ಟ. ಇದು ಮನುಷ್ಯ ಸ್ವಭಾವವನ್ನು ಅವಲಂಬಿಸಿರುತ್ತದೆ. ಈಗ ಎಲ್ಲೆಲ್ಲಿ ಪಾನನಿರೋಧ ಜಾರಿಯಲ್ಲಿದೆಯೋ ಅಲ್ಲೆಲ್ಲಾ ಕಳ್ಳಭಟ್ಟಿ ತಯಾರಿಕೆ ಮತ್ತು ಮಾರಾಟ ಬಹಳವಾಗಿ ನಡೆಯುತ್ತಿದೆ. ಎಲ್ಲೆಲ್ಲಿ ಪಾನನಿರೋಧ ಜಾರಿಯಲ್ಲಿದೆಯೋ ಅಲ್ಲೆಲ್ಲಾ ಹೆಂಡ, ಸಾರಾಯಿಗಳನ್ನು ಹೊತ್ತುಕೊಂಡು ಹೋಗಿ ಮನೆ ಮನೆಗೆ ಒದಗಿಸುತ್ತಾ, ಸರ್ಕಾರದವರು ತಮ್ಮ ಪಾನನಿರೋಧ ನೀತಿಯನ್ನು ಯಶಸ್ವಿಯಾಗಿ ಮಾಡಬೇಕಾದರೆ ಸಂಸ್ಥಾನಾಮಳೆ ಪೂರ್ಣವಾಗಿ ಪಾನನಿರೋಧವನ್ನು ಆಚರಣೆಗೆ ತಂದು ಅದನ್ನು ಕಟ್ಟುನಿಟ್ಟಾಗಿ ಪಾಲಿಸಿಕೊಂಡು ಬರಬೇಕು. ಇದರಿಂದ ದೇಶದ ವರಮಾನ ಸ್ವಲ್ಪ ಮಟ್ಟಿಗೆ ಕಡಮೆಯಾಗುತ್ತದೆಂದು ಸರ್ಕಾರದವರು ಅಂದುಕೊಳ್ಳಬಹುದು. ಆದರೂ ಸಹ ಒಳ್ಳೆಯದು. ಎಕ್ಸೈಜು ಹರಾಜಿನಿಂದ ಸುಮಾರು ಒಂದೂವರೆ ಕೋಟಿ ರೂಪಾಯಿಗಳ ನಿರೀಕ್ಷಣೆ ಸರ್ಕಾರಕ್ಕಿದೆ. ಈ ವರಮಾನ ಈ ವರ್ಷ ಅಷ್ಟಾಗಿ ಹೆಚ್ಚಾಗಿ ಬರುತ್ತದೆಂಬುದು ಅನುಮಾನ. ಏಕೆಂದರೆ ಶೇಂದಿ ಹರಾಜು ವಿಚಾರದಲ್ಲಿ ಸರ್ಕಾರದವರು ಅನುಸರಿಸುತ್ತಿರುವ ನೀತಿಯ ವಿಚಾರದಲ್ಲಿ ಶೇಂದಿ ಕಂಟ್ರಾಕ್ಟರುಗಳಿಗೆ ಭರವಸೆ ಕಡಮೆಯಾಗುತ್ತಿದೆ. ಇದನ್ನು ನೋಡಿದರೆ ಮುಂದಿನ ವರ್ಷ ಹೆಚ್ಚುಮಂದಿ ಈ ಬಾಬಿನಲ್ಲಿ ಪೈಪೋಟಿ ನಡೆಸುತ್ತಾರೆಂದು ನಿಖರವಾಗಿ ಹೇಳಲು ಸಾಧ್ಯವಿಲ್ಲ. ಇದರಿಂದ ಸುಮಾರು ಒಂದು ಕೋಟಿ

(ಶ್ರೀ ಎಚ್. ಕೆ. ವೀರಣ್ಣಗೌಡ.)

ಅಥವಾ ಅದಕ್ಕಿಂತ ಸ್ವಲ್ಪ ಹೆಚ್ಚಾಗಿ ರೂಪಾಯಿ ವರಮಾನ ಬರಬಹುದು. ಇದು ಬಾರದೆ ಇದ್ದರೂ, ಪರವಾಇಲ್ಲ; ದೇಶಕ್ಕಾದರೂ ಹಿತವಾಗುವುದು. ಸರ್ಕಾರದವರು ಧೈರ್ಯಮಾಡಿ ಸಂಸ್ಥಾನಾ ಮಳೆ ಪೂರ್ಣವಾಗಿ ಪಾನನಿರೋಧವನ್ನು ಜಾರಿಗೆ ತರಬೇಕೆಂದು ಒತ್ತಾಯ ಪೂರ್ವಕವಾಗಿ ಅವರಲ್ಲಿ ವಿನಂತಿಮಾಡಿಕೊಳ್ಳುತ್ತೇನೆ.

*ಶ್ರೀ ಯು. ಎಂ. ಮಾದಪ್ಪ (ಚಾಮರಾಜನಗರ).—ಸ್ವಾಮಿ, ಪಾನನಿರೋಧವನ್ನು ಜಾರಿಗೆ ತಂದಿರತಕ್ಕ ವಿಚಾರದಲ್ಲಿ ಸರ್ಕಾರದವರು ಅನುಸರಿಸಿರತಕ್ಕ ಮಾರ್ಗ, ನಿಯಮ ಮತ್ತು ನೀತಿ ಸಮರ್ಪಕವಾಗಿಲ್ಲವೆಂಬ ಈ ಖೋತಾ ಸೂಚನೆಯನ್ನು ನಾನು ಸಂಪೂರ್ಣವಾಗಿ ಸಮರ್ಥಿಸುತ್ತೇನೆ. ಈ ವಿಚಾರವಾಗಿ ಇದುವರೆಗೆ ಸರ್ಕಾರದವರು ಅನುಸರಿಸಿರುವ ಮಾರ್ಗ ಸಮರ್ಪಕವಾಗಿಲ್ಲವೆಂಬ ಬಗ್ಗೆ ಕೆಲವು ಮಾನ್ಯಸದಸ್ಯರು ತಮ್ಮ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿರುತ್ತಾರೆ. ಈಗ ಪಾನನಿರೋಧ ಕೆಲವು ಜಿಲ್ಲೆಗಳಲ್ಲಿ ಜಾರಿಯಲ್ಲಿದೆ, ಇನ್ನು ಕೆಲವು ಜಿಲ್ಲೆಗಳಲ್ಲಿ ಜಾರಿಯಲ್ಲವೆಂಬುದು ಎಲ್ಲರಿಗೂ ತಿಳಿದ ವಿಷಯವೇ ಆಗಿದೆ. ಈ ಪಾನನಿರೋಧ ಜಾರಿಯಲ್ಲಿರತಕ್ಕ ಕಡೆಗಳಲ್ಲಿ ಆಗುತ್ತಿರುವ ಅನಾಹುತಗಳನ್ನು ಯಾರೂ ಸಮರ್ಥಿಸಲಾರರು. ಅಂತೂ ಈ ಕಳ್ಳಭಟ್ಟಿ ವಿಪರೀತವಾಗಿ ತಯಾರಾಗುತ್ತಿದೆ, ಕಳ್ಳತನದಲ್ಲಿಯೇ ಇದರ ಮಾರಾಟವಾಗುತ್ತಿದೆ, ಇದರಿಂದ ಜನರ ನೈತಿಕ ಮಟ್ಟ ಪತನವಾಗುತ್ತಿದೆಯೆಂದು ತಿಳಿಸಲು ವಿಷಾದವಾಗುತ್ತದೆ. ಇದೂ ಅಲ್ಲದೆ ಆರೋಗ್ಯ ದೃಷ್ಟಿಯಿಂದಲೂ ಸಹ ಇದು ಸರಿಯಲ್ಲವೆಂಬ ಅಭಿಪ್ರಾಯ ಎಲ್ಲರಲ್ಲಿಯೂ ಮೂಡಿದೆ. ಹೀಗಿರುವಾಗ ಒಂದು ಕಡೆ ಜನತೆಯ ನೈತಿಕ ಪತನವಾಗುತ್ತಿರುವುದು, ಇನ್ನೊಂದು ಕಡೆ ಜನತೆಯ ಆರೋಗ್ಯಕ್ಕೆ ಕುಂದುಂಟಾಗುತ್ತಿರುವುದು—ಈ ರೀತಿಯ ಜ್ವಾಲಾಮುಖಿ ಎದ್ದು ಮಾನವಜೀವನದ ಯಶಸ್ಸಿಗೆ ತೊಂದರೆಯಾಗುತ್ತಿರುವಾಗ ಸರ್ಕಾರ ಈ ರೀತಿ ಕಣ್ಣು ಮುಚ್ಚಿಕೊಂಡು ಕೆಲಸಕಾರ್ಯಗಳನ್ನು ನಡೆಸುತ್ತಿರುವುದು ಮುಂದಿನ ಮಾನವಕೋಟಿಗೇ ಧಕ್ಕೆ ತಗುಲಿದಂತಾಗಿದೆಯೆಂದು ಹೇಳದೆ ವಿಧಿಯಿಲ್ಲ. ಸರ್ಕಾರದವರು ಮೊಟ್ಟಮೊದಲು ಇದನ್ನು ಜಾರಿಗೆ ತರುವಾಗ ಅವರು ಹೇಳಿದ್ದು, ಇದರಿಂದ ದೇಶದ ಹಣಕಾಸಿನ ಪರಿಸ್ಥಿತಿ ಹದಗೆಟ್ಟಿದೆ, ಆದಾಯ ಕಡಮೆಯಾಗುತ್ತಿದೆ, ಆದುದರಿಂದ ಸಂಸ್ಥಾನದ ಆರ್ಥಿಕ ಮಟ್ಟವನ್ನು ಹೆಚ್ಚಿಸಬೇಕಾದರೆ ಒಂದು ಮಾರ್ಗ ಹುಡುಕಬೇಕೆಂದು ಹೇಳಿ, ಅದರಂತೆ ಸೇಲ್ಸ್ ಟ್ಯಾಕ್ಸ್ ಜನರಮೇಲೆ ಹೇರಿ ಅದನ್ನು ವಸೂಲುಮಾಡಿಕೊಂಡಿರುತ್ತಾರೆ. ಇನ್ನೊಂದು ಕಡೆ, ಕೆಲವು ಜಿಲ್ಲೆಗಳಲ್ಲಿ ಕರ್ತವ್ಯ ಲೋಪಮಾಡಿರುತ್ತಾರೆ. ಈ ಟ್ಯಾಕ್ಸ್‌ಗೆ ಸಂಬಂಧಪಟ್ಟಹಾಗೆ ಈ ಸಭೆಯ ಮುಂದೆ ಸದ್ಯದಲ್ಲೇ ಮಂಡಿಸಬೇಕೆಂದಿರುವ ತಿದ್ದುಪಡಿ ಮಸೂದೆಯನ್ನು ಸರ್ಕಾರದವರು ಅಗತ್ಯವಾಗಿ ಜಾರಿಗೆ ಬಹುಬೇಗ ತರಲಿ, ಸಂತೋಷ, ಅದನ್ನು ನಾನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆಂದು ತಿಳಿಸಿದರೆ ಯಾರೂ ಈ ವಿಚಾರದಲ್ಲಿ ತಪ್ಪಭಿಪ್ರಾಯಪಡಬಾರದು. ಏಕೆಂದರೆ, ಪಾನನಿರೋಧವನ್ನು ಸಾರ್ವತ್ರಿಕವಾಗಿ ಸಂಸ್ಥಾನಾಮಳೆ ಜಾರಿಗೆ ತರುವುದರಿಂದ ಆರ್ಥಿಕ ಉತ್ಪತ್ತಿಗೆ ಧಕ್ಕೆ ಬರುತ್ತದೆಂಬ ಭಾವನೆ ಸರ್ಕಾರಕ್ಕಿದ್ದರೆ ಆ ಉತ್ಪತ್ತಿಯನ್ನು ಈ ಸೇಲ್ಸ್‌ಟ್ಯಾಕ್ಸ್ ಬಾಬಿನಿಂದ ಸರ್ಕಾರ ಪಡೆಯುವುದಾಗಿದ್ದರೆ ಜನತೆ ಅದನ್ನು ಅಗತ್ಯವಾಗಿ ಕೊಡಲು ಒಪ್ಪಬೇಕು. ಏಕೆಂದರೆ, ಈ ಪಾನನಿರೋಧ ನೀತಿಯು ಸಂಸ್ಥಾನಾಮಳೆ ಯಶಸ್ವಿಯಾಗಿ ಜಾರಿಗೆ ಬರುವುದಾಗಿದ್ದರೆ ಅದರಿಂದ ಜನತೆಯ ನೈತಿಕ ಪತನವಾಗುವುದಿಲ್ಲ, ನೈತಿಕಮಟ್ಟ ಹೆಚ್ಚುತ್ತದೆ. ಮದ್ರಾಸ್ ಪ್ರಾಂತ್ಯದಲ್ಲಿ ಈ ಪಾನನಿರೋಧವು ಜಾರಿಯಲ್ಲಿರುವುದರಿಂದ ಆ ಪ್ರಾಂತ್ಯದ ಸರಹದ್ದಿನಲ್ಲಿರುವ ಯಾವ ಯಾವ ಮೈಸೂರು ಪ್ರಾಂತ್ಯದ ಪ್ರದೇಶದಲ್ಲಿ ಇದು ಜಾರಿಯಲ್ಲಿಲ್ಲವೋ ಅಲ್ಲಿ ಈ ದಿನ ಕುಡಿತಕ್ಕೆ ಸಿಕ್ಕಿಬಿದ್ದಿರುವವರ ಜನಸಾಂದ್ರತೆ ಹೆಚ್ಚಾಗಿದೆ. ಇದನ್ನು ತಡೆಗಟ್ಟುವುದಕ್ಕಾದರೂ ನಮ್ಮ ಸರ್ಕಾರದವರು ಸಂಸ್ಥಾನದ ಎಲ್ಲಾ ಜಿಲ್ಲೆಗಳಲ್ಲಿಯೂ ಈ ಪಾನನಿರೋಧವನ್ನು ಜಾರಿಗೆ ತರಬೇಕೆಂದು ಪ್ರಾರ್ಥನೆ ಮಾಡುತ್ತೇನೆ.

ಶ್ರೀ ಟಿ. ಮರಿಯಪ್ಪ (ಮೈಸೂರು ಉತ್ತರ).—ಒಂದೇ ಮಾತಿನಲ್ಲಿ ಈ ವಿಚಾರವಾಗಿ ನಾನು ತಿಳಿಸಬೇಕೆಂದಿರುವುದೇನೆಂದರೆ, ಸಂಸ್ಥಾನಾದ್ಯಂತವೂ ಕಟ್ಟುನಿಟ್ಟಾಗಿ ಈ ಪಾನ ನಿರೋಧವನ್ನು ಜಾರಿಗೆ ತರಲು ಸರ್ಕಾರ ಸರ್ವ ಪ್ರಯತ್ನವನ್ನೂ ಮಾಡಬೇಕು.

ಶ್ರೀ ಬಿ. ಹುಚ್ಚೇಗೌಡ (ತುರುವೇಕೆರೆ).—ಇದುವರೆಗಾಗಲೇ ಈ ವಿಚಾರವಾಗಿ ಮೂವರು ನಾಲ್ವರು ಮಾನ್ಯ ಸದಸ್ಯರು ಮಾತನಾಡಿದ್ದಾರೆ. ಅವರೆಲ್ಲರೂ ಸಂಸ್ಥಾನದಲ್ಲಿ ಸರ್ಕಾರದವರು prohibitionನನ್ನು effective ಆಗಿ ಜಾರಿಗೆ ತರಬೇಕೆಂದು ಹೇಳಿರುತ್ತಾರೆ. ಆ ರೀತಿ ಆಗಲು ಪ್ರಚಾರ ಕಾರ್ಯವನ್ನೂ ನಡೆಸಬೇಕೆಂದು ಕೆಲವರು ಸೂಚಿಸಿರುತ್ತಾರೆ. ಈ ಪಾನನಿರೋಧ ನೀತಿಯು ಕಾಂಗ್ರೆಸ್ ಸರ್ಕಾರದ accepted principles ಪೈಕಿ ಒಂದು. ಆದರೂ ಸರ್ಕಾರದ ಇಂದಿನ ಪಾನನಿರೋಧ ನೀತಿ ಸಮರ್ಪಕವಾಗಿಲ್ಲವೆಂಬುದು ಪ್ರತಿಯೊಬ್ಬರಿಗೂ ಗೋಚರವಾಗಿದೆ. ಈ ನೀತಿ ಪತನವಾಗಿ, ಪಾನನಿರೋಧ ಜಾರಿಯಲ್ಲಿರುವ ಪ್ರದೇಶಗಳಲ್ಲಿ ಸಹ ಇದು ಯಶಸ್ವಿಯಾಗಿ ಜರುಗುತ್ತಿಲ್ಲ. ಜನತೆ, ಅಧಿಕಾರವರ್ಗ ಒಂದು ವಿಧವಾದ temptationಗೆ ಈಡಾಗಿದ್ದಾರೆಂದು ಹೇಳದೆ ವಿಧಿಯಿಲ್ಲ. ಕೆಲವೆಡೆಗಳಲ್ಲಿ ಕುಡಿತಕ್ಕೆ ಆಸ್ಪದ ಕೊಟ್ಟಿರುವುದು, ಇನ್ನು ಕೆಲವೆಡೆಗಳಲ್ಲಿ ಕುಡಿತವನ್ನು ನಿಷೇಧಿಸಿರುವುದು—ಈ ನೀತಿ ಎಂದಿಗಾದರೂ ಸರ್ಕಾರಕ್ಕೆ ಕೀರ್ತಿ ತರತಕ್ಕುದೇ? ಅದಕ್ಕಾಗಿಯೇ ಕಾಂಗ್ರೆಸ್ ಅಧ್ಯಕ್ಷರೂ ಮತ್ತು ಈ ಸಭೆಯ ಮಾನ್ಯ ಸದಸ್ಯರೂ ಆದ ಶ್ರೀ ಎಚ್. ಕೆ. ವೀರಣ್ಣಗೌಡರು ಪಾನನಿರೋಧವನ್ನು ಸಂಸ್ಥಾನಾದ್ಯಂತವೂ ಜಾರಿಗೆ ತನ್ನಿ ಎಂದು ಹೇಳಿರುವುದು. ಸರ್ಕಾರದವರು ಈ ವಿಚಾರದಲ್ಲಿ ಹಿಂದು ಮುಂದು ನೋಡದೆ, ಏನೇ ಕಷ್ಟಬರಲಿ ಅದಕ್ಕೆ ಮನಗೊಡದೆ ಕಡ್ಡಾಯವಾಗಿ ಪಾನನಿರೋಧವನ್ನು ಸಂಸ್ಥಾನಾದ್ಯಂತವೂ ಜಾರಿಗೆ ತರಬೇಕು. ಸರ್ಕಾರದವರು ಈ ನೀತಿಯನ್ನು ಚಾಚುತಪ್ಪದೇ ಪಾಲಿಸಿಕೊಂಡು ಬರಲು ಅಸಮರ್ಥರಾಗಿದ್ದರೆ ಕೂಡಲೇ ತಮ್ಮ ಅಸಮರ್ಥನೆಯನ್ನು ಒಪ್ಪಿಕೊಂಡುದರ ಕುರುಹಾಗಿ ರಾಜೀನಾಮೆಯನ್ನು ಸಲ್ಲಿಸಬೇಕೆಂದು ಅರಿಕೆ ಮಾಡುತ್ತೇನೆ.

ಶ್ರೀ ಟಿ. ಮರಿಯಪ್ಪ.—ಈವಿಚಾರವಾಗಿ ಮುಖ್ಯಾಂಶಗಳನ್ನು ಸಂಕ್ಷೇಪವಾಗಿ ತಿಳಿಸಿಬಿಡುತ್ತೇನೆ: ಶ್ರೀ ಜಿ. ಶಿವಪ್ಪನವರು ಹೇಳಿದ ಹಾಗೆ ಈ ಪಾನನಿರೋಧದ ವಿಚಾರದಲ್ಲಿ ಖಚಿತವಾದ ನೀತಿಇರಬೇಕು. ಅದನ್ನು ಕಟ್ಟುನಿಟ್ಟಾಗಿ enforce ಮಾಡುವುದಕ್ಕೆ ದಾರಿ ಇರಬೇಕು. ಈ ವಿಚಾರದಲ್ಲಿ ರೂಲ್ಸ್ ಪ್ರಕಾರವೇ ನಡೆದುಕೊಂಡು ಹೋಗಬೇಕೆಂದು ತೀರ್ಮಾನಿಸುವುದಕ್ಕಾಗುವುದಿಲ್ಲ. ಸಭೆಯ ಬಹುಮತಾಭಿಪ್ರಾಯಕನುಸಾರವಾಗಿ ಈ ವಿಚಾರದಲ್ಲಿ ಒಂದು ಮಾರ್ಗ ಅನುಸರಿಸಬೇಕು. ಪಾನನಿರೋಧ ಜಾರಿಗೆ ತಂದಕಡೆ ಕಳ್ಳಭಟ್ಟಿ

ತಯಾರಿಕೆಗೆ ಎಂದಿಗೂ ಅವಕಾಶ ಕೊಡಬಾರದು. ಚನ್ನಪಟ್ಟಣ, ಆನೆಕಲ್, ಕಾನಕಾನಹಳ್ಳಿ ತಾಲ್ಲೂಕುಗಳಲ್ಲಿ illicit tapping ಆಗುತ್ತಿರುವ ಅಂಶವನ್ನು ಈಗಾಗಲೇ ಶ್ರೀ ಎಚ್. ಕೆ. ವೀರಣ್ಣಗೌಡರು ಸಭೆಯ ಗಮನಕ್ಕೆ ತಂದಿದ್ದಾರೆ. ಇಂಥದಕ್ಕೆ ಅವಕಾಶ ಕೊಡಲೇಬಾರದು. ಸಂಸ್ಥಾನಾ ಮಳೆ ಪಾನನಿರೋಧವನ್ನು ಜಾರಿಗೆ ತರಲು ಸರ್ಕಾರದವರು ಸತತ ಪ್ರಯತ್ನಮಾಡಬೇಕು. ಅದರಲ್ಲಿಯೂ ತ್ವರಿತವಾಗಿ ಈಗ ಹಾಸನ ಜಿಲ್ಲೆಯಲ್ಲಿ ಇದನ್ನು ಪೂರ್ಣವಾಗಿ ಜಾರಿಗೆ ತರಬೇಕು. ಈ ವಿಚಾರದಲ್ಲಿ ನಿರ್ದಿಷ್ಟವಾದ ಕಾರ್ಯಕ್ರಮ ಹಾಕಿಕೊಂಡು ಪಾನನಿರೋಧ ನೀತಿಯನ್ನು ಅಚ್ಚಳಿಯದೇ ಸರ್ಕಾರದವರು ಪರಿಪಾಲಿಸಿಕೊಂಡು ಬರಬೇಕೆಂದು ಸೂಚಿಸುತ್ತೇನೆ.

Sri T. CHANNIAH (Minister for Public Health and Local Self-Government).—Sri Sivappa has urged for stricter enforcement of prohibition. Some other members have also supported it. They have raised certain other points not altogether relevant to the subject matter of the cut motion. But I wish to answer the point raised in the cut motion of Sri G. Sivappa.

There are some difficulties in strictly enforcing prohibition. I may quote the findings of the Ramamurthy Committee. These findings deserve earnest consideration. The four important factors which militate against stricter enforcement of prohibition are—

1. The failure in enforcement is attributable to lack of public opinion.
2. Corruption among officials.
3. Natural craving for drink on the part of old addicts.
4. Economic motive which exploits its tools and victims by making and setting expensive and deleterious stuff.

3 P.M.

These are the four points on which the Committee has given its findings. Apart from this, Sir, I wish to mention that in our State ever since the introduction of prohibition, in six districts and four taluks of the State, the Police Department is doing their best to achieve the desired object. There has been a substantial increase in the number of cases detected. Police have been sufficiently vigilant. Greater vigilance on their part has been responsible for the increase in the number of cases detected.

Mr. SPEAKER.—I am sorry, you do not come to the point. Evidently you will take some more time. I will have to put the Demand to the vote of the House. The question is:

> "That a sum not exceeding Rs. 8,86,000 be granted to the Government to defray the charges which will come in course of payment during the year ending 31st day of March 1955, in respect of 'State Excise'."

The motion was adopted.

DEMAND No. 3—STAMPS.

9. Stamps.

Mr. SPEAKER.—It is understood that cut motions in respect of the next demand will not be moved. I therefore put the demand to the vote of the House. The question is:

> "That a sum not exceeding Rs. 2,81,000 be granted to the Government to defray the charges which will come in course of payment during the year ending 31st day of March 1955, in respect of 'Stamps.'

The motion was adopted.

The House will now rise for lunch and meet at 3-30.

The House adjourned for Lunch at Two Minutes past Three of the Clock and reassembled at Thirty Minutes past Three of the Clock.

[MR. SPEAKER in the Chair.]

DEMAND No. 4—FOREST.

10.—Forest.

Mr. SPEAKER.—Motion moved:-

> "That a sum not exceeding Rs. 42,36,800 be granted to the Government to defray the charges which will come in course of payment during the year ending 31st day of March 1955, in respect of Forest."

Working of the Forest Department.

Sri B. T. KEMPA RAJ (Bangalore South—Scheduled Castes).—Sir, with the kind permission of the Chair, I beg to move:

"That the demand under the head '10. Forest' for Rs. 42,36,800 be reduced by Rs. 100 (to raise a debate on the working of the Forest Department)."

Sir, it is a well-known fact that the Forest is a very good wealth from the point of view of the State. When there was no density of the population, the Government occupied almost all the lands considering it as forest; and the State has also done its best to maintain these forests. Now-a-days, Sir, these forests are becoming de-forested in one sense. The valuable trees in many forests have been cut down without the knowledge of the Government. Sir, it is true that the Government is maintaining a department called the Forest Department with very good and efficient officers. There is the Forest Ranger Officer, and there is the Forest Guard in the lower cadre and there is the District Forest Officer in the Department. There is also the Conservator of Forests. With all this, Sir, forests are deteriorating in their existence. In my own constituency, to give an example, though a big area nearly 1,000 acres is called forest, there is not even a single tree standing; there is nothing there except vacant space; and in most of the forests, Sir, the area consisting of forest, is forest for name's sake and there grows nothing. Sir, it is a well-known fact even now, after the advent of Independence, that there is dire necessity for the grant of lands for agricultural purposes. The Government now and then has released some parts of the forest which they might have felt it is not necessary to retain. The Government also is pursuing a policy that there should be at least 30 per cent of the land reserved for forests. Unfortunately, at present, we can only say that there is 15 or 14 per cent of land remaining as forest. Sir, I want to submit only one matter for consideration of the Government. The lowest cadre officials in forests are not taking keen interest in the maintenance of trees and other conditions of the forest. Most of us pretty well know that these officers in the lower cadre try to help the public or some persons who want to steal or knock away wood from the forests. Even most of the persons who bring wood from the forests will have no licence issued from the concerned Department. The reason is that the officials in the lower cadre have been trying to dupe the Government in one sense and are not taking particular interest to safeguard or protect the trees there. Therefore, Sir, I want to bring to the notice of the Government that, whatever the reason, the Government may make up its mind to grow trees in the areas of the forests and let the areas of such forests where there is nothing growing and where nothing can be grown, be released for the purpose of agriculture; thereby the dire necessity to release some lands for the landless may be met. The Forest Department may also be given sufficient work to grow the required trees. Thereby they may get revenue to the State. Thank you, Sir.

Mr. SPEAKER.—Cut motion moved:

"That the demand be reduced by Rs. 100."

Sri V. M. MASCARENHAS (St. John's Hill).—Sir, Sri B. T. Kemparaj in his cut motion has brought in a curious combination. In one breath he says that the forests are depleted and that the Government should have good plantations; and in another breath, he says, give all the forest lands you have got for agricultural purposes. I do not exactly know what was in his mind. Sir, the need to conserve and develop our forests is no doubt very great. As it is, hardly 15 per cent of our land is forest land and it has already been pointed out by me to the Government two years ago that this is a very unsatisfactory state of affairs. In other countries, it has been found out emperically that no less than 25 per cent of the land should be set apart as forest land, because

forests are not only an asset in the shape of yielding revenue to the State, but they have an additional advantage in conserving the moisture of the atmosphere and in preventing soil erosion. In view of all this, it is rather important that forests must be maintained and maintained unimpaired and it will not be wise in going on reducing the forest wealth which is already very low in this country. I personally feel, Sir, that the Department has gradually forgotten the theory of plantation altogether. I would like to know, when the Hon'ble Minister answers, what exactly has been the increase in the forest growth for the last five years in the State. It is all right for the Minister to say we have got a revenue of 82 lakhs. When God-given trees are cut down yielding revenue to the Government, can the Minister give me an assurance that for every tree that is cut, another tree is growing ? If this state of affairs is allowed to continue I must warn the Government that the day of retribution will soon be at hand.

Secondly, Sir, though forests have been depleted, this is no excuse that forest lands should be given for agricultural purposes. I ask, Sir, is there not enough fallow land ? Is there not enough cultivable land for being given for agricultural purposes ? Why then should you cast your eye on the poor forests ?—a land which can be used for better purposes. I am not against land being given to anybody. But of all land, why only the forest land ? I sincerely hope that the Government will lay down definite policies in the matter and will in future guarantee that the forest lands, as far as possible, will not be given for agriculture purposes in a light hearted manner and that they would try their utmost to see that a tree grows—perhaps even two trees grow,—where one has been cut.

Sri H. C. LINGA REDDY (Malur).—Sir, while welcoming the cut motion that has been moved by my friend Sri B. T. Kemparaj, I would like to say a few words.

Forests in our State today are only desolate land. Forests are full of herbs and shrubs and there is no tree at all. Even the small number of trees that are there are being cut by people and Government are not taking any steps to prevent such indiscriminate cutting of trees nor have they put forward any schemes for tree plantation. Government have a number of schemes for tree plantations in forests and otherwise, in connection with the Birthday of His Highness the Maharaja, the Birthday of Mahatma Gandhi and so on. However much the Government make their efforts to promote the planting of trees, very few plants have come up and grown into big trees. In the district of Kolar, I am reminded of the fact that the previous Government had resorted to a scheme for planting a number of cuttings but immediately after sometime, they were taken away by the people and to-day we see no plant coming up nor is transplanting in vogue. Again there was the all-India scheme for tree planting in our District inaugurated by the then Minister for Food and Agriculture, Sri K. M. Munshi. But not a single plant can you see to-day. Again, Sir, this coupe system of cutting trees, particularly in Kolar and other maidan areas, has been singularly responsible for depleting the already meagre forest wealth in those parts, with the result. at present in many of the forests, we do not have any trees worth the name. If to-day you go through some of these forests, you will find only vast expanses of land with only herbs and shrubs and even where there are a few trees, they are being given away for fuel purposes. It is said, Sir, that the presence of trees in forests will be a source for attracting clouds and bringing rain. In spite of this, we see that these plantations are being given away for fuel purposes and specially in Kolar District; though we have been making repeated requests to Government that these areas should not be given away as coupe for fuel purposes, still the Government have not been heeding.

Another thing, Sir. If the Government had paid sufficient attention to preserve the forest wealth of the State, I am sure they would have yielded very

(SRI H. C. LINGA REDDY.)

good income and we need not have to resort to taxation proposals with which we have been going on at present. We have not been receiving enough income from the Forest Department. Even in the khedda operations, if the Government pays more attention, they can bring in a good deal of money. They can send these elephants which they capture there, to the various parts of the world and make a good deal of money by that. I feel that it is very necessary that our Forest Department is re-organized and a definite scheme of afforestation is launched and the forests bring good income to our coffers.

ಶ್ರೀ ಬಿ. ಸಿ. ನಂಜುಂಡಯ್ಯ (ಕೋಲಾರ).—ಸ್ವಾಮಿ, ಅರಣ್ಯವಿರುವುದು ಕೇವಲ ಹಣ ಸಂಪಾದನೆಗೆ ಎಂದು ನನಗೆ ಕಾಣುತ್ತಿದೆ. ಆದರೆ ಅದರ ಅಭಿವೃದ್ಧಿಗೆ ಸಾಕಾದಷ್ಟು ಗಮನ ಕೊಡುತ್ತಿಲ್ಲವೆಂದು ಬಹಳ ವಿಷಾದದಿಂದ ಹೇಳಬೇಕಾಗಿದೆ. ಮೊದಲನೆಯದಾಗಿ ನಾನು ಹೇಳುವುದಾದರೆ ಅರಣ್ಯಗಳಲ್ಲಿ free grazing ಗೆ ಅವಕಾಶ ಕೊಟ್ಟಿದ್ದೇವೆ. ಮೇವಿಗೆ ಅಭಾವ ವಿರುವಾಗ ಅಂಥ ಕಡೆ ಹೀಗೆ ಅವಕಾಶ ಕೊಡುವುದೇನೋ ಸರಿ. ಆದರೆ ಯಾರು ಕಾಡಿಗೆ ದನಗಳನ್ನು ಹೊಡೆದುಕೊಂಡು ಹೋಗುತ್ತಾರೋ ಅವರು ಮಚ್ಚು, ಕೊಡಲಿ ತೆಗೆದುಕೊಂಡುಹೋಗಿ ದನ ಮೇಯಿಸುವಾಗ ಕೈಗೆ ಸಿಕ್ಕಿದ ಕೊಂಬೆಗಳನ್ನು ಕಡಿಯುತ್ತಾರೆ, ಇದನ್ನು ತಪ್ಪಿಸಬೇಕು. ಬಳ್ಳಾರಿಯಲ್ಲಿ ಅರಣ್ಯದ ವಿಚಾರ ಬಹಳ ಕಟ್ಟುನಿಟ್ಟಾಗಿದೆಯೆಂದು ಹೇಳುತ್ತಾರೆ. ಅದೇ ರೀತಿ ನೀತಿಯನ್ನು ಇಲ್ಲಿಗೂ ಅನ್ವಯಿಸಬೇಕು. ಜೊತೆಗೆ ಕೂಪುಗಳನ್ನು ಕೊಡುವಾಗ ಎಲ್ಲಿ ಯಾವ ಮರಗಳನ್ನು ಕಡಿಯುತ್ತಾರೆಂದು ಸಾಕಾದಷ್ಟು ನಿಗಾ ಇಡುತ್ತಿಲ್ಲವೆಂದು ಹೇಳಬೇಕಾಗಿದೆ. ಎಲ್ಲೆಲ್ಲಿ ಮೈನರ್ ಫಾರೆಸ್ಟ್ ಪ್ರಾಡ್ಯೂಸ್ ಇದೆಯೋ, ಎಲ್ಲೆಲ್ಲಿ ಉತ್ಪತ್ತಿಯಿರುವ ಕಾಡಿದೆಯೋ, ಅಲ್ಲಿ ಕೂಪ್ ಕೊಡುವುದು ಬಹಳ ಅನ್ಯಾಯ. 1942 ನೆಯ ಇಸವಿಯಿಂದ ಇದ್ದಲಿನ ಕೂಪು ಕೊಡುವ ಅವಾಂತರ ಹೆಚ್ಚಿ ಹುಣಿಸೆ ಮರ, ಅಳಲೇಕಾಯಿ ಮರ ಮುಂತಾದುವನ್ನೆಲ್ಲಾ ಕಡಿದು ಹಾಕಿದ್ದಾರೆ, ಇದನ್ನು ಯಾರೂ ನೋಡುತ್ತಿಲ್ಲ. ಅಲ್ಲದೆ ಜಮೀನಿಗೆ ದರಖಾಸ್ತು ಹಾಕುತ್ತಾರೆ. ಆಗ ಎಲ್ಲಿ ಗಿಡಗಳಿಲ್ಲ, ಯಾವ ಜಾಗ ಅರಣ್ಯ ಸಂಪತ್ತಿಗೆ ಅನುಕೂಲವಾಗಿಲ್ಲ, ಎಲ್ಲಿ ಗಿಡಗೆಂಟೆ ಬೆಳೆಯುವುದಿಲ್ಲ ಎಂಬುದನ್ನು ನೋಡಿ ಅಂಥ ಜಾಗಗಳನ್ನು ಮಾತ್ರ ಕೊಡುತ್ತಿಲ್ಲವೆಂದು ಕಾಣುತ್ತದೆ. ಅರಣ್ಯ ಮಧ್ಯದಲ್ಲಿ ಕಾಡು ಗಿಡಗಳನ್ನು ಬೆಳೆಸುವ ಜಾಗವನ್ನು ಅರಣ್ಯ ತಾನಾಗಿ ತಾನೇ ಬೆಳೆದು ಉತ್ಪತ್ತಿಯಾಗುವ ಪ್ರದೇಶವನ್ನು ವ್ಯವಸಾಯಕ್ಕೆ ಕೊಡುವುದನ್ನು ತಪ್ಪಿಸಬೇಕು.

ಇನ್ನೊಂದು ಹೇಳುವುದಾದರೆ, ಅರಣ್ಯಗಳನ್ನು ಹರಾಜು ಮಾಡುವಾಗ ನೇರವಾದ ವ್ಯವಹಾರ ನಡೆಸುವುದು ಒಳ್ಳೆಯದು. ಈ ವ್ಯವಹಾರವನ್ನು ವ್ಯಾಪಾರ ದೃಷ್ಟಿಯಿಂದ ಮಾಡುವುದನ್ನು ವ್ಯಾಪಾರ ದೃಷ್ಟಿಯಿಂದ ನಡೆಸಬೇಕು. ಅರ್ಜಿ ತೆಗೆದುಕೊಂಡು ಈ ಬಾಬನ್ನು ಕೊಟ್ಟಮೇಲೆ ಅಥವಾ ಒಂದು ಸಲ ಹರಾಜುಮಾಡಿದಮೇಲೆ ಇನ್ನೊಬ್ಬರಿಗೆ ಟೆಂಡರು ಕರೆದು ಕೊಡುವುದು ಸರಿಯಲ್ಲ. ಹಾಗೆ ಮಾಡಿದರೆ ಅದರ ಪ್ಯೂರಿಟಿ ಹೋಗಿ ಹರಾಜುಗಳಲ್ಲಿ ಜನರಿಗೆ ನಂಬಿಕೆ ತಪ್ಪಿಹೋಗುತ್ತದೆ. ತಂಗಡಿ ಚಕ್ಕೆ ಹರಾಜು ಅಥವಾ ಫಾರೆಸ್ಟು ಹರಾಜನ್ನು ವ್ಯಾಪಾರ ದೃಷ್ಟಿಯಿಂದ ಮಾಡುವುದು ಒಳ್ಳೆಯದು. ಒಂದು ಸಲ ಪಬ್ಲಿಕ್ಕಾಗಿ ಹರಾಜು ಮಾಡಿ ಏನೋ ಕಾರಣದಿಂದ, ಜಾಸ್ತಿಯಾಗಿ ಬಿಡ್ ಮಾಡಲಿಲ್ಲವೆಂದೋ ಅಥವಾ ಬೇರೆ ಕಾರಣದಿಂದಲೋ ಆ ಹರಾಜನ್ನು ಮಂಜೂರು ಮಾಡದೆ ಬೇರೆಯವರಿಂದ ಅರ್ಜಿಗಳನ್ನು ತೆಗೆದುಕೊಂಡು ಅವರಿಗೆ ಕಂಟ್ರಾಕ್ಟುಗಳನ್ನು ಮಂಜೂರು ಮಾಡಿದರೆ, the sanctity of public auction ಹೊರಟು ಹೋಗುತ್ತದೆ. ಒಂದು ಸಲ ಹರಾಜುಮಾಡಿದಾಗ ಅಕಸ್ಮಾತ್ ಒಂದು ಕನ್ಸೆಷನ್ ಸಿಕ್ಕಿ ಸ್ವಲ್ಪ ಕಡಮೆ ಬರುವುದಾದರೂ ಅದರಿಂದೇನೂ ಬಾಧಕವಿಲ್ಲ. ಹರಾಜಿನಲ್ಲಿ 5 ಸಾವಿರಕ್ಕೆ ತೆಗೆದುಕೊಂಡು ಒಂದು ವರ್ಷ 4 ಸಾವಿರ ರೂಪಾಯಿಗಳು ಲಾಭ ಬಂದರೆ ಮುಂದೆ 20 ಸಾವಿರ ರೂಪಾಯಿಗಳಿಗೆ ಟೆಂಡರು ಕೊಡುವುದಕ್ಕೆ ಅವನೇ ಬರುತ್ತಾನೆ. ಆದ್ದರಿಂದ ಪಬ್ಲಿಕ್ ಹರಾಜಾದಮೇಲೆ ರಿವ್ಯೂ ಮಾಡುವುದಿಲ್ಲ, ಯಾವುದೇ ಕಾರಣಕ್ಕಾಗಲಿ ಅದನ್ನು ಬದಲಾಯಿಸುವುದಿಲ್ಲ ಎಂದು ಹರಾಜಿಗೆ ಹೋಗುವ ಜನರಿಗೆ ಗೊತ್ತಾದರೆ ಕಾಂಪಿಟೀಷನ್ ಹೆಚ್ಚಾಗಿ ಬರುತ್ತದೆ ಅದರ ಸತ್ಯತೆ ಹೆಚ್ಚಿ ನಂಬಿಕೆ ಬರುತ್ತದೆ. ಆದ್ದರಿಂದ ರಿವ್ಯೂ ಮಾಡುವುದನ್ನು ತಪ್ಪಿಸಿ ಜನರಿಗೆ ಈ ಹರಾಜುಗಳ ಸತ್ಯತೆಯಲ್ಲಿ ನಂಬಿಕೆ ಬರುವ ಹಾಗೆ ಮಾಡುವುದು ಒಳ್ಳೆಯದು.

ಇನ್ನೊಂದು ವಿಷಯ ಹೇಳುವುದಾದರೆ, ಫಾರೆಸ್ಟುಗಳಲ್ಲಿ ಹಿಂದಿನ ಕಾಲದಲ್ಲಿ ಫಾರೆಸ್ಟ್ ಲಾಡ್ಜುಗಳನ್ನು ಕಟ್ಟಿದ್ದಾರೆ. ಅಲ್ಲಿಗೆ ಹೋಗುವುದಕ್ಕೆ ಕಾಂಟೂರ್ ಲೈನಿನಲ್ಲಿ ಒಳ್ಳೆ ರಸ್ತೆಯಿದೆ. ನಮ್ಮ ಡಿಸ್ಟ್ರಿಕ್ಟಿನಲ್ಲಿ 1924ರಲ್ಲಿ ಒಂದು ರಸ್ತೆ ಮಾಡಿದ್ದಾರೆ. ಈ ಮೂವತ್ತು ವರ್ಷಗಳಿಂದ ಆ ರಸ್ತೆ ರಿಪೇರಿಯಾಗಿಲ್ಲ. ಪ್ರತಿ ವರ್ಷ 500 ರೂಪಾಯಿಗಳನ್ನು ರಿಪೇರಿಗಾಗಿ ಕೊಟ್ಟಿದ್ದರೆ ಅಥವಾ ಸ್ಪೆಷಲ್ ರಿಪೇರ್ಸ್‌ಗೆ 2 ಸಾವಿರ ರೂಪಾಯಿಗಳನ್ನು ಕೊಟ್ಟಿದ್ದರೆ ಬಹಳ ಉತ್ತಮ ಸ್ಥಿತಿಯಲ್ಲಿರುತ್ತಿತ್ತು. ಹಾಗೆ 5-6 ಸಾವಿರ ರೂಪಾಯಿಗಳನ್ನು ಖರ್ಚುಮಾಡಿ ಉತ್ತಮಪಟ್ಟದಲ್ಲಿಡದೆ ಹೋದ್ದರಿಂದ ಆ ರಸ್ತೆ ಹಾಳಾಗಿ ಹೋಗಿದೆ. ಹೊಸದಾಗಿ ಆ ರಸ್ತೆ ಮಾಡಬೇಕಾದರೆ 50-60 ಸಾವಿರ ರೂಪಾಯಿಗಳಾದರೂ ಸಾಲದು. ಅಂಥಾದ್ದರಲ್ಲಿ ಆ ಕಡೆ ನೋಡದೆ ಅಲ್ಲಿನ ರಸ್ತೆ ಹಾಳಾಗುತ್ತಿದೆ. ಫಾರೆಸ್ಟನ್ನು ಉತ್ತಮ ಪಡಿಸುವಾಗ ಆ ರಸ್ತೆಯನ್ನು ರಿಪೇರಿ ಮಾಡಿದ್ದೇ ಆದರೆ ಅಲ್ಲಿರುವ ಹಳ್ಳಿಗಳವರಿಗೂ ಅನುಕೂಲವಾಗುತ್ತದೆ. ಅಂಥ ಕಡೆಗಳಲ್ಲಿರುವ ರಸ್ತೆಗಳ ದುರಸ್ತಿಗೆ ಆನ್ಯುಯಲ್ ರಿಪೇರ್ಸ್‌ನಲ್ಲಿ ಹಣ ಒದಗಿಸಿ ಅಥವಾ ಪಬ್ಲಿಕ್ ವರ್ಕ್ಸ್ ಇಲಾಖೆಗೆ ಕೊಟ್ಟು ಆ ರಸ್ತೆಗಳನ್ನು ಮತ್ತು ಫಾರೆಸ್ಟ್ ಲಾಡ್ಜುಗಳನ್ನು P.W.D. ಇಲಾಖೆಗೆ ವರ್ಗಾಯಿಸಿದರೆ ಬಹಳ ಸಾರ್ಥಕವಾಗುತ್ತದೆ. ಅಲ್ಲದೆ ಸಾವಿರಾರು ರೂಪಾಯಿಗಳನ್ನು ಖರ್ಚುಮಾಡಿ ಫಾರೆಸ್ಟ್ ಲಾಡ್ಜ್ ಕಟ್ಟಿದ್ದಾರೆ; ಆ ಲಾಡ್ಜುಗಳ ಹತ್ತಿರ ವರ್ಷಕ್ಕೊಂದು ಸಲವಾದರೂ ಇಲಾಖೆಯವರು ಹೋಗಿಲ್ಲ. ಅವು ಗೆದ್ದಲು ತಿಂದು ಬಿದ್ದುಹೋಗುವ ಸ್ಥಿತಿಯಲ್ಲಿರುತ್ತವೆ; ಫಾರೆಸ್ಟ್ ಇಲಾಖೆಯ ಆಫೀಸರುಗಳೂ ಸಹ ಆ ಲಾಡ್ಜ್‌ಗಳಲ್ಲಿ ತಂಗಿ ಕಾಡುಗಳನ್ನು ಅಜಮಾಯಿಷಿಮಾಡುತ್ತಿಲ್ಲ. ಹೀಗಾದರೆ ಅದರ ಕಡೆ ಯಾರ ಗಮನ ತಾನೆ ಬಿದ್ದೀತು?

ಆದ್ದರಿಂದ ಫಾರೆಸ್ಟ್ ಇಲಾಖೆ ಮಂತ್ರಿಗಳಾದರೂ ಟೂರ್ ಹೋಗುವಾಗ ಊರುಗಳಲ್ಲಿ, ನಗರಗಳಲ್ಲಿ ತಂಗುವುದಕ್ಕೆ ಬದಲಾಗಿ ತಾಲ್ಲೂಕು ಮತ್ತು ಡಿಸ್ಟ್ರಿಕ್ಟ್ ಹೆಡ್‌ಕ್ವಾರ್ಟರ್ಸ್‌ಗಳಿಗೆ 10-15 ಮೈಲಿ ದೂರದಲ್ಲಿರುವ ಫಾರೆಸ್ಟ್ ಲಾಡ್ಜುಗಳಲ್ಲಿ ಕಷ್ಟವಿಲ್ಲದೆ ಇರಬಹುದು. ಹಾಗೆ ಮಾಡಿದರೆ ಅವುಗಳ ಮೇಲೆ ನಿಗಾ ಬಿದ್ದು ಆ ಲಾಡ್ಜುಗಳೂ ಸರಿಯಾದ ಸ್ಥಿತಿಯಲ್ಲಿರುತ್ತವೆ, ಜನರಿಗೂ ಉಪಯೋಗವಾಗುತ್ತದೆ. ಈ ಮುಂದೆಯಾದರೂ ಹಾಗೆ ಮಾಡಿದರೆ ನಿಜವಾಗಿಯೂ ಅದರಿಂದ ಸಹಸ್ರಾರು ರೂಪಾಯಿಗಳು ಉಳಿಯುವುದಲ್ಲದೆ ಕಾಡೂ ಹತೋಟಿಗೆ ಬರುತ್ತದೆ. ಆಗ ಆಸ್ತಿಗಳು ಹಾಳಾಗುವುದೂ ತಪ್ಪುತ್ತದೆ. ಈ ರೀತಿಯಾಗಿ ಮಾಡಬೇಕೆನ್ನುವ ವಿಷಯವನ್ನು ಸರ್ಕಾರದ ಗಮನಕ್ಕೆ ತರುವುದಕ್ಕೋಸ್ಕರ ಈ ಕತ್ತರಿ ನಿರ್ಣಯವನ್ನು ಸಮರ್ಥಿಸುತ್ತೇನೆ.

ಶ್ರೀ ಎಸ್. ಸಿದ್ಧಪ್ಪ (ಮಾಗಡಿ).—ಸ್ವಾಮಿ, ಫಾರೆಸ್ಟ್ ಇಲಾಖೆಯಲ್ಲಿ ಗಾರ್ಡುಗಳೇ ಅಲ್ಲಿನ ಯಜಮಾನರಾಗಿದ್ದಾರೆ. ಆದ್ದರಿಂದ ಆ ಗಾರ್ಡುಗಳ ಪುನರ್ವ್ಯವಸ್ಥೆ ಮಾಡುವುದಕ್ಕೆ ಸ್ವಲ್ಪ ಮನಸ್ಸು ಮಾಡಬೇಕು. ನಾನು ಮಂಗಳೂರು, ಮಡಕೇರಿ ಮತ್ತು ಬಳ್ಳಾರಿ ಪ್ರಾಂತಗಳಿಗೆ ಹೋಗಿದ್ದಾಗ ಅಲ್ಲಿ ಅರಣ್ಯ ಸಂಪತ್ತು ಬಹಳ ಚೆನ್ನಾಗಿರುವುದನ್ನೂ ಉತ್ಪತ್ತಿ ಹೆಚ್ಚಾಗಿರುವುದನ್ನೂ ನೋಡಿದೆ. ಅದೇ ನಮ್ಮ ದೇಶದಲ್ಲಿ ನೋಡಿದರೆ ಅರಣ್ಯಗಳು ಬಹಳ ಹೀನಸ್ಥಿತಿಗೆ ಬಂದಿವೆ. ಅಲ್ಲಿ ಈ ಸಾರಿ ಅರಣ್ಯ ಸಂಪತ್ತು ಒಂದಕ್ಕೆ ಹತ್ತರಷ್ಟು ಹೆಚ್ಚಾಗಿ ಹರಾಜಾಗಿದೆ. ಕಾರಣ ಅಲ್ಲಿ ಹುಣಿಸೆ ಬೆಳೆ ಅಳಲೇಕಾಯಿ ಮುಂತಾದುವು ಹೆಚ್ಚಿ ಸಂಪತ್ತು ಹೆಚ್ಚಲು ಅವಕಾಶವಾಗಿರುವುದು. ಇಲ್ಲಾದರೋ ಕೂಪು ಕೊಡುವುದು ಹೆಚ್ಚಾಗಿ ಅರಣ್ಯ ನಷ್ಟವಾಗಿದೆ. 50 ವರ್ಷಗಳು ಶ್ರಮಪಟ್ಟರೂ ಮೊದಲಿದ್ದ ಹಾಗೆ ಅರಣ್ಯ ಸಂಪತ್ತನ್ನು ಹೆಚ್ಚಿಸಲು ಸಾಧ್ಯವಿಲ್ಲದಂಥ ಪರಿಸ್ಥಿತಿಯಾಗಿದೆ. ಅರಣ್ಯ ಸಂಪತ್ತು ದೇಶಕ್ಕೆ ಬಹಳ ಮುಖ್ಯವಾದುದೆಂಬುದನ್ನು ಸರ್ಕಾರದವರು ಮನಗಂಡಿದ್ದರೂ ಏಕೋ ಅದಕ್ಕೆ ಸಾಕಾದಷ್ಟು ಗಮನ ಕೊಟ್ಟಿಲ್ಲ. ಒಟ್ಟಿನಲ್ಲಿ ಹೇಳುವುದಾದರೆ ಫಾರೆಸ್ಟ್ ಇಲಾಖೆಯನ್ನು ಬಹಳ ಮಟ್ಟಿಗೆ ಉತ್ತಮಸ್ಥಿತಿಗೆ ತರುವುದಕ್ಕೆ ಮತ್ತು ಇತರ ಪ್ರಾಂತಗಳಲ್ಲಿರುವ ಹಾಗೆ ಮಾಡುವುದಕ್ಕೆ, ಉತ್ತಮಪಡಿಸುವುದಕ್ಕೆ, ಮೊದಲಿದ್ದ ಉತ್ತಮ ಮಟ್ಟಕ್ಕೆ ತರುವುದಕ್ಕೆ ಸರ್ಕಾರ ಅನುಕೂಲ ಮಾಡುವುದಾದರೆ ರೆವೆನ್ಯೂ ಇಲಾಖೆ ಮತ್ತು ಇತರ ಇಲಾಖೆಗಳಲ್ಲಿ ಬರುವಂತೆ ವರಮಾನ ಬರುವುದೂ ಅಲ್ಲದೆ ದೇಶದ ಸಂಪತ್ತು ಹೆಚ್ಚಿ ಮಳೆ ಬೆಳೆ ಹೆಚ್ಚಲು ಸಹ ಅನುಕೂಲವಾಗುತ್ತದೆ. ಅರಣ್ಯ ಸಂಪತ್ತು ಅಲ್ಪವಾಗಿರುವ ಕಡೆ ಮಳೆ ಕೂಡ ಬರುವುದಿಲ್ಲವೆಂಬುದು ಸಹಜವಾಗಿಯೇ ಇದೆ. ಇದನ್ನರಿತ ಮಂತ್ರಿಗಳಿರುವಾಗ ಈ ಅರಣ್ಯ ಸಂಪತ್ತು ಮೊದಲಿದ್ದ ಸ್ಥಿತಿಗೆ ಬರುವುದಕ್ಕೆ ಅವಕಾಶಮಾಡಬೇಕು. ಇದರಲ್ಲಿರುವ ಅನೇಕ ಲೋಪದೋಷಗಳನ್ನು ಸರಿಪಡಿಸಬೇಕು. ಮತ್ತು ನಿಗಾ ಜಾಸ್ತಿಯಾಗಿರಬೇಕು. ತಾವು ಕೊಟ್ಟ ಮೊಬಲಗು ಮರಹಾಕದೆ, ಅರಣ್ಯವನ್ನು ಅಭಿವೃದ್ಧಿ ಪಡಿಸದೆ ಅನ್ಯಾಯವಾಗುತ್ತಿದೆ. ಇದನ್ನು ಸರಿಯಾಗಿ ನೋಡಿಕೊಳ್ಳುತ್ತಿಲ್ಲ. ಇದರಿಂದ ಅರಣ್ಯ ಸಂಪತ್ತು ಎಷ್ಟು ಹೆಚ್ಚಬೇಕೋ ಅಷ್ಟು ಹೆಚ್ಚಲು ಅವಕಾಶವಿಲ್ಲದಂತಾಗಿದೆ. ಇದನ್ನು ಸರಿಪಡಿಸಬೇಕು ಎಂದು ಇಷ್ಟು ಹೇಳಿ ನನ್ನ ಭಾಷಣ ಮುಕ್ತಾಯಗೊಳಿಸುತ್ತೇನೆ.

Dr. R. NAGAN GOWDA (Minister for Agriculture).—Mr. Speaker, Sir, I have got rather a difficult task of covering a very wide ground that has been covered by the different speakers and yet I am anxious to convey to all the members that have taken part in this debate my heart-felt thanks, for the very good ideas and suggestions they have expressed about the maintenance of our forest wealth in the State. I am one with them in almost everything that they have said. I am glad to hear from what Sri B. T. Kemparaj said, that forest is a very good wealth for the State. We will write these words in all our records. He further said that we did not protect the forests. I can only say that we are doing our best and we will continue to improve the methods of protection that have been adopted for that purpose. I agree with Sri Mascarenhas who said that in every other country there is 25 per cent of land devoted for forest and I hope some day we will be able to work towards that goal and improve the percentage that we have here. He asked as to what we are doing in the direction of planting of trees. I can tell him that we are trying to plant two to three trees to every tree that we cut. That is the view we have in our mind. We hope to reach that goal. He asked us to give an assurance that in view of the fact that the forest area we have is much less than that required for the good of the country, no land for cultivation from the forest lands should be given. Yes, Sir, we will adopt that policy. Another peculiar thing in Mysore is, we have about 175 lakhs of acres of land of which only 65 lakhs of acres is cultivable. 20 lakhs acres is our forests; that covers 85 lakhs acres and the remaining 90 lakhs acres of land is either fallow or land that is waste or land that is not available for cultivation purpose. So, I think we should ask our friends who want to have lands for cultivation to go there. Sir, I would not be able to do much justice to many points raised but I will take just a few seconds to say that the question of not allowing to cut coupes and also burn charcoal will be considered. Especially the representative from Kolar has brought this to my

(DR. R. NAGAN GOWDA.)

notice very poignantly and that matter is under consideration. We will see what we can do about that.

Sri K. PATTABHIRAMAN (Kolar).—The answer is not satisfactory.

Dr. R. NAGAN GOWDA.—I will be able to give a satisfactory answer a little bit later. I will only assure you that you have got more sympathy in this matter, but as you know, the matter will have to be considered in great details; pros and cons will have to be looked into. With these few words I request the Hon'ble members to support this Demand and pass the amount that we have asked for forest maintenance.

4 P.M.

Mr. SPEAKER.—The question is:

"That a sum not exceeding Rs. 42,36,800 be granted to the Government to defray the charges which will come in course of payment during the year ending 31st day of March 1955, in respect of 'Forest'."

The motion was adopted.

DEMAND No. 5—REGISTRATION.

11. Registration.

Mr. SPEAKER.—The question is:

"That a sum not exceeding Rs. 5,51,000 be granted to the Government to defray the charges which will come in course of payment during the year ending 31st day of March 1955, in respect of 'Registration'."

The motion was adopted.

DEMAND No. 13—GENERAL ADMINISTRATION—DISTRICT ADMINISTRATION.

25. General Administration (F. District Administration.)

Mr. SPEAKER.—Motion moved:

"That a sum not exceeding Rs. 41,40,900 be granted to the Government to defray the charges which will come in course of payment during the year ending 31st day of March 1955, in respect of 'General Administration (F. District Administration)'."

Abolition of Sub-Division Offices.

Sri S. SRINIVASA IYENGAR.—Sir, I beg to move:

"That the demand under the head '25. General Administration (F. District Administration)' for Rs. 41,40,900 be reduced by Rs. 100 (in order to raise a discussion on the subject of abolishing Sub-Division Offices)."

In each district apart from the office of the Deputy Commissioner and the Taluk Office, there is one other office called Sub-Division Office. The work of these offices can be likened to the work of post office. All papers that are submitted to the Deputy Commissioner simply pass through these Sub-Division Offices. All orders issued from the office of the Deputy Commissioner pass through the Sub-Division Office to the Amildar. So why should we maintain this superfluous office? If any enquiry is to be done by the Deputy Commissioner he refers to the Sub-Division Officer for report. In fact the unit of administration is the Taluk. All records are built up in the Taluk Office. The Amildar comes into contact with the common man and he is posted up-to-date with all the developments in the Taluk. The Taluk is the administrative unit. Having an administrative unit with a Gazetted Officer as the Amildar, who has all the facilities to visit an area immediately a complaint comes up to him, I believe that a report submitted by him should naturally reach the Deputy Commissioner immediately for relief or orders. Sir, by submitting a reference to the Deputy Commissioner through the Sub-Division Officer, the natural thing that will happen is delay. And by the time the paper gets disposed of, it will be several months. That can be easily avoided.

It may be argued that it will not be possible for the Deputy Commissioner to cope with the work of the several taluks in the District. On an average there will be about 9 taluks in a district and it may be argued that in respect of references made by the Amildar of a Taluk, it may not be possible for the Deputy Commissioner to attend to those papers. In such cases, it will be necessary to have some assistants. We are already having three assistants to the Deputy Commissioner, one a Personal Assistant, the other an Accounts Assistant and the third the Food Assistant, in addition to a Treasury Assistant and a number of other Assistants. I mean that for everything there is an Assistant for the Deputy Commissioner. With that gazetted staff he can cope with the work. Therefore I submit that by abolishing these Sub-Division Offices, Government can, not only save to the tune of Rs. 2 lakhs but at the same time expedite also the despatch of several records. Therefore I submit that this cut motion be approved by the House.

Mr. SPEAKER.—Cut motion moved:

"That the demand be reduced by Rs. 100."

Sri P. R. RAMAIYA (Basavanagudi).—I have a cut motion of a similar nature, No. 103.

Mr. SPEAKER.—I will give you a chance to speak.

ಶ್ರೀ ಎಂ. ಲಿಂಗಣ್ಣ (ನಂಜನಗೂಡು).—ಸ್ವಾಮಿ, ಈ ಖೋತಾ ಸೂಚನೆಯನ್ನು ಸಭೆಯವರು ಬಹಳ ಕೂಲಂಕಷವಾಗಿ ಪರಿಶೀಲಿಸಬೇಕೆಂದು ನನ್ನ ಕೋರಿಕೆ. ಈ ಖೋತಾ ಸೂಚನೆಯಲ್ಲಿ ಅಡಕವಾಗಿರುವ ರೀತಿಯಲ್ಲಿ ಸರ್ಕಾರದವರು ವರ್ತಿಸಿದರೆ ನಮ್ಮ ಸಂಸ್ಥಾನದ ಖರ್ಚು ವೆಚ್ಚದಲ್ಲಿ ಸುಮಾರು ಎರಡು ಲಕ್ಷ ರೂಪಾಯಿಗಳಷ್ಟು ಉಳಿತಾಯವಾಗುತ್ತದೆಂದು ಸೂಚಕರು ಈಗಾಗಲೇ ತಿಳಿಸಿರುತ್ತಾರೆ. ಇದರ ಹಿನ್ನೆಲೆಯಲ್ಲಿ ಈ ಸಬ್‌ಡಿವಿಜನ್ ಆಫೀಸರ ಮತ್ತು ಈ ರೆವಿನ್ಯೂ ಸಬ್ ಡಿವಿಜನ್‌ಗಳ ಅವಶ್ಯಕತೆಯಾದರೂ ಏನಿದೆಯೆಂಬುದನ್ನು ಪರಿಶೀಲಿಸಬೇಕು. ಇದೇ ಸಂದರ್ಭದಲ್ಲಿ ಈ ಸಬ್ ಡಿವಿಜನ್ ಆಫೀಸರಿಗೆ ಇರುವ ಅಧಿಕಾರವನ್ನು ಬೇರೆ ಅಧಿಕಾರಿಗಳಿಗೆ ವಹಿಸಿದ ಮಾತ್ರಕ್ಕೆ ಎಫಿಷಿಯೆನ್ಸಿ ಕಡಮೆಯಾಗುತ್ತದೆಯೋ ಅಥವಾ ಅವರಿಗೆ ಜವಾಬ್ದಾರಿ ಹೆಚ್ಚಾಗಿ ಅವರ ಕಾರ್ಯಗಳು ಮಿತಿಮೀರಿ ಹೆಚ್ಚಾಗುತ್ತವೆಯೋ ಎಂಬುದನ್ನು ಪರಿಶೀಲಿಸಬೇಕು. ಈಗ ಸಬ್‌ಡಿವಿಜನ್ ಆಫೀಸರಿಗಿರುವ ಅಧಿಕಾರಗಳಾದರೂ ಏನೆಂಬುದನ್ನು ನೋಡಿದರೆ ಕ್ರಿಮಿನಲ್ ಅಡ್ಮಿನಿಸ್ಟ್ರೇಷನ್ನಿಗೆ ಸಂಬಂಧಿಸಿದ ಹಾಗೆ ಕ್ರಿಮಿನಲ್ ಪ್ರೊಸೀಜರ್ ಕೋಡಿನ 107ನೆಯ ಸೆಕ್ಷನ್ ಪ್ರಕಾರ ಕೆಲವು ಮೊಕದ್ದಮೆಗಳನ್ನು ವಿಚಾರಿಸುವ ಅಧಿಕಾರ, ಜೊತೆಗೆ ವಿಲೇಜ್ ಆಫೀಸರ್ಸ್ ಆಕ್ಟ್ ಪ್ರಕಾರ ಪಟೇಲ್ ಶ್ಯಾನುಭೋಗರಿಗೆ ಸಂಬಂಧಿಸಿದ ವ್ಯವಹಾರ ಅಂದರೆ ಶ್ಯಾನುಭೋಗರುಗಳನ್ನು ನೇಮಕ ಮಾಡುವುದು, ಪಟೇಲರುಗಳನ್ನು ನೇಮಕ ಮಾಡುವುದು, ಅವರುಗಳ ಬರಾಬರ್ದುಗಳ ವಿಚಾರದಲ್ಲಿ original suitsಗೆ ಸಂಬಂಧಿಸಿದ ವ್ಯವಹಾರ, ಎಗ್ಜಿಕ್ಯೂಟಿವ್ ಆಫೀಸರಾಗಿ ರೆವಿನ್ಯೂಗೆ ಸಂಬಂಧಪಟ್ಟ ಕೆಲಸಕಾರ್ಯಗಳು—ಇವುಗಳನ್ನು ನೋಡಿಕೊಳ್ಳಬೇಕು. ರೆವಿನ್ಯೂಗೆ ಸಂಬಂಧಪಟ್ಟ ಕೆಲಸಕಾರ್ಯವೇನೋ ಅಷ್ಟಾಗಿ ಇಲ್ಲ. ಕ್ರಿಮಿನಲ್ ಪ್ರೊಸೀಜರ್ ಕೋಡ್ 107ನೆಯ ಸೆಕ್ಷನ್ ಪ್ರಕಾರ ಏನಿದೆಯೋ ಆ ಕೆಲಸಕಾರ್ಯಗಳನ್ನು ಸ್ಪೆಷಲ್ ಫಸ್ಟ್ ಕ್ಲಾಸ್ ಮ್ಯಾಜಿಸ್ಟ್ರೇಟರಿಗೆ ವಹಿಸಿದರೆ ತೊಂದರೆ ಆಗಲಾರದು. ಈಗಾಗಲೇ ಜುಡಿಷಿಯರಿ—ಎಗ್ಜಿಕ್ಯೂಟಿವ್ ವಿಭಾಗದ ವಿಚಾರವೂ ಸಹ ಸರ್ಕಾರದ ತೀವ್ರ ಪರ್ಯಾಲೋಚನೆಯಲ್ಲಿದೆ. ಈ ಸಂದರ್ಭದಲ್ಲಿ ಒಂದಿಷ್ಟು ಅಧಿಕಾರವನ್ನು, ನಾನು ಈಗ ತಾನೇ ತಿಳಿಸಿದ ಹಾಗೆ, ಸ್ಪೆಷಲ್ ಫಸ್ಟ್ ಕ್ಲಾಸ್ ಮ್ಯಾಜಿಸ್ಟ್ರೇಟರಿಗೆ ವಹಿಸಿಕೊಟ್ಟು, original suits—ವಿಲೇಜ್ ಆಫೀಸರ್ಸ್‌ಗೆ ಸಂಬಂಧಿಸಿದ ವ್ಯವಹಾರವನ್ನು—ಡೆಪ್ಯುಟಿ ಕಮಿಷನರಿಗೆ ವಹಿಸಿದರೆ ಅದರಿಂದೇನೂ ತೊಂದರೆ ಆಗಲಾರದು. ಈ ರೀತಿ ವಿಭಾಗಮಾಡಿ ಕೆಲಸಕಾರ್ಯಗಳನ್ನು ಹಂಚಿ ಬಿಟ್ಟರೆ ಈ ಸಬ್ ಡಿವಿಜನ್ ಆಫೀಸರುಗಳ ಅವಶ್ಯಕತೆಯೇ ಇರುವುದಿಲ್ಲ. ನನ್ನ ದೃಷ್ಟಿಯಲ್ಲಿ ಈ ಸಬ್ ಡಿವಿಜನ್ ಮತ್ತು ಸಬ್ ಡಿವಿಜನ್ ಆಫೀಸರು ಇರುವುದು it is a mere trap in the administrative machinery. ಕೆಲಸ ಕಾರ್ಯಗಳು ಸುಲಲಿತವಾಗಿ ಜರುಗುವುದಿಲ್ಲ. ಇಲ್ಲದ ಅಡಚಣೆ, ಅಡ್ಡಿ ಆತಂಕಗಳು ತಲೆದೋರುತ್ತವೆ. ಈಗಿನ ಕೆಲಸಕಾರ್ಯಗಳಲ್ಲಿ ಕಂಡುಬರುವ ನಿಧಾನತೆ ಹೋಗಿ ಅವುಗಳಿಗೆ ಒಂದು ತೀವ್ರತೆ ಕೊಡಬೇಕೆಂಬ ಮನೋಭಾವ ಸರ್ಕಾರಕ್ಕಿದ್ದರೆ ಈ ಸಬ್‌ಡಿವಿಜನ್ ಮತ್ತು ಸಬ್‌ಡಿವಿಜನ್ ಆಫೀಸರುಗಳ ಹುದ್ದೆಗಳನ್ನು abolish ಮಾಡಿಬಿಡುವುದು ಒಳ್ಳೆಯದು. ವಜಾಮಾಡದ ಮಾತ್ರಕ್ಕೆ ಎಂದಿಗೂ ಎಫಿಷಿಯೆನ್ಸಿ ಕಡಮೆಯಾಗುವುದಿಲ್ಲ. ಅಲ್ಲದೆ ಈ ಕ್ರಿಮಿನಲ್ ಪ್ರೊಸೀಜರ್ ಕೋಡಿಗೆ ಸಂಬಂಧಿಸಿದ 107ನೆಯ ಸೆಕ್ಷನ್ನಿನ ತಿದ್ದುಪಡಿಯೊಂದು ಇಷ್ಟರಲ್ಲಿಯೇ ಕೇಂದ್ರದಲ್ಲಿ ಅಂಗೀಕೃತವಾಗುವುದರಲ್ಲಿದೆ. ಇದರ ಪ್ರಕಾರ ಆರು ತಿಂಗಳು ಕಾಲ ಹಿಡಿಯುತ್ತಿದ್ದ ವ್ಯವಹಾರಗಳು ಆರು ವಾರಗಳಲ್ಲಿ ಇತ್ಯರ್ಥವಾಗಲು ಅನುಕೂಲವಾಗುತ್ತದೆ. ಇನ್ನು ಸಣ್ಣ ಪುಟ್ಟ ಕೆಲಸಕಾರ್ಯಗಳೆಂದರೆ ತಕಾವಿ ಸಾಲಗಳ ಮಂಜೂರಾತಿ ಇವೇ ಮೊದಲಾದುವು ನೇರವಾಗಿ ಡೆಪ್ಯುಟಿ ಕಮಿಷನರ ಬಳಿಗೇ ಬಂದು ಬೇಗ ಬೇಗ ಇತ್ಯರ್ಥವಾಗುತ್ತವೆ. ಈ ಸಬ್ ಡಿವಿಜನ್ ಆಫೀಸರ ಅಧಿಕಾರ—ಮಧ್ಯವರ್ತಿ ಏರ್ಪಾಡನ್ನು—ಸಂಪೂರ್ಣವಾಗಿ ಹೋಗಲಾಡಿಸುವುದು ಒಳ್ಳೆಯದು. ಕೆಲಸಗಳು ಸುಲಲಿತವಾಗಿಯೂ, ಜಾಗ್ರತೆಯಾಗಿಯೂ ಆಗುವುದಲ್ಲದೆ ಆರ್ಥಿಕ ದೃಷ್ಟಿಯಿಂದಲೂ ಈ ನನ್ನ ಸೂಚನೆ ಗಮನಾರ್ಹವಾದುದಾಗಿದೆ. ಈ ಅಂಶವನ್ನು ರೆವಿನ್ಯೂ ಅಡ್ಮಿನಿಸ್ಟ್ರೇಷನ್ ದೃಷ್ಟಿಯಿಂದ ಮಾತ್ರವಲ್ಲದೆ, ಸಿವಿಲ್ ಅಡ್ಮಿನಿಸ್ಟ್ರೇಷನ್ ದೃಷ್ಟಿಯಿಂದಲೂ ಪರಿಶೀಲಿಸಬೇಕು. ಇದಕ್ಕೆ ಸಂಬಂಧಿಸಿದ ಹಾಗೆ ಗೋರವಾಲಾ ರಿಪೋರ್ಟ್, ಪ್ಲಾನಿಂಗ್ ಕಮಿಷನ್ ರಿಪೋರ್ಟ್—ಇವುಗಳಲ್ಲಿ ಏನಿದೆಯೋ ಅದನ್ನೂ ಪರಿಶೀಲಿಸಬೇಕು. ಒಟ್ಟಿನಲ್ಲಿ ಈ ಅಂಶ

(ಶ್ರೀ ಎಂ. ಲಿಂಗಣ್ಣ.)

ವನ್ನು ಸರ್ಕಾರದವರು ಪುನರ್ವಿಮರ್ಶೆ ಮಾಡಿ, ಇದರ ಸಾಧಕ ಭಾಧಕಗಳನ್ನು ಗಣನೆಗೆ ತೆಗೆದುಕೊಂಡು, ಒಂದು ಹೊಸ ರೂಪ, ಒಂದು ನವ ಚೈತನ್ಯವನ್ನುಂಟುಮಾಡುವ ದೃಷ್ಟಿಯಿಂದ ಈ ಖೋತಾ ಸೂಚನೆಯಲ್ಲಿ ಅಡಗಿರುವ ಅಂಶವನ್ನು ತೀವ್ರವಾಗಿ ಪರ್ಯಾಲೋಚಿಸಿ ಸೂಕ್ತ ಕಾರ್ಯಕ್ರಮ ಕೈಗೊಳ್ಳಬೇಕೆಂದು ಹೇಳುತ್ತೇನೆ.

ಶ್ರೀ ಬಿ. ಹುಚ್ಚೇಗೌಡ (ತುರುವೇಕೆರೆ).—ಸ್ವಾಮಿ, ಈ ಖೋತಾ ನಿರ್ಣಯವನ್ನು ಅನುಮೋದಿಸುತ್ತಾ ಒಂದೆರಡು ವಿಚಾರಗಳನ್ನು ಸರ್ಕಾರದವರ ಗಮನಕ್ಕೆ ತರುತ್ತೇನೆ. ಈ ಸಬ್‌ಡಿವಿಜನ್ ಆಫೀಸುಗಳನ್ನು ತೆಗೆದು ಹಾಕಬೇಕೆಂಬ ವಿಷಯ ಕಳೆದ 30 ವರ್ಷಗಳಿಂದಲೂ ಕೂಡ ಪರ್ಯಾಲೋಚನೆಗೆ ಬರುತ್ತಾ ಇದೆ. ಎಷ್ಟೋ ಸಾರಿ ಸರ್ಕಾರದವರು ಒಪ್ಪಿಕೊಂಡಿದ್ದಾರೆ. ಆದರೆ ಕೆಲವು ಲೀಗಲ್ ಡಿಫಿಕಲ್ಟಿ ಇದೆ ಎಂದು ಹೇಳುತ್ತಾರೆ. ಅದನ್ನು ಈಗ ತಾನೆ ಶ್ರೀ ಲಿಂಗಣ್ಣನವರು ಹೇಳಿದ ಹಾಗೆ ಪರಿಹಾರ ಮಾಡಿಕೊಳ್ಳುವುದು ಅಷ್ಟೇನೂ ಕಷ್ಟವಾಗಿಲ್ಲ. ಸೆಕ್ಷನ್ 107ರ ಪ್ರಕಾರ ಲ್ಯಾಂಡ್ ಅಕ್ವಿಜಿಷನ್ ರಿಕಾರ್ಡ್‌ನಲ್ಲಿ ಅವರ ಅವಶ್ಯಕತೆ ಬಹಳವಾಗಿದೆ; ಅಲ್ಲದೆ ಪಟೇಲ್, ಶ್ಯಾನುಭೋಗರ ವಿಚಾರದಲ್ಲಿ ಅವರ ನೇಮಕ ವಗೈರೆ ಅವರಿಗೆ ಸಂಬಂಧಪಟ್ಟದ್ದು. ಅದನ್ನೂ ಕೂಡ, ಅಷ್ಟೇನೂ ಕಷ್ಟ ಅಲ್ಲ, ನಾವು ಸರಿಪಡಿಸಿಕೊಳ್ಳಬಹುದು. ಈಗ ನಮ್ಮ ದೇಶದಲ್ಲಿ ಸುಮಾರು 90 ತಾಲ್ಲೂಕುಗಳು ಇವೆ. 90 ತಾಲ್ಲೂಕುಗಳಲ್ಲಿ 120 ಜನ ಅಸಿಸ್ಟೆಂಟ್ ಕಮಿಷನರು ಇದ್ದಾರೆ. ತಾಲ್ಲೂಕಿಗೆ ಒಬ್ಬೊಬ್ಬ ಅಸಿಸ್ಟೆಂಟ್ ಕಮಿಷನರನ್ನು ನೇಮಕ ಮಾಡಿಕೊಂಡರೆ ಕಷ್ಟ ಇರುವುದಿಲ್ಲ. ಆದ್ದರಿಂದ ಈ ಆಫೀಸು ಒಂದು ಹೆಚ್ಚಾಗಿದ್ದು ಪೋಸ್ಟಾಫೀಸು ರೀತಿಯು ಆಗಬಾರದು ಎಂಬುದು ನಮ್ಮೆಲ್ಲರ ಅಭಿಪ್ರಾಯ. ಒಂದು ವೇಳೆ ಈ ಸಬ್ ಡಿವಿಜನ್ ಆಫೀಸಿಗೆ ಅಗತ್ಯ ಇದೆ ಎನ್ನುವುದಾದರೆ ಡೆಪ್ಯುಟಿ ಕಮಿಷನರಿಗೇ ಒಬ್ಬರು ಅಸಿಸ್ಟೆಂಟ್‌ನ್ನು ಕೊಟ್ಟು ಒಂದೇ ಆಫೀಸಿನಲ್ಲಿ ಇರುವಂತೆ ಮಾಡಬೇಕೇ ಹೊರತು ಈ ರೀತಿ ಮಧ್ಯೆ ಒಂದು ಇರುವುದರಿಂದ ದರಖಾಸ್ತು ವಗೈರೆ ವಿಲೇವಾರಿಗೆ ಬಹಳ ಕಷ್ಟವಾಗಿದೆ. ಅದು ಒಂದೇ ಅಲ್ಲ. ಸರ್ಕಾರದವರು ಅನೇಕ ಸಾರಿ ಈ ಫೈಲುಗಳು ವಿಲೇ ಆಗುವುದಕ್ಕೆ ಅವರಿಗೆ ತಿಳಿವಳಿಕೆ ಕೊಟ್ಟಿದ್ದೇವೆ ಎಂದು ಹೇಳುತ್ತಾರೆ. ಆದರೆ ಅವರು ಏನು ಹೇಳುತ್ತಾರೋ ಅದು ಜಾರಿಗೆ ಬಂದಿದೆಯೇ ಎಂದರೆ ಇಲ್ಲಿಯವರೆಗೂ ಜಾರಿಗೆ ಬಂದಿಲ್ಲ. ಕಾರಣವೇನೆಂದರೆ ಇವರು ಮಧ್ಯೆ ಪೋಸ್ಟಾಫೀಸಿನ ರೀತಿಯಲ್ಲಿ ಕೆಲಸ ಮಾಡುತ್ತಿರುವುದೇ ಆಗಿದೆ. ಈಗ ದರಖಾಸ್ತು ವಿಚಾರ ತೆಗೆದುಕೊಳ್ಳಿ. ಹಿಂದಿನಿಂದ ಒಂದು ಆರ್ಡರ್ ಇದೆ. ಪ್ರತಿಯೊಂದು ಗ್ರಾಮದಲ್ಲೂ ಲಿಸ್ಟ್ ಹಾಕಬೇಕು. 'A' list, 'B' list ಈ ರೀತಿ ಬೇರೆ ಬೇರೆ ಕೊಡಬೇಕು. ಇಷ್ಟು ಜನ ಬಡವರಿಂದ ಇಂಥಿಂಥ ಜಮೀನಿಗೆ ಅರ್ಜಿ ಬಂದಿದೆ ಎಂದು ತೋರಿಸುವ ಯಾವ ಒಂದು ಪಟ್ಟಿಯೂ ಕಾಣಿಸುತ್ತಾ ಇಲ್ಲ. ಈ ಕೆಲಸ ನಡೆಯುತ್ತಾ ಇಲ್ಲ. ಸಬ್‌ಡಿವಿಜನ್ ಆಫೀಸರು ಇದ್ದಾಕ್ಷಣಕ್ಕೇ ಸರಿಯಾಗಿ ಕೆಲಸ ನಡೆಯುತ್ತದೆ ಎಂದು ಹೇಳುವುದಕ್ಕಾಗುವುದಿಲ್ಲ. ಇನ್ನೊಂದು ಎಂದರೆ ಇದು ಒಂದು bottleneck ಆಗಿ ತಡೆಯಾಗಿ ಪರಿಣಮಿಸಿದೆ. ಅದೂ ಅಲ್ಲದೆ ನಮ್ಮ ತುಮಕೂರಿನಲ್ಲಿ ಒಂದು ಸಬ್‌ಡಿವಿಜನ್ ಹೆಚ್ಚು ಮಾಡಿದರು. ಹೆಚ್ಚು ಮಾಡಿ ಒಂದೊಂದೇ ವರ್ಷ ಎಕ್ಸ್‌ಟೆಂಡ್ ಮಾಡಿದರು. ಆದರೂಕೂಡ ಕೆಲಸ ಮಾತ್ರ ಜಾಗ್ರತೆ ಆಗುತ್ತಿಲ್ಲ. ಆಫೀಸು ಹೆಚ್ಚಿದಷ್ಟು ಹೊಸದಾಗಿ special staff ಕೊಡಬೇಕು. ಉದಾಹರಣೆಗೆ ಮಂಡ್ಯ ಡಿಸ್ಟ್ರಿಕ್ಟ್‌ನಲ್ಲಿ ಟೆಂಪೊರೆರಿ ಎಸ್ಟಾಬ್ಲಿಷ್‌ಮೆಂಟ್ ಇದೆ. ವರ್ಷಕ್ಕೆ 40 ಸಾವಿರ ರೂಪಾಯಿನ ಟೆಂಪೊರೆರಿ ಎಸ್ಟಾಬ್ಲಿಷ್‌ಮೆಂಟ್ ಕೊಟ್ಟು ಲೆಕ್ಕಗಳನ್ನು ಪರಿಶೀಲನೆ ಮಾಡಬೇಕೆಂದು ಹೇಳಿದ್ದೀರಿ. ಈ ರೀತಿ ಸಬ್‌ಡಿವಿಜನ್ ಆಫೀಸುಗಳು ಇದ್ದು ಟೆಂಪೊರೆರಿ ಎಸ್ಟಾಬ್ಲಿಷ್‌ಮೆಂಟ್ ಕೊಟ್ಟು ಕೆಲಸ ಮಾಡುವುದರಿಂದ ಸರ್ಕಾರದವರಿಗೆ ಮುಂದೆ ಮಾಡಬೇಕಾದ ಖರ್ಚು ಮತ್ತು ಕೆಲಸ ಏನಾದರೂ ತಪ್ಪಿದೆಯೋ ಎಂದರೆ ಏನೂ ಇಲ್ಲ. ಜಾಗ್ರತೆ ಜಾಗ್ರತೆ ಕೆಲಸ ಕಾರ್ಯಗಳು ಫೈಸಲಾಗುವುದಕ್ಕೆ ಅವಕಾಶವಾಗಿದೆಯೋ ಎಂದರೆ ಅದೂ ಕೂಡ ಇಲ್ಲ. ಇದು ಏನಾಗಿದೆ ಎಂದರೆ ಸಾಧಕಕ್ಕಿಂತ ಬಾಧಕವೇ ಜಾಸ್ತಿಯಾಗಿದೆ. ಆದ್ದರಿಂದ ಜಾಗ್ರತೆ ಇದನ್ನು ತೆಗೆದು ಹಾಕುವುದು ಬಹಳ ಒಳ್ಳೆಯದು. ಇದರಿಂದ ಸುಸೂತ್ರವಾಗಿ ಸರ್ಕಾರಿ ಕೆಲಸ ನಡೆಯುವುದಕ್ಕೆ ಅನುಕೂಲವಾಗುತ್ತದೆ ಎಂದು ನನ್ನ ಅಭಿಪ್ರಾಯ.

ಶ್ರೀ ಪಿ. ಆರ್. ರಾಮಯ್ಯ (ಬಸವನಗುಡಿ).—ಈ ಡಿವಿಜನ್ ಆಫೀಸುಗಳ ಸಂಖ್ಯೆ ಕಡಮೆಮಾಡಬೇಕು ಅಥವಾ ಅಬಾಲಿಷ್ ಮಾಡಬೇಕು ಮತ್ತು ರೆವೆನ್ಯೂ ಸಬ್ ಡಿವಿಜನ್‌ಗಳನ್ನು ಅಬಾಲಿಷ್ ಮಾಡಬೇಕು ಎಂಬ ಈ ಖೋತಾ ನಿರ್ಣಯವನ್ನು ಪುಷ್ಟೀಕರಿಸುತ್ತಾ ಈಗಾಗಲೇ ಕೆಲವು ಮಾನ್ಯ ಸದಸ್ಯರು ಅನೇಕ ಸಂಗತಿಗಳನ್ನು ತಿಳಿಸಿದ್ದಾರೆ. ಈ ಸಮಸ್ಯೆಯನ್ನು ಸರ್ಕಾರದವರು ಕೂಲಂಕಷವಾಗಿ ಆಲೋಚನೆ ಮಾಡಬೇಕು. ಇದರಲ್ಲಿ ಸರ್ಕಾರದವರು ಖರ್ಚು ಕಡಿಮೆಮಾಡತಕ್ಕ ಒಂದು ಅಂಶ ಇದೆ. ಎರಡನೆಯದಾಗಿ ಕೆಲಸಗಳು ಶೀಘ್ರವಾಗಿ ನಡೆಯುವ ದೃಷ್ಟಿಯಿಂದ ಈ ಆಫೀಸನ್ನು ವಜಾ ಮಾಡತಕ್ಕದ್ದು ಅವಶ್ಯಕ. ಈ ಎರಡು ದೃಷ್ಟಿಯಿಂದಲೂ ಕೂಡ ನಾನು ಈ ಸೂಚನೆ ಮಾಡುವವನಾಗಿದ್ದೇನೆ.

ಈ ರೆವೆನ್ಯೂ ಇಲಾಖೆ ಬಹಳ ಹಳೆಯದು. ಎಲ್ಲಾ ಇಲಾಖೆಗಳಿಗಿಂತಲೂ ಆದಿಯಾದ ಇಲಾಖೆ ಎಂದು ಹೇಳಬಹುದು. ಈ ಇಲಾಖೆ ಬಂದಮೇಲೆ, ಎಷ್ಟೋ ವರ್ಷಗಳಮೇಲೆ, ಇನ್ನೂ ಇತರ ಹೊಸ ಹೊಸ ಇಲಾಖೆಗಳು ಬಂದು ಹೊಸಹೊಸ ಇಲಾಖೆ, ಅಧಿಕಾರಿಗಳು ಇವರುಗಳನ್ನೆಲ್ಲಾ ನೇಮಿಸುವುದಕ್ಕೆ ಆರಂಭವಾಯಿತು. ಪ್ರಾರಂಭದಲ್ಲಿ ಸರ್ಕಾರ ಎಂದರೆ ರೆವೆನ್ಯೂ ಇಲಾಖೆಯೇ ಸರ್ಕಾರ. ರೈತನಿಗೂ ಮತ್ತು ಸರ್ಕಾರಕ್ಕೂ ನೇರವಾಗಿ ಇದ್ದಂಥ ಸಂಬಂಧ ಈ ರೆವನ್ಯೂ ಇಲಾಖೆಯಿಂದಲೇ ಆಗುತ್ತಾ ಇತ್ತು. ಇದಕ್ಕೆಲ್ಲಾ ಮೂಲವಾಗಿ ಪ್ರಾರಂಭದಲ್ಲಿ ಇರುವುದು ತಾಲ್ಲೂಕು ಆಫೀಸು. ಈ ತಾಲ್ಲೂಕು ಆಫೀಸು ಸರ್ಕಾರಕ್ಕೂ ರೈತನಿಗೂ ಸಂಬಂಧ ಇಟ್ಟುಕೊಂಡು ರೆವೆನ್ಯೂ ವಿಷಯಗಳನ್ನೆಲ್ಲಾ ಸಮಾಲೋಚನೆ ಮಾಡುತ್ತಾ ಇತ್ತು. ಆದರೆ ಈ ತಾಲ್ಲೂಕು ಸಂಪ್ರದಾಯ ಬಹಳ ಪುರಾತನ ಕಾಲದ್ದಾಗಿ, ಇದು ಒಂದು ನವೀನ ರೀತಿಯಲ್ಲಿ ಸುಧಾರಣೆಯನ್ನು ಹೊಂದದೆ ಸುಮಾರು 100 ವರ್ಷಗಳ ಹಿಂದೆ ಹೇಗಿತ್ತೋ ಹಾಗೆಯೇ ಇದೆ. ಇದರ ಕೆಲಸಗಳು ಸಮರ್ಪಕವಾಗಿ, ರೈತನಿಗೆ ಅನುಕೂಲವಾಗುವಂತೆ ನಡೆಯುತ್ತಾ ಇಲ್ಲ. ಇದು ಸಭೆಯ ಮಾನ್ಯ ಸದಸ್ಯರಿಗೆ ಎಲ್ಲರಿಗೂ ಗೊತ್ತಿದೆ. ಮತ್ತು ರೆವೆನ್ಯೂ ಸಚಿವರಿಗೂ ಕೂಡ ಈ ವಿಷಯ ಮನದಟ್ಟಾಗಿರಬೇಕೆಂದು ಭಾವಿಸುತ್ತೇನೆ. ಈ ಹಿಂದೆ ಭಾಷಣ ಮಾಡುವಾಗ ಅಡ್ಮಿನಿಸ್ಟ್ರೇಟೀವ್ ಮೆಷಿನರಿ ಎಂದು ಹೇಳಿದೆ. ಈ ಅಡ್ಮಿನಿಸ್ಟ್ರೇಟೀವ್ ಮೆಷಿನರಿ ಬಹಳ ಹಳೆಯದಾಗಿದೆ. ಅದನ್ನು ದುರಸ್ತು ಮಾಡಬೇಕೆಂದು ಹೇಳಿದೆ. ಪ್ರಾರಂಭದಲ್ಲಿ ತಾಲ್ಲೂಕು ಆಫೀಸು ಎಲ್ಲಕ್ಕಿಂತ ಮೂಲವಾ

ದದ್ದು. ಈ ತಾಲ್ಲೂಕು ಆಫೀಸಿನ ದುರಸ್ತು ಆಗದೆ ನಿಮ್ಮ ಸರ್ಕಾರಿ ಯಂತ್ರ ಸಂಪೂರ್ಣವಾಗಿ ದುರಸ್ತು ಆಗುವುದಿಲ್ಲ, ಒಬ್ಬ ಸಾಮಾನ್ಯ ರೈತ ತಾಲ್ಲೂಕು ಆಫೀಸಿನಲ್ಲಿ ಏನಾದರೂ ಅರಿಕೆ ಮಾಡಿಕೊಂಡರೆ ಆ ಅರಿಕೆಯ ವಿಚಾರದಲ್ಲಿ ಅವನಿಗೆ ಎಷ್ಟು ದಿವಸಗಳಲ್ಲಿ ಉತ್ತರ ದೊರೆಯುತ್ತದೆ, ಅವನು ಎಷ್ಟು ದಿವಸ ನಿರೀಕ್ಷಣೆಮಾಡಬಹುದು ಎಂಬುದನ್ನು ನೋಡಿದರೆ ಬಹುಶಃ ಆ ತಾಲ್ಲೂಕು ಆಫೀಸಿನ ಕೆಲಸ ಮತ್ತು ಅದರ ನಡವಳಿಕೆಗಳನ್ನು ನೋಡಿದರೆ ಅವನಿಗೆ ಉತ್ತರ ಸಿಕ್ಕಬೇಕಾದರೆ ಎಷ್ಟೋ ವರ್ಷಗಳಾಗಬಹುದು. ಎಷ್ಟೋ ಮೆಟ್ಟಲುಗಳನ್ನು ಹತ್ತಬೇಕಾಗಿ ಬರುತ್ತದೆ. ಆದ್ದರಿಂದ ಸರ್ಕಾರದ ನಿಜವಾದ ಪ್ರಯೋಜನ ರೈತನಿಗೆ ದೊರೆಯಬೇಕಾದರೆ ತಾಲ್ಲೂಕು ಆಫೀಸಿನಲ್ಲಿ ಬಹಳ ವ್ಯತ್ಯಾಸ ಆಗಬೇಕು. ಮತ್ತು ಅಲ್ಲಿ ಇನ್ನೂ ಹೆಚ್ಚು ನೌಕರರನ್ನು ಇಟ್ಟು ನವೀನ ರೀತಿಯಲ್ಲಿ ದುರಸ್ತುಗೊಳಿಸಿ ಅಲ್ಲಿನ ಕೆಲಸಕಾರ್ಯಗಳು ಸಮರ್ಪಕವಾಗಿ ಮತ್ತು ತ್ವರಿತವಾಗಿ ನಡೆಯುವಂತೆ ಏರ್ಪಾಡು ಮಾಡಬೇಕು. ಹಾಗೆ ನೋಡುವುದಕ್ಕೆ ಹೋದರೆ ಡೆಪ್ಯುಟಿ ಕಮೀಷನರುಗಳನ್ನು ಕಡಮೆ ಮಾಡಬೇಕು ; ಇಲ್ಲದೇ ಇದ್ದರೆ ಸಬ್‌ಡಿವಿಜನ್‌ಗಳನ್ನು ಕಡಮೆ ಮಾಡಬೇಕು. ಈಗ ಸಬ್‌ಡಿವಿಜನ್ ಕಡಮೆ ಮಾಡುವುದರೊಳಗೆ ಯಾವ ವಿಧವಾದ ತೊಂದರೆಯೂ ಇಲ್ಲ ಎಂಬುದನ್ನು ಈಗಾಗಲೇ ಈ ಸಭೆಯಲ್ಲಿ ಅನೇಕ ಸದಸ್ಯರು ಅರಿಕೆಮಾಡಿಕೊಂಡಿದ್ದಾರೆ. ಈಗ ಅದು ಒಂದು ತರಹ ಪೋಸ್ಟ್ ಆಫೀಸಿನ ರೀತಿಯಲ್ಲಿ ಕೆಲಸಮಾಡುತ್ತಾ ಇದೆಯೋ ಹೊರತು ಯಾವ ವಿಧವಾದ ಅಧಿಕಾರವೂ ಇಲ್ಲ. ಸರ್ಕಾರದವರು ಪುನಃ ಅದನ್ನು ದುರಸ್ತು ಮಾಡಬೇಕಾದರೆ ಯಾವ ಯಾವ ಅಧಿಕಾರಿಗಳಿಗೆ ಎಷ್ಟೆಷ್ಟು ಅಧಿಕಾರ ಇದೆ, ಅವರ ಅಧಿಕಾರ ವ್ಯಾಪ್ತಿ ಎಷ್ಟಿರಬೇಕೆಂಬುದನ್ನು ಸರಿಯಾಗಿ ನಿರ್ದಿಷ್ಟಗೊಳಿಸಬೇಕಾಗಿದೆ. ಇದು ಪ್ರಜಾಪ್ರಭುತ್ವದ ಕಾಲ. ಪೂರ್ವದಲ್ಲಿ ಎಂದರೆ ಪ್ರಜಾಪ್ರಭುತ್ವ ಇಲ್ಲದೇ ಇದ್ದ ಕಾಲದಲ್ಲಿ ಸರ್ಕಾರದವರೇ ಎಲ್ಲಾ ಆಡಳಿತವನ್ನು ವಹಿಸಿ ಪ್ರಜೆಗಳ ಹಿತವನ್ನು ಕಾಪಾಡುತ್ತಾರೆ ಎಂಬ ಒಂದು ಭಾವನೆ ಇಟ್ಟುಕೊಂಡಿದ್ದರು. ಈಗ ಪ್ರಜಾಪ್ರಭುತ್ವ ಬಂದಮೇಲೆ ಶಾಸನಸಭೆ ಮತ್ತು ಇನ್ನೂ ಅನೇಕ ಸಭೆಗಳು ಎಂದರೆ ಡಿಸ್ಟ್ರಿಕ್ಟ್ ಬೋರ್ಡ್, ಮುನಿಸಿಪಾಲಿಟಿ ಮುಂತಾದ ಸಂಸ್ಥೆಗಳು ಬಂದು ಪ್ರಜೆಗಳ ಪ್ರತಿನಿಧಿಗಳು ಅಲ್ಲಿ ಕೆಲಸಮಾಡುತ್ತಾ ಇರುವಾಗ ಇನ್ನೂ ಹೆಚ್ಚಿನ ಕೆಲಸ ನಡೆಯಬೇಕು. ಸರ್ಕಾರದ ಜವಾಬ್ದಾರಿ ಪೂರ್ವದಲ್ಲಿ ಎಷ್ಟಿತ್ತೋ ಅದಕ್ಕಿಂತ ಬಹಳ ಕಡಮೆಯಾಗಿದೆ. ಆದ್ದರಿಂದ ನಿಮ್ಮ ಈ ಸರ್ಕಾರದ ಯಂತ್ರವನ್ನು ದುರಸ್ತು ಮಾಡಬೇಕಾದರೆ ಈ ಸಬ್‌ಡಿವಿಜನ್ ಆಫೀಸುಗಳನ್ನು ತೆಗೆದುಹಾಕಬೇಕು. ಒಂದುಗಾಡಿ ನಡೆಯಬೇಕಾಗಿದ್ದರೆ ನಾಲ್ಕು ಚಕ್ರಗಳಿದ್ದರೆ ಸಾಕು. 5ನೇ ಚಕ್ರ ಒಂದು ಸೇರಿಕೊಂಡರೆ ರಸ್ತೆಯಮೇಲೆ ಓಡುವುದಕ್ಕೆ ಬಹಳ ಕಷ್ಟವಾಗುತ್ತದೆ. ಆದ್ದರಿಂದ ಈಗಿರತಕ್ಕ ಒಂದು ನ್ಯೂನತೆಯನ್ನು ಆದಷ್ಟುಬೇಗನೆ ಸರಿಪಡಿಸಬೇಕಾದದ್ದು ಅವಶ್ಯಕ. ಈಗ ಸಂಸ್ಥಾನದಲ್ಲಿ 300 ರಿಂದ 500 ರೂಪಾಯಿಗಳ ಮೇಲೆ 23ಜನ ಅಸಿಸ್ಟೆಂಟ್ ಕಮೀಷನರುಗಳು ಇದ್ದಾರೆ. ಅವರಿಗೆ ಸಬ್‌ಡಿವಿಜನ್ ಆಫೀಸರುಗಳು ಮಾಡತಕ್ಕ ಕೆಲಸವನ್ನು ವಿಂಗಡ ಮಾಡಬಹುದು ; ಮತ್ತು ಡೆಪ್ಯುಟಿ ಕಮೀಷನರಿಗೆ ಪರ್ಸನಲ್ ಅಸಿಸ್ಟೆಂಟ್‌ರರು ಇರುತ್ತಾರೆ. ಅವರಿಗೆ ಕೆಲವುಭಾಗ ಹಂಚಬಹುದು ; ಟ್ರೆಜರಿ ಅಸಿಸ್ಟೆಂಟ್‌ರು ಇರುತ್ತಾರೆ ; ಅವರಿಗೆ ಕೆಲವು ಭಾಗ ಹಂಚಬಹುದು. ಸಬ್‌ಡಿವಿಜನ್ ಆಫೀಸರಿಗೆ ಗೊತ್ತಾದಂಥ ಒಂದು ಕೆಲಸ ಮಾಡದೇ ಹೋದರೆ ಸರ್ಕಾರದ ಯಂತ್ರವೇ ನಿಲ್ಲುತ್ತದೆ ಎಂದು ಅಲ್ಲ. ಅವರನ್ನು ವಜಾ ಮಾಡಿದರೂ ಕೂಡ ಕೆಲಸ ನಡೆದುಕೊಂಡು ಹೋಗುತ್ತದೆ ಮತ್ತು ಕೆಲವು ಭಾಗ ಖರ್ಚು ಕಡಮೆ ಆಗುತ್ತದೆ. ಆದ್ದರಿಂದ ಈ ಖರ್ಚನ್ನು ಕಡಮೆಮಾಡುವ ದೃಷ್ಟಿಯಿಂದಲೂ ಮತ್ತು ಸರ್ಕಾರದ ಕೆಲಸಕಾರ್ಯಗಳು ತ್ವರಿತವಾಗಿ ನಡೆಯುವ ದೃಷ್ಟಿಯಿಂದಲೂ, ತಾಲ್ಲೂಕು ಮೆಷಿನರಿ ದುರಸ್ತುಮಾಡಿ ನವೀನರೀತಿಯನ್ನು ಸುಧಾರಣೆಗೊಳಿಸುವ ದೃಷ್ಟಿಯಿಂದಲೂ ಕೂಡ ಈ ಸಬ್‌ಡಿವಿಜನ್ ಆಫೀಸುಗಳನ್ನು ವಜಾ ಮಾಡುವುದು ಅವಶ್ಯಕ ಎಂದು ತೋರುತ್ತದೆ. ನಾನು ಈ ನಿರ್ಣಯದಲ್ಲಿರತಕ್ಕ ಅಭಿಪ್ರಾಯವನ್ನು ಸರ್ಕಾರ ಆಲೋಚನೆ ಮಾಡಬೇಕು ಎಂಬುದನ್ನು ಸರ್ಕಾರದವರ ಗಮನಕ್ಕೆ ತಂದಿದ್ದೇನೆ.

ಶ್ರೀ ಕೆ. ಪ್ರಭಾಕರ್ (ನೆಲಮಂಗಲ—ಅನುಸೂಚಿತ ಜಾತಿಗಳು).—ಸ್ವಾಮಿ, ಸರ್ಕಾರದವರು ಎಷ್ಟೋ ವಿಚಾರಗಳನ್ನು ಇವೊತ್ತು ಸರಿಯಾಗಿ ಮಾಡತಕ್ಕ ಪ್ರಮೇಯ ಇದೆ, ನಿಜ. ಆದರೆ ಸಾಮಾನ್ಯವಾಗಿ ರೈತರು—ನಮ್ಮ ದೇಶದ ಜನಗಳು ಇದ್ದಾರೆಯಲ್ಲಾ ಅವರು-ಏನನ್ನು ಖಚಿತವಾಗಿ ಸರ್ಕಾರದಿಂದ ನಿರೀಕ್ಷಿಸುತ್ತಾರೆ ಎಂಬುದು ಸರ್ಕಾರದವರಿಗೆ ಗೊತ್ತಿದೆ. ಆದರೆ ಅನೇಕ ವರ್ಷಗಳಿಂದ ನಡೆದುಕೊಂಡು ಬಂದಿರತಕ್ಕ ವಿಚಾರಗಳನ್ನು ಒಂದೇಸಾರಿ ಸರಿಮಾಡುವುದಕ್ಕಾಗುವುದಿಲ್ಲ ಎಂದು ಅನೇಕಸಾರಿ ಉತ್ತರ ಕೊಟ್ಟಿದ್ದೀರಿ. ಅವುಗಳನ್ನು ಸರಿಪಡಿಸುವಾಗ ಹೆಚ್ಚಿಗೆ ಸಿಬ್ಬಂದಿಬೇಕು ಎಂತಲೋ, ದುಡ್ಡುಬೇಕು ಎಂತಲೂ ನೆಪ ಹೇಳತಕ್ಕ ಕಾರಣಗಳಿಲ್ಲದೆ ಕೇವಲ ಮಾನಸಿಕ ಪರಿವರ್ತನೆಯಿಂದ ಏನು ಬದಲಾವಣೆ ಸರ್ಕಾರದ ಯಂತ್ರದಲ್ಲಿ ಆಗಬೇಕೋ ಅದನ್ನು ಮಾಡಿಸಲು ಸರ್ಕಾರ ನಿಗಾ ಕೊಡಬೇಕು. ಉದಾಹರಣೆಗೆ ರೈತರು ತಾಲ್ಲೂಕು ಆಫೀಸಿನಲ್ಲಿ ಎಷ್ಟೋ ಅರ್ಜಿಗಳನ್ನು ಕೊಡುತ್ತಾರೆ. ಅನಾನುಕೂಲವಾಗಿದೆ, ಸರಿಪಡಿಸಿಕೊಡಬೇಕು ಎಂದು ಹೇಳಿ ಎಷ್ಟೋ ಭಯ ಇಟ್ಟುಕೊಂಡು ಅರ್ಜಿ ಕೊಟ್ಟಿರುತ್ತಾರೆ. ಆ ಅರ್ಜಿ ಏನಾಯಿತು ಎಂಬುದಕ್ಕೆ ಉತ್ತರ ಅವನಿಗೆ ಬರುವುದೇ ಇಲ್ಲ. ಕೆಲವು ದಿವಸಗಳಾದಮೇಲೆ ಅವನು ಬಂದು ಅರ್ಜಿ ಏನಾಯಿತು ಎಂದು ಕೇಳಿದರೆ ‘ ಆ ಅರ್ಜಿ ಇಲ್ಲ, ಇನ್ನೊಂದು ಅರ್ಜಿ ಬರೆದುಕೊಂಡು ಬಾ’ ಎಂದು ಹೇಳುತ್ತಾರೆ, ಆಗ ಅರ್ಜಿಕೊಟ್ಟವನು ಎಂಥವನೇ ಆಗಿರಲಿ ಆತನಿಗೆ ಯಾವ ಒಂದು ಮನೋವೇದನೆಯಾಗುತ್ತದೆ ಎಂಬುದನ್ನು ಸರ್ಕಾರದವರೇ ಊಹೆ ಮಾಡಬೇಕು. ಇನ್ನೊಂದು ಅರ್ಜಿ ಬರೆದುಕೊಂಡು ಬಾ ಎಂದು ಹೇಳಿದರೆ ಆತನಿಗೆ ಏನು ಉಪಕಾರವಾಗುತ್ತದೆ ? ಅವನೇನೋ ‘ ಅರ್ಜಿ ಕೊಟ್ಟಿದ್ದೇನೆ, ಅದರಿಂದ ಆಗಬೇಕಾದ ಕೆಲಸ ಆಗುತ್ತದೆ ’ ಎಂಬ ನಿರೀಕ್ಷಣೆಯಲ್ಲಿರುತ್ತಾನೆ. ಅಂಥ ವೇಳೆಯಲ್ಲಿ ಈ ರೀತಿ ಹೇಳಿದರೆ ಅವನಿಗೆ ಬಹಳ ಸಂಕಟವಾಗುತ್ತದೆ. ಆದ್ದರಿಂದ ತಾವು ಕೆಲಸ ಮಾಡಿಕೊಡದೆ ಹೋದರೂ ಚಿಂತೆಯಿಲ್ಲ, ‘ ನಿನ್ನ ಅರ್ಜಿ ಬಂತು ; ನಿನ್ನ ಅರ್ಜಿಯಮೇಲೆ ಇಂಥ ಕಾರಣದಿಂದ ಕೆಲಸ ಮಾಡಿಕೊಡುವುದಕ್ಕಾಗಲಿಲ್ಲ’ ಎಂದು ಹೇಳಿ ಎಂಡಾರ್ಸ್‌ಮೆಂಟ್ ಕೊಟ್ಟರೆ ಅದರಿಂದ ಎಷ್ಟೋ ಮನಸ್ಸಿಗೆ ಸಮಾಧಾನವಾಗುತ್ತದೆ, ಒಂದೊಂದು ಕಾಸನ್ನೂ ಕೊಟ್ಟು ಸರ್ಕಾರ ನಡೆಯುವ ಹಾಗೆ ಮಾಡತಕ್ಕ ಆ ರೈತನಿಗೆ ಅಷ್ಟುಮಾತ್ರ ಮಾಡಿದರೆ ಸಾಕು ಅತ್ಯಾನಂದವುಂಟಾಗುತ್ತದೆ. ಅದು ಬಿಟ್ಟು ಅರ್ಜಿ ಕೊಟ್ಟ 3— 4 ತಿಂಗಳಮೇಲೆ ನಿನ್ನ ಅರ್ಜಿ ಇಲ್ಲ ಎಂದರೆ ಏನು ಸಂಕಟ ಅವನ ಮನಸ್ಸಿನಲ್ಲಿ ಉಂಟಾಗುತ್ತದೆ ಎಂಬುದನ್ನು ಹೆಚ್ಚಿಗೆ ಹೇಳಲಾರೆ. ಇದಕ್ಕೇನೂ ಹೆಚ್ಚು ಜನ ಗುಮಾಸ್ತರು ಬೇಕಾಗಿಲ್ಲ, ದುಡ್ಡು ಬೇಕಾಗಿಲ್ಲ.

(ಶ್ರೀ ಕೆ. ಪ್ರಭಾಕರ್)

ಅರ್ಜಿ ಬಂದಿದೆಯೇ, ರಿಜಿಸ್ಟರ್ ಮಾಡಿದ್ದಾರೆಯೇ, ಮುಂದೆ ಯಾವರೀತಿ ಆಗುತ್ತದೆ ಇಷ್ಟೂ ಸಹ ತಿಳಿಸುವುದಿಲ್ಲ. ತಾವು ಸರ್‌ಪ್ರೈಸ್ ಇನ್‌ಸ್ಪೆಕ್ಷನ್ ಮಾಡಿ ಆ ರೀತಿ ಇರುವುದನ್ನು ಪತ್ತೆಹಚ್ಚಿ ಅರ್ಜಿ ರಿಜಿಸ್ಟರ್ ಆಗದೇ ಇದ್ದರೆ ಬೇಹುಷಾರಿಯಿಂದ ಕಾಲಕಳೆದು, ತಾತ್ಸಾರ ಭಾವನೆಯಿಂದ ಯಾರು ವರ್ತಿಸಿದ್ದಾರೋ ಅಂಥವರಿಗೆ ಎಂತಹ ಘೋರವಾದ ಶಿಕ್ಷೆಕೊಟ್ಟರೂ ಚಿಂತೆ ಇಲ್ಲ—ಎಕ್ಸೆಂಪ್ಲರಿ ಪನಿಷ್‌ಮೆಂಟ್ ಕೊಡುತ್ತೇನೆ ಎಂದು ಹಿಂದೆ ಒಂದು ಸಂದರ್ಭದಲ್ಲಿ ಮಾನ್ಯ ರೆವೆನ್ಯೂ ಸಚಿವರು ಅಪ್ಪಣೆ ಕೊಡಿಸಿದ್ದಾರೆ—ಆ ರೀತಿ ಮಾಡುವುದರಿಂದ ಅನೇಕ ಆಫೀಸುಗಳಲ್ಲಿ ಆಯಾ ಕೆಲಸ ತಕ್ಷಣ ನಡೆದು ಹೋಗುತ್ತದೆ. ಅದನ್ನು ಬಿಟ್ಟು......

Mr. SPEAKER.—The cut motion deals with the abolition of the posts of Sub-Division Officers. There is not much time for you. As a matter of courtesy, I have allowed you two or three minutes.

Sri K. PRABHAKAR.—I shall come to that, Sir.

ಈ ಸಬ್‌ಡಿವಿಜನ್ ಆಫೀಸುಗಳ ವಿಚಾರ ಸರ್ಕಾರದ ಮುಂದೆ ಅನೇಕ ದಿವಸಗಳಿಂದ ಇದೆ. ಎಷ್ಟೋ ಆಫೀಸುಗಳನ್ನು ರದ್ದುಗೊಳಿಸಬೇಕಾಗಿದೆ. ಈ ಸಬ್‌ಡಿವಿಜನ್ ಆಫೀಸು ಒಂದು ತರಹ ಪೋಸ್ಟಾಫೀಸು ಇದ್ದಹಾಗೆ ಇದೆ. ಅಮಲ್ದಾರರು, ಡೆಪ್ಯುಟಿ ಕಮೀಷನರು ಇವರಿಗೆ ಮಧ್ಯೆ ಇರತಕ್ಕ ಆಫೀಸು ಇದು. ಇದನ್ನು ರದ್ದುಗೊಳಿಸುವುದು ಸರಿ ಎಂದು ಅಭಿಪ್ರಾಯಪಡುತ್ತೇನೆ.

4-30 P.M.

ಶ್ರೀ ಕಡಿದಾಳ್ ಮಂಜಪ್ಪ (ರೆವೆನ್ಯೂ ಮತ್ತು ಮರಾಮತ್ ಶಾಖೆಗಳ ಮಂತ್ರಿಗಳು).—ಸ್ವಾಮಿ, ಅಧ್ಯಕ್ಷರೆ, ಈ ಪ್ರಶ್ನೆಯೂ ಕೂಡ ಬಹಳ ವರ್ಷಗಳಿಂದ ಶಾಸನಸಭೆಗಳ ಮುಂದೆ ಬರುತ್ತಲೇ ಇದೆ. ಸಬ್ ಡಿವಿಜನ್ ಆಫೀಸರ ಒಂದು ಹುದ್ದೆ ಬಹಳ ಕಾಲದಿಂದ ಮೈಸೂರು ದೇಶದಲ್ಲಿದೆ. ಮಾತನಾಡಿದ ಕೆಲವು ಮಿತ್ರರು ಇದು ಬರೀ ಪೋಸ್ಟಾಫೀಸು ಎಂದು ಹೇಳಿದರು. ಹಾಗಲ್ಲ, ಸಾಧಾರಣವಾಗಿ ಕಾನೂನು ರೀತ್ಯಾ ಅನೇಕ ಕರ್ತವ್ಯಗಳನ್ನು ಸಬ್‌ಡಿವಿಜನ್ ಆಫೀಸರು ಮಾಡುತ್ತಾರೆಂಬುದನ್ನು ಮಾನ್ಯ ಸದಸ್ಯರು ಮರೆಯಬಾರದು. ಪೋಸ್ಟಾಫೀಸಾಗುವುದನ್ನು ತಪ್ಪಿಸೋಣ. I am seriously at it. ಡೆಪ್ಯುಟಿ ಕಮೀಷನರಿಗೆ ಹೋಗುವುದಕ್ಕೆ ಬದಲು ಕಾಗದಪತ್ರಗಳು ಸಬ್‌ಡಿವಿಜನ್ ಆಫೀಸರ ಮುಖಾಂತರ ಹೋಗುವುದನ್ನು ತಪ್ಪಿಸೋಣ. ಕೆಲವು ಕಾನೂನುಗಳ ಮೂಲಕ ಅವರಿಗೆ ನಿರ್ದಿಷ್ಟವಾದ ಕರ್ತವ್ಯವನ್ನು ವಹಿಸಿದೆ. ಅಕ್ವಿಜಿಷನ್ ಆಕ್ಟ್ ಪ್ರಕಾರ ಕೆಲವು ಕರ್ತವ್ಯಗಳು ಅವರಿಗಿವೆ; ಆಮೇಲೆ ಲ್ಯಾಂಡ್ ರೆವೆನ್ಯೂ ಕೋಡ್ ಪ್ರಕಾರ, ವಿಲೇಜ್ ಆಫೀಸರ್ಸ್ ಆಕ್ಟ್ ಪ್ರಕಾರ ಕೆಲವು ಕರ್ತವ್ಯಗಳಿವೆ; ಆಮೇಲೆ ಸ್ಟಾಂಪ್ ಆಕ್ಟ್ ಪ್ರಕಾರ ಅಧಿಕಾರವಿದೆ. ಹೀಗೆ ನಾನಾ ಆಕ್ಟುಗಳ ಪ್ರಕಾರ ಅವರ ಕರ್ತವ್ಯ ನಿಗದಿಯಾಗಿದೆ. ಕ್ರಿಮಿನಲ್ ಪ್ರೊಸೀಜರ್ ಕೋಡ್, ಸೆಕ್ಯೂರಿಟಿ ಪ್ರೊಸೀಡಿಂಗ್ಸ್ ಎಂದು ಹೇಳುವುದರಲ್ಲೂ ಅವರಿಗೆ ಅಧಿಕಾರವಿದೆ. ಇದರ ಜೊತೆಗೆ ಈಗ ಟೆನೆನ್ಸಿ ಆಕ್ಟ್ ಎಂಬುದನ್ನು ಎಲ್ಲರಿಗೂ ತಿಳಿದ ಹಾಗೆ ಎಲ್ಲಾ ತಾಲ್ಲೂಕುಗಳಿಗೂ ಅನ್ವಯಿಸಿದೆ. ಈ ಆಕ್ಟ್ ಪ್ರಕಾರ ಅವರು ಅಪೆಲೇಟ್ ಅಥಾರಿಟಿ. ಈಗ ಯೋಚನೆ ಮಾಡುವುದು ಅವರಿಗೆ ಅಪೆಲೇಟ್ ಅಥಾರಿಟಿಯಾದರೂ ಕೂಡ ಪ್ರತಿ 2—3 ತಾಲ್ಲೂಕುಗಳಿಗೊಬ್ಬ ಅಮಲ್ದಾರರನ್ನು ನೇಮಕಮಾಡುವ ಪರಿಸ್ಥಿತಿಯಿದೆ. ಇದನ್ನು ಮಾಡುವ ಬದಲು ಒರಿಜಿನಲ್ಲಾಗಿರುವ ಸಬ್ ಡಿವಿಜನ್ ಆಫೀಸಿಗೇ ಈ ಕೆಲಸವನ್ನೂ ವಹಿಸುವುದು ಕ್ಷೇಮ ಎಂಬ ಯೋಚನೆಯಿದೆ. ಇದಕ್ಕಾಗಿ ಟೆನೆನ್ಸಿ ಆಕ್ಟ್ ತಿದ್ದುಪಡಿ ಮಾಡುವುದಕ್ಕೆ ಕಾರ್ಯಕ್ರಮವಿದೆ. ಒಬ್ಬ ಅಮಲ್ದಾರರನ್ನು ನೇಮಿಸುವುದಕ್ಕೆ ಬದಲು 3 ತಾಲ್ಲೂಕಗಳನ್ನು ಸಬ್‌ಡಿವಿಜನ್ ಆಫೀಸರಿಗೆ ಕೊಟ್ಟು ಇತರ ಕೆಲಸಗಳ ಜೊತೆಗೆ ಟೆನೆನ್ಸಿ ಆಕ್ಟ್‌ನ ವಿವಿಧ ತೀರ್ಮಾನ ಮಾಡುವುದಕ್ಕೆ ಅವಕಾಶ ಕೊಟ್ಟರೆ ಸಾಕಾದಷ್ಟು ಕೆಲಸವಿದೆಯೆಂಬ ಭಾವನೆಯಿದೆ.

ಆಗಲೇ ಅರಿಕೆಮಾಡಿಕೊಂಡಹಾಗೆ, ರೆವೆನ್ಯೂ ಇಲಾಖೆಯಲ್ಲಿ ವೆಚ್ಚವನ್ನು ಆದಷ್ಟು ಕಡಿಮೆಮಾಡುವುದಕ್ಕೆ ಮತ್ತು ದಕ್ಷತೆಯನ್ನು ಹೆಚ್ಚಿಸುವುದಕ್ಕೆ ಅದು ನಮ್ಮ ಪವಿತ್ರಕರ್ತವ್ಯವೆಂದು ತಿಳಿದು ಪ್ರಯತ್ನಪಡುತ್ತಿದ್ದೇನೆ. ಸುಮಾರು ಎರಡು ವರ್ಷಗಳಲ್ಲಿ 40 ತಾಲ್ಲೂಕು ಆಫೀಸುಗಳಿಗೆ ಅನಿರೀಕ್ಷಿತವಾಗಿ ಭೇಟಿ ಕೊಟ್ಟಿದ್ದೇನೆ. ವಿಷಯ ತಿಳಿದುಕೊಳ್ಳಬೇಕೆಂದು ತಾಲ್ಲೂಕು ಆಫೀಸು ಮುಂದೆ ಹೋದರೆ ಏನೂ ಇಲ್ಲ, ಎಲ್ಲಾ ಚೆನ್ನಾಗಿದೆ ಎಂದು ಹೇಳುತ್ತಾರೆ. ತೊಂದರೆಯೇನಾದರೂ ಇದೆಯೆ ಎಂದು ಕೇಳಿದರೆ ಹೇಳುವುದಿಲ್ಲ.

ಆಮೇಲೆ ಯಾವಾಗಲೂ ಅಧಿಕಾರಿಗಳಮೇಲೆ ಎಗ್ಸೆಂಪ್ಲರಿ ಪನಿಷ್‌ಮೆಂಟ್ ವಿಧಿಸಬೇಕೆಂದು ಶ್ರೀ ಪ್ರಭಾಕರ್‌ರವರು ಹೇಳುತ್ತಾರೆ. ಲಂಚ ನಿರೋಧ ಪ್ರಾರಂಭವಾಗಿರುವುದೂ ಸಹ 1942ನೆಯ ಇಸವಿಯಲ್ಲಿ, ನಾನು ನಿರ್ಣಯ ಕಳುಹಿಸಿದ್ದರಮೇಲೆ. ಆಗ ನಾನು ಬಹಳ ಉತ್ಸಾಹದಿಂದ ಭಾಷಣಮಾಡಿದ್ದೆ; ಈಗ ಅದೇ ಇಲಾಖೆ ನನ್ನ ಕೈಲಿದೆ. ಅಧಿಕಾರಿಗಳಮೇಲೆ ದೂರು ಹೇಳುತ್ತಿದ್ದೀರಿ, ಏನಾದರೂ ಅವರಲ್ಲಿ ನ್ಯೂನತೆಗಳಿದ್ದರೆ ಹೇಳಿ, ಕ್ರಮ ತೆಗೆದುಕೊಳ್ಳುತ್ತೇನೆ, ಸೂಕ್ತ ಶಿಕ್ಷೆ ವಿಧಿಸುತ್ತೇನೆ ಎಂದು ಕೇಳಿದರೆ ಏನೂ ಇಲ್ಲ, ನಮ್ಮ ತಾಲ್ಲೂಕಿನಿಂದ ವರ್ಗಮಾಡಿಬಿಡಿ, ಸಾಕು ಎಂದು ಹೇಳುತ್ತಾರೆ. ಮಾನ್ಯ ಸದಸ್ಯರು, ಅಸೆಂಬ್ಲಿ ಸದಸ್ಯರು ತಾಲ್ಲೂಕು ಅಮಲ್ದಾರರು ಮತ್ತು ಇತರ ಕೆಲವು ಅಧಿಕಾರಿಗಳ ಮೇಲೆ ಅಪಾದನೆ ಹೊರಿಸುತ್ತಿದ್ದುದು ಎಲ್ಲರ ಗಮನಕ್ಕೂ ಬಂದಿದೆ. ಸ್ವಾಮಿ, ಇಂಥ ಅಮಲ್ದಾರರು ಲಂಚ ತೆಗೆದುಕೊಳ್ಳುತ್ತಾರೆ, ಅವರಿಂದೇನೂ ಕೆಲಸವಾಗುವುದಿಲ್ಲ ಎಂದು ಅನೇಕವೇಳೆ ಹೇಳುತ್ತಿದ್ದರು. ಈಗ ನನ್ನ ಕೈಲಿ ಅಧಿಕಾರವಿರುವಾಗ ಏನಾದರೂ ಅಂಥಾದ್ದು ಇದ್ದರೆ ಹೇಳಿ ಸೂಕ್ತಕ್ರಮ ಕೈಕೊಳ್ಳೋಣವೆಂದರೆ ಏನೂ ಇಲ್ಲ ಅವರನ್ನು ವರ್ಗಮಾಡಿಬಿಡಿ ಎಂದು ಹೇಳುತ್ತಾರೆ. ಒಬ್ಬರು ಸದಸ್ಯರು ನಮಗೇಕೆ ಶಿಕ್ಷೆ ಮಾಡುವ ಭಾರ, ಆ ಅಧಿಕಾರಿಗಳಿಗೆ ಮಕ್ಕಳಿದ್ದಾರಂತೆ, ಪಾಪ ಎಂದು ಹೇಳುತ್ತಾರೆ. ಹೀಗಾದರೆ ಹೇಗೆ ಸರಿಪಡಿಸುವುದು ? ಸಾರ್ವಜನಿಕರ ಬೆಂಬಲ ಮತ್ತು ಸಹಕಾರ ಇದಕ್ಕಿಲ್ಲದಿದ್ದರೆ ದಕ್ಷತೆಯು ಹೆಚ್ಚುವುದಿಲ್ಲ. ಆದಷ್ಟು ಜಾಗ್ರತೆ ದಕ್ಷತೆಯು ಉತ್ತಮಸ್ಥಿತಿಗೆ ಬರಲು ಏನು ಕೆಲಸ ಮಾಡಬೇಕೋ ಅದನ್ನು ಮಾಡುತ್ತಿದ್ದೇವೆ. ದಕ್ಷತೆಯ ವಿಚಾರದಲ್ಲಿ ಗೋರ್ವಾಲಾರವರ ವರದಿಯಿದೆ; ಭಾರತದ ಪ್ರಧಾನಿ ಈ ವಿಚಾರದಲ್ಲಿ ಹೆಚ್ಚು ಆಸಕ್ತಿ ವಹಿಸಿದ್ದಾರೆ. ಡೀ ಸೆಂಟ್ರಲೈಜೇಷನ್ ಮಾಡಬೇಕು, ವಿಕೇಂದ್ರೀಕರಣವಾಗಬೇಕು ಮತ್ತು ದಕ್ಷತೆ ಹೆಚ್ಚಬೇಕು ಎಂದು ಅವರು ಅನೇಕಬಾರಿ ಹೇಳಿದ್ದಾರೆ. ಅವರು ಹೇಳಿದ ರೀತಿಯಲ್ಲಿ ನಾವೂ ಆದಷ್ಟು ಜಾಗ್ರತೆ ಕ್ರಮ ತೆಗೆದುಕೊಳ್ಳುತ್ತಿದ್ದೇವೆ. ಸಬ್‌ಡಿವಿಜನ್

ಆಫೀಸನ್ನು ವಜಾಮಾಡುವುದನ್ನು ಪರಿಶೀಲಿಸುತ್ತೇನೆ ; ಸ್ಪಷ್ಟವಾಗಿ ಈ ದಿವಸ ಹೇಳುವುದಕ್ಕೆ ತಯಾರಾಗಿಲ್ಲ. ಇಷ್ಟು ಹೇಳಿದಮೇಲೆ ಈ ಖೋತಾ ಸೂಚನೆಯನ್ನು ವಾಪಸು ತೆಗೆದುಕೊಳ್ಳುತ್ತಾರೆಂದು ನಂಬಿದ್ದೇನೆ.

Sri S. SRINIVASA IYENGAR.—I press it, Sir.

Mr. SPEAKER.—The question is :

"That the demand be reduced by Rs. 100."

The motion was negatived.

Mr. SPEAKER.—The next cut motion stands in the name of Sri Srinivasa Iyengar. You can give chance to others.

Sri S. SRINIVASA IYENGAR.—There are three more cut motions and I will club all the three and speak.

Mr. SPEAKER.—Serial Nos. 108, 109, 113, 114 and 115 are all of similar nature; they deal with the disposal of petitions. We will be giving chances to many members if you yield.

Sri S. SRINIVASA IYENGAR.—All right, Sir.

Mr. SPEAKER.—Sri G. Narayana Gowda may move the second cut motion so that he can have the support of other members; the serial No. is 108.

Disposal of Petitions

Sri G. NARAYANA GOWDA (Mulbagal-Srinivasapur).—I beg to move :

"That the demand under the head '25. General Administration (F. District Administration)' for Rs. 41,40,900 be reduced by Rs. 100 (to raise a discussion on the delay in disposal of petitions)."

ನಾನು ಈ ಕತ್ತರಿ ನಿರ್ಣಯವನ್ನು ತಂದಿರುವ ಉದ್ದೇಶವಾದರೂ ಇಷ್ಟೇ. ನಮ್ಮ ಆಡಳಿತದಲ್ಲಿ ಅರ್ಜಿಗಳು ಸರಿಯಾಗಿ ಸಕಾಲದಲ್ಲಿ ವಿಲೇವಾರಿಯಾಗುವುದಕ್ಕೆ ಬಹಳ ಅಡಚಣೆಗಳಾಗುತ್ತಿವೆ. ದೇಶದ ಪ್ರಜೆಗಳ ದೃಷ್ಟಿಯಿಂದ ಅವು ಎಷ್ಟು ಬೇಗನೆ ವಿಲೇ ಆದರೆ ಅಷ್ಟು ಒಳ್ಳೆಯದು ಅನ್ನುವ ಒಂದು ಸದುದ್ದೇಶದಿಂದ ಈ ನಿರ್ಣಯವನ್ನು ನಾನು ಇಲ್ಲಿ ತಂದಿದ್ದೇನೆ. ಇದೇ ವಿಷಯ ಈ ಸಭೆಯಲ್ಲಿ ಅನೇಕ ಸಾರಿ ಚರ್ಚೆಯಾಗಿದೆ. ಆದರೂ ಸಹಿತ ನಮ್ಮ ಸರ್ಕಾರದವರು ಈ ವಿಷಯದಲ್ಲಿ ಹೆಚ್ಚು ಗಮನ ಕೊಡದಿರುವುದನ್ನು ನೋಡಿದರೆ ಬಹುಶಃ ಅವರು ಇದರ ತೀವ್ರತೆಯನ್ನು ಸರಿಯಾಗಿ ಕಂಡುಕೊಂಡಿಲ್ಲವೆಂದು ನಾನಂತೂ ಅನ್ನಬೇಕಾಗಿದೆ.

ಆಡಳಿತದಲ್ಲಿ ದಕ್ಷತೆ ಕಂಡುಬರಬೇಕಾದರೆ, ಸರ್ಕಾರ ಸಲ್ಲಿಸಿದ ಅರ್ಜಿಗಳು ಬೇಗ ಬೇಗ dispose of ಆಗಬೇಕಾದರೆ ಸಾಧ್ಯವಾದ ಮಟ್ಟಿಗೂ ಆಡಳಿತವನ್ನು ವಿಕೇಂದ್ರೀಕರಣ ಮಾಡುವುದು ಒಳ್ಳೆಯದು. ಉದಾಹರಣೆಗಾಗಿ, ಒಬ್ಬ ಗ್ರಾಮಸ್ಥನು ಮಂತ್ರಿಗಳಲ್ಲಿ ಅರ್ಜಿಯೊಂದನ್ನು ಸಲ್ಲಿಸಿದರೆ, ಅದನ್ನು ಸಂಬಂಧಪಟ್ಟ ಮಂತ್ರಿಗಳು ಕೂಡಲೇ ಯಾವ ಅಧಿಕಾರಿಗೆ ಅದನ್ನು refer ಮಾಡಬೇಕೋ ಅವರಿಗೆ ಮಾಡಿದರೆ, ಆ ಅರ್ಜಿಯು ಅಲ್ಲಿಯೇ dispose of ಆಗುವುದಾಗಿದ್ದರೆ ಅಲ್ಲಿಯೇ dispose of ಮಾಡಲು ಅವಕಾಶವಿರಬೇಕು. ಆ ರೀತಿ dispose of ಆದನಂತರ ಆ ವಿಷಯ ಮಾತ್ರ ಮಂತ್ರಿಗಳಿಗೆ ತಿಳಿಸುವಂತೆ ಇರಬೇಕು. ಇಂಥ ಕ್ರಮ ಈಗ ನಮ್ಮಲ್ಲಿಲ್ಲ. ಈಗಿನ ವ್ಯವಸ್ಥೆಯ ಪ್ರಕಾರ ಒಬ್ಬ ದರಖಾಸ್ತುದಾರ ಒಂದಿಷ್ಟು ಜಮೀನಿಗಾಗಿ ಅರ್ಜಿ ಹಾಕಿಕೊಂಡರೆ, ಆ ಅರ್ಜಿಯನ್ನು ಒಂದು ವೇಳೆ ಮಂತ್ರಿಗಳಿಗೆ ಸಲ್ಲಿಸಿದರೆ, ಅಲ್ಲಿಂದ ರೆವೆನ್ಯೂ ಕಮಿಷನರಿಗೆ, ಅನಂತರ ಡೆಪ್ಯೂಟಿ ಕಮಿಷನರಿಗೆ, ಅನಂತರ ಸಬ್‌ಡಿವಿಜನ್ ಆಫೀಸರಿಗೆ, ತಾಲ್ಲೂಕು ಕಚೇರಿಗೆ, ರೆವೆನ್ಯೂ ಇನ್ಸ್‌ಪೆಕ್ಟರಿಗೆ—ಈ ರೀತಿ ಅರ್ಜಿ ಓಡಾಡಿ ಅದು ಫೈಸಲಾಗಲು ಒಂದು ವರ್ಷವಾಗುತ್ತದೆ. ಹೀಗಾಗುವುದರಿಂದ ವ್ಯಥಾ ಕಾಲಹರಣವಾಗುವುದಲ್ಲದೆ, ಅರ್ಜಿಕೊಟ್ಟವನಿಗೂ ಬೇಜಾರು ಆಗುತ್ತದೆ. ಆದಕಾರಣ ಒಂದು ವ್ಯವಹಾರ ಯಾವ ಯೂನಿಟ್‌ನಲ್ಲಿ ಇತ್ಯರ್ಥವಾಗಬೇಕೋ ಅಲ್ಲಿಯೇ ಆಗಿಬಿಡಲು ಪೂರ್ಣ ಅವಕಾಶವಿರುವಂತೆ ಒಂದು ವ್ಯವಸ್ಥೆಯನ್ನು ಸರ್ಕಾರದವರು ಮಾಡಬೇಕಾದುದು ಅತ್ಯಗತ್ಯವೆಂದು ಒತ್ತಾಯವಾಗಿ ಹೇಳುತ್ತೇನೆ. ಇಷ್ಟು ವಿನಂತಿ ಮಾಡಿಕೊಂಡು ಈ ಖೋತಾ ಸೂಚನೆಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

Mr. SPEAKER.—Cut motion moved :

"That the demand be reduced by Rs. 100."

ಶ್ರೀ ಎಚ್. ಎಸ್. ರುದ್ರಪ್ಪ (ಹೊನ್ನಾಳಿ).—ಸ್ವಾಮಿ, ಈ ಖೋತಾ ಸೂಚನೆಯನ್ನು ಸಮರ್ಥನೆ ಮಾಡುತ್ತಾ ಹೆಚ್ಚಿಗೆ ವಿಷಯವನ್ನು ಹೇಳದೆ ಒಂದೆರಡು ಅಂಶಗಳನ್ನು ಮಾತ್ರ ತಿಳಿಸಲು ಆಶಿಸುತ್ತೇನೆ. ಆಡಳಿತದಲ್ಲಿ ದಕ್ಷತೆ ಕಡಮೆಯಾಗುತ್ತಿರುವುದು, ಕೆಲಸ ಕಾರ್ಯಗಳಲ್ಲಿ ನಿಧಾನತೆಯನ್ನು ತೋರುತ್ತಿರುವುದು ನಮಗೆ ಪದೇ ಪದೇ ಕಂಡು ಬರುತ್ತಿದೆ. ಈ ಹೊಸ ಸರ್ಕಾರದಲ್ಲಿ ಹಿಂದಿನ ಸರ್ಕಾರಕ್ಕಿಂತಲೂ ಏನೊಂದು ಬದಲಾವಣೆಯೂ ಆಗಿರುವಂತೆ ಕಂಡುಬಂದಿಲ್ಲವೆಂಬ ಧ್ವನಿ ಅಲ್ಲಲ್ಲಿ ಕೇಳಿ ಬರುತ್ತಿದೆ. ಗ್ರಾಮಾಂತರ ಪ್ರದೇಶಗಳಲ್ಲಿ ಅಲ್ಲಲ್ಲಿ ಗ್ರಾಮಸ್ಥರು ಮೀಟಿಂಗುಗಳನ್ನು ನಡೆಸಿ ಅವರ ಮುಖಂಡರುಗಳಲ್ಲಿ 'ಏನಪ್ಪ ನಮ್ಮ ಕೆಲಸ ಬೇಗ ಆಗುವಂತೆ ಏರ್ಪಡಿಸಿ' ಎಂದು ಹೇಳುತ್ತಿರುವುದು ನನ್ನ ಗಮನಕ್ಕೂ ಬಂದಿದೆ. ಮಂತ್ರಿಗಳು ತಮ್ಮ ಕಚೇರಿಯಲ್ಲಿ ಕುಳಿತು ದಿವಸಕ್ಕೆ ಐನೂರು ಫೈಲ್‌ಗಳನ್ನು *dispose of* ಮಾಡಿದ ಮಾತ್ರಕ್ಕೇ ತಮ್ಮ ದಕ್ಷತೆಯನ್ನು ಜನತೆಗೆ ತೋರ್ಪಡಿಸಿದ ಹಾಗಾಗುವುದಿಲ್ಲ. ಒಬ್ಬ ಅರ್ಜಿದಾರ ಅರ್ಜಿಯನ್ನು ಅಠಾರ ಕಚೇರಿಗೇ ಆಗಲಿ, ತಾಲ್ಲೂಕು ಕಚೇರಿಗೇ ಆಗಲಿ, ಡಿಸ್ಟ್ರಿಕ್ಟ್ ಆಫೀಸಿಗೇ ಆಗಲಿ ಅಥವಾ ಮತ್ತಾವ ಕಚೇರಿಗೇ ಆಗಲಿ ಗುಜರಾಯಿಸಿಕೊಂಡರೆ, ಅದು ಇಷ್ಟೇ ದಿನದಲ್ಲಿ ವಿಲೇವಾರಿ ಆಗುತ್ತದೆ ಎಂಬ ಬಗ್ಗೆ ಅವನಿಗೊಂದು endorsement ಹೋಗುವ ವ್ಯವಸ್ಥೆ ಮಾಡಬೇಕು. ಆಗ ಆತನಿಗೊಂದು ತೃಪ್ತಿ, ಸಂತೋಷ ಮತ್ತು ಸಮಾಧಾನವಾಗುತ್ತದೆ. ಅಲ್ಲದೆ

(ಶ್ರೀ ಎಚ್. ಎಸ್. ರುದ್ರಪ್ಪ.)

ಆ ಕಚೇರಿಯಿಂದ ಈ ಕಚೇರಿಗೆ, ಈ ಕಚೇರಿಯಿಂದ ಇನ್ನೊಂದು ಕಚೇರಿಗೆ ತಿರುಗುವುದು ತಪ್ಪಿ, ಈ ಲಂಚ ರುಷುವತ್ತುಗಳ ಹಾವಳಿ ಸಹ ಬಹುಮಟ್ಟಿಗೆ ಕಡಮೆ ಯಾಗುತ್ತದೆ. ಆದುದರಿಂದ ಈ ವಿಚಾರದಲ್ಲಿ ಒಂದು ಅರ್ಜಿಯು ಒಂದು ಕಚೇರಿಗೆ ತಲಪಿದ ಇಷ್ಟೇ ದಿನ ದಲ್ಲಿ ತೀರ್ಮಾನವಾಗಬೇಕೆಂದು ತಾವು ಖಂಡಿತ ವಾಗಿಯೂ ಒಂದು ಎಚ್ಚರಿಕೆಯ ಕಾರ್ಯಕ್ರಮ ಕೈಗೊಳ್ಳಬೇಕು. ಹಾಗೆ ಆಗದೇ ಇದ್ದರೆ, ಅದಕ್ಕೆ ಸಂಬಂಧಪಟ್ಟವರನ್ನು ತಾವು ಉಗ್ರಶಿಕ್ಷೆಗೆ ಗುರಿಪಡಿಸಿ. ಆಗ ತಾವು ಪಟ್ಟ ಶ್ರಮ ಸಾರ್ಥಕವಾಗುತ್ತದೆ, ತಾವು ಕೈಗೊಂಡ ಕಾರ್ಯ ಫಲದಾಯಕವಾಗುತ್ತದೆ.

ಇದೇ ಸಂದರ್ಭದಲ್ಲಿ ಇನ್ನೊಂದು ವಿಚಾರವನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಕೆಲವು ಆಫೀಸುಗಳಲ್ಲಿ ಹಳೇ ಕಾಲದ ಗುಮಾಸ್ತರಿರುತ್ತಾರೆ. ಅವರನ್ನು ಕಂಡರೆ ಜನರು ಹೆದರುತ್ತಾರೆ. ಇವರು ತಮ್ಮ ಪ್ರಭಾವ ಬೀರಿ ಅನೇಕ ಕೆಲಸಕಾರ್ಯಗಳ ವಿಚಾರವನ್ನು ತಲೆಕೆಳಗು ಮಾಡುತ್ತಾರೆ. ಆದುದ ರಿಂದ, ಒಂದು ಕಚೇರಿಯಲ್ಲಿ ಒಬ್ಬ ಗುಮಾಸ್ತ ಐದು ವರ್ಷಕ್ಕಿಂತಲೂ ಹೆಚ್ಚು ಕಾಲ ಇರಬಾರದು ಎಂಬ ಒಂದು ವ್ಯವಸ್ಥೆ ಮಾಡಬೇಕು. ಈ ಗುಮಾಸ್ತರನ್ನು ತಾವು ಬೇಕಾದರೆ "ಖದೀಂ ಟೆನೆಂಟ್ಸ್''ಗೆ ಹೋಲಿಸ ಬಹುದು. ಈ ರೀತಿ ಆಗಿರಲು ಯಾರೊಬ್ಬರಿಗೂ ಸರ್ಕಾರ ಯಾವ ಆಫೀಸ್‌ನಲ್ಲಿಯೂ ಅವಕಾಶ ಕೊಡ ಬಾರದೆಂದು ವಿನಂತಿ ಮಾಡಿಕೊಂಡು ಈ ಖೋತಾ ಸೂಚನೆಗೆ ನನ್ನ ಬೆಂಬಲ ಕೊಡುತ್ತೇನೆ.

ಶ್ರೀ ಎಸ್. ಗೋಪಾಲಗೌಡ (ಸಾಗರ—ಹೊಸ ನಗರ).—ಅರ್ಜಿ, ಪತ್ರವ್ಯವಹಾರಗಳಿಗೆ ಸ್ಟ್ಯಾಂಪ್ ಹಚ್ಚಿದ್ದರೇ ಉತ್ತರ ಕೊಡುವುದು ಎಂಬ ನಿಯಮ ವಿದೆಯೇ ?

ಶ್ರೀ ಎಚ್. ಸಿದ್ಧವೀರಪ್ಪ (ಗೃಹ ಮತ್ತು ಕೈಗಾರಿಕೆ ಶಾಖೆಗಳ ಮಂತ್ರಿಗಳು).—ಹೌದು.

ಶ್ರೀ ಎಸ್. ಗೋಪಾಲಗೌಡ.—ಆ ರೀತಿ ಹಚ್ಚಿದ ಸ್ಟ್ಯಾಂಪ್ ತಮಗೆ ತಲಪಿದೆಯೆಂಬುದಕ್ಕೆ ಗುರುತೇನು ?

Mr. SPEAKER.—This is not question time.

ಶ್ರೀ ಟಿ. ಎನ್. ಮೂಡಲಗಿರಿಗೌಡ (ಕುಣಿಗಲ್).—ಈ ಖೋತಾ ಸೂಚನೆಯ ಮೇಲೆ ಈಗಾಗಲೇ ಇಬ್ಬರು ಮಾನ್ಯ ಸದಸ್ಯರು ಮಾತನಾಡಿರುತ್ತಾರೆ. ಇದರಲ್ಲಿ ಅಡಕವಾಗಿರುವ ಅಂಶ ಎಲ್ಲರಿಗೂ ತಿಳಿದಿರುವ ವಿಚಾರ. ಈ ಬಗ್ಗೆ ನ್ಯೂನಾತಿರಿಕ್ತಗಳಿವೆಯೆಂಬುದು ವಾಸ್ತ ವಾಂಶ. ಇದುವರೆಗೆ ಈ ವಿಚಾರವನ್ನು ಸರಿಪಡಿಸುವು ದಕ್ಕೆ ಸಾಧ್ಯವಾಗಲಿಲ್ಲವೇ ಎಂಬುದನ್ನು ಪ್ರಸ್ತಾಪಿಸ ಬೇಕಾಗಿದೆ. ನಮ್ಮ ಮಾನ್ಯ ರೆವೆನ್ಯೂ ಮಂತ್ರಿ ಗಳೇನೋ ಇದಕ್ಕೆ ಬಹಳ ಸುಲಭವಾಗಿ surprise visits ಕೊಡುತ್ತೇನೆ, ಸರಿಪಡಿಸುತ್ತೇನೆ, ಎಂಬು ದಾಗಿ ಉತ್ತರಹೇಳಿ ಬಿಡುತ್ತಾರೆ. ಇದು ಆ ರೀತಿಯ surprise visits ನಿಂದ ಸರಿಹೋಗತಕ್ಕ ವಿಚಾರ ವಲ್ಲವೆಂದು ನಾನು ತಿಳಿಸುತ್ತೇನೆ. ಈ ಬಗ್ಗೆ ಒಂದು ನಿರ್ದಿಷ್ಟವಾದ, ಖಚಿತವಾದ ಯೋಜನೆಯನ್ನು ಹಾಕಿ ಕೊಂಡು, ಇದನ್ನು ಸರಿಪಡಿಸಲು ಸಾಧ್ಯವಿಲ್ಲವೇ ಎಂಬು ದನ್ನು ಸರ್ಕಾರದವರು ಆಲೋಚಿಸಬೇಕು. ಈಗಿನ ವಿದ್ಯಮಾನದ ಪ್ರಕಾರ ಒಬ್ಬ ದರಖಾಸ್ತುದಾರನ ಅರ್ಜಿ ಒಬ್ಬ ಅಧಿಕಾರಿಯ ಕಾಲದಲ್ಲಿ ಬಂದರೆ, ಅದಕ್ಕೆ 'ಏನೂ ಮಾಡುವುದಕ್ಕಾಗುವುದಿಲ್ಲ' ಎಂದು ಆತನಿಗೆ endrosement ಬರುತ್ತದೆ. ಅದೇ ಅರ್ಜಿದಾರ ಬೇರೊಬ್ಬ ಅಧಿ ಕಾರಿಯ ಕಾಲದಲ್ಲಿ ಅರ್ಜಿ ಕೊಟ್ಟರೆ, record build-up ಮಾಡಿ ಅದು ಕಾರ್ಯಗತವಾಗುತ್ತದೆ. ಒಬ್ಬನು ಅರ್ಜಿಕೊಟ್ಟರೆ ಜಾಗ್ರತೆ ವಿಲೇ ಆಗುತ್ತದೆ, ಮತ್ತೊಬ್ಬ ಅರ್ಜಿ ಕೊಟ್ಟರೆ ಎಷ್ಟು ಕಾಲವಾದರೂ ವಿಲೇ ಆಗುವು ದಿಲ್ಲ. ಇದು ಎಲ್ಲರಿಗೂ ತಿಳಿದಿರತಕ್ಕ ವಿಚಾರ. ಇಂಥ ವಿಚಾರಗಳಲ್ಲಿ ಸರ್ಕಾರದವರು ಒಂದೇ ವಿಧವಾದ ನಿರ್ದಿಷ್ಟವಾದ ನೀತಿಯನ್ನು ಅನುಸರಿಸಿ ಆಜ್ಞೆ ಮಾಡು ವುದು ಸೂಕ್ತವಾದುದು. ಯಾವುದಾದರೂ ಒಂದು ಅರ್ಜಿ ಸಲ್ಲಿಸಿದರೆ, ಅದು ಯಾವ ರೀತಿ dispose of ಆಯಿತು, ಎಲ್ಲೆಲ್ಲಿ ಯಾವ ಯಾವ ಅಧಿಕಾರಿಯ ಹತ್ತಿರ ಎಷ್ಟು ಕಾಲ ನಿಧಾನವಾಯಿತು ಎಂಬ ಬಗ್ಗೆ ಅಂಕಿ ಅಂಶಗಳು ಒಂದು ನಿರ್ದಿಷ್ಟಕಾಲ ಪರಿಮಿತಿಯಲ್ಲಿ ಸರ್ಕಾರಕ್ಕೆ ತಿಳಿಯುವ ಒಂದು ವ್ಯವಸ್ಥಿತ ಕಾರ್ಯ ನೀತಿಯನ್ನು ಸರ್ಕಾರ ಅನುಸರಿಸಬೇಕು. ಈ ವಿಚಾರ ದಲ್ಲಿ ಸರ್ಕಾರದ ನಿರ್ದಿಷ್ಟ ನೀತಿಯ ಬಗ್ಗೆ ಉತ್ತರವನ್ನು ನಿರೀಕ್ಷಣೆಮಾಡಿ ಈ ಖೋತಾ ಸೂಚನೆಗೆ ನನ್ನ ಪೂರ್ಣ ಬೆಂಬಲ ಕೊಡುತ್ತೇನೆ.

ಶ್ರೀ ವಿ. ವೆಂಕಟಪ್ಪ (ಚನ್ನಪಟ್ಟಣ).—ಸ್ವಾಮಿ, ಈಗ ಶ್ರೀ ರುದ್ರಪ್ಪನವರು, ಶ್ರೀ ಮೂಡಲಗಿರಿಗೌಡರು ಸಾಧಾರಣವಾಗಿ ಎಲ್ಲವನ್ನೂ ಹೇಳಿದ್ದಾರೆ. ಈ ತಾಲ್ಲೂಕು ಆಫೀಸು ಮತ್ತು ಇತರ ಆಫೀಸುಗಳಲ್ಲಿ ಕೆಲಸ ಬಹಳ ನಿಧಾನವಾಗುತ್ತದೆ, ಅದಕ್ಕೇನಾದರೂ ಮಾಡಬೇಕು ಎಂದು ಮಂತ್ರಿಗಳಲ್ಲಿ ಹೇಳಿಕೊಳ್ಳುತ್ತಾ ಇದ್ದೇವೆ. ಆದರೆ ಈ ಸೆಕ್ರೆಟೇರಿಯಟ್‌ನಲ್ಲಿ ಮಂತ್ರಿ ಗಳೇ ನಿಧಾನಮಾಡಿದರೆ ಏನು ಮಾಡಬೇಕು ಎಂಬು ದನ್ನು ಯೋಚನೆ ಮಾಡಬೇಕಾಗಿದೆ. ನಾನೊಂದು ಉದಾಹರಣೆ ಹೇಳುತ್ತೇನೆ ಸ್ವಾಮಿ. ಒಂದು ಅಕ್ವಿ ಸಿಷನ್ ಕೇಸ್‌ನಲ್ಲಿ ಲ್ಯಾಂಡ್ ಅಕ್ವೈರ್ ಆಯಿತು, ಸುಪರ್ದಿಗೂ ಕೊಟ್ಟರು. ಯಾರೋ ನಾಲ್ಕುಮಂದಿ ಅವನಮೇಲೆ ಮಿನಿಸ್ಟರ್ ಸಾಹೇಬರವರಿಗೆ ಒಂದು ಅರ್ಜಿಕೊಟ್ಟರು. ಅದರ ಮೇಲೆ ಸ್ಟೇ ಆರ್ಡರ್ ಕೊಟ್ಟೇ ಬಿಟ್ಟರು. ಸುಪರ್ದಿಗೆ ಕೊಟ್ಟಮೇಲೂ ಸಹ ಸ್ಟೇ ಆರ್ಡರ್ ಕೊಟ್ಟರು. ಪುನಃ ಆ ಸ್ಟೇ ಆರ್ಡರ್ ಎವಿಕ್ಟ್ ಆಗಬೇಕಾದರೆ $1\frac{1}{2}$ ವರ್ಷ ಆಯಿತು. ಡೆಪ್ಯುಟಿ ಕಮಿಷ ನರು ಮತ್ತು ಸಬ್‌ಡಿವಿಜನ್ ಆಫೀಸರು ಸುಪರ್ದಿಗೆ ಕೊಟ್ಟಮೇಲೂ ಹೀಗೆ ಮಾಡಿದರೆ, ನಾವು ಏನು ಮಾಡು ವುದು ಎಂದು ಹೇಳಿದರೆ, ಡೆಪ್ಯುಟಿ ಕಮಿಷನರ್ ಏನು ಮಾಡುತ್ತಾರೆ ? ಅದಕ್ಕೆ ಏನು ಮಾಡುವುದು ಎಂದು ಕೇಳುತ್ತಾ ಇದ್ದೇನೆ. ಯಾವ ಅಧಿಕಾರ ವರ್ಗದವರು ಇತರ ಕಚೇರಿಗಳಲ್ಲಿ ಜಾಗ್ರತೆ ರಿಕಾರ್ಡು ತೀರ್ಮಾನವಾಗಬೇಕೆಂದು ಹೇಳುತ್ತಾರೆಯೋ ಅವರೇ ಏನೂ ಕಾರಣ ಇಲ್ಲದೆ ಒಂದೂವರೆ ವರ್ಷ ನಿಲ್ಲಿಸಿ ಕೊಂಡರೆ ಏನು ಮಾಡುವುದು ? ಅದಕ್ಕೆ ಅವರ ಮನಸ್ಸು ಪರಿವರ್ತನೆ ಆಗಬೇಕು. ಒಂದು ಕಾಗದ ಅದೆಷ್ಟು ಜಾಗ್ರತೆ ಆರ್ಡರ್ ಮಾಡುವುದು ಸರಿಯೇ ಅಲ್ಲವೇ ಎಂಬುದನ್ನು ನೋಡಿ ಆರ್ಡರ್ ಮಾಡುವುದಕ್ಕೆ ತೀರ್ಮಾನ ಮಾಡಲು $1\frac{1}{2}$ ವರ್ಷ ತೆಗೆದುಕೊಂಡರೆ ಏನು ಮಾಡುವುದು ? ಇದರ ಉದ್ದೇಶವಾದರೂ ಏನು ಸ್ವಾಮಿ ?

ಶ್ರೀ ಎನ್. ಸಿ. ನಾಗಯ್ಯರೆಡ್ಡಿ (ಗೌರೀಬಿದ ನೂರು).—ಆ ಬೃಹಸ್ಪತಿಗಳು ಯಾರು ಸ್ವಾಮಿ ?

ಶ್ರೀ ವಿ. ವೆಂಕಟಪ್ಪ.—ಎಲ್. ಎಸ್. ಜಿ. ಮಿನಿ ಸ್ಟರು.

ಶ್ರೀ ಟಿ. ಚನ್ನಯ್ಯ (ಜನಾರೋಗ್ಯ ಮತ್ತು ಸ್ಥಳೀಯ ಸಂಸ್ಥೆಗಳ ಮಂತ್ರಿಗಳು).—ಯಾವ ಯಾವ ಗ್ರಾಮಗ ಳಲ್ಲಿ ಪಾರ್ಟಿಗಳು ಇರುತ್ತವೆಯೋ ಆ ಗ್ರಾಮಗಳಲ್ಲಿ ಸಾಮಾನ್ಯವಾಗಿ ಅಂಥ ಕೇಸುಗಳಲ್ಲಿ ಸ್ಟೇ ಆರ್ಡರ್ ಕೊಡಬೇಕಾಗುತ್ತದೆ. ಯುನಾನಿಮಸ್ ಆಗಿ, ಪಾರ್ಟಿ

ಇಲ್ಲದೇ ಇರತಕ್ಕ ಗ್ರಾಮಗಳಲ್ಲಿ ಸ್ಟೇ ಆರ್ಡರ್ ಕೊಡತಕ್ಕ ಪ್ರಶ್ನೆ ಬರುವುದಿಲ್ಲ; ಅಂಥ ಡಿಲೇ ಆಗುವುದಕ್ಕೆ ಅವಕಾಶವಿಲ್ಲ. ಯಾವ ಗ್ರಾಮಗಳಲ್ಲಿ ಪಾರ್ಟಿಗಳು ಇರುತ್ತವೆಯೋ ಅಂಥ ಗ್ರಾಮಗಳಲ್ಲಿ ಎರಡು ಪಾರ್ಟಿಗಳನ್ನೂ ಸಮಾಧಾನಮಾಡಿ ಒಂದು ಆರ್ಡರ್ ಮಾಡಬೇಕಾಗುತ್ತದೆ. ಅದಕ್ಕೆ ಕಾಲ ಬೇಕಾಗುತ್ತದೆ.

ಶ್ರೀ ವಿ. ವೆಂಕಟಪ್ಪ.—ನನಗೆ ಅವರು ತಿಳಿವಳಿಕೆ ಹೇಳಬೇಕಾದ್ದಿಲ್ಲ; ಅದನ್ನು ನಾನು ತಿಳಿದುಕೊಂಡಿದ್ದೇನೆ. ಸ್ವಾಧೀನಕ್ಕೆ ಕೊಟ್ಟಮೇಲೆ ಸ್ಟೇ ಆರ್ಡರ್ ಕೊಡುವುದಕ್ಕೆ ಅವಕಾಶವಿಲ್ಲ ಎಂದು ಗೊತ್ತಿದೆ; ನನಗೆ ಇವೊತ್ತು ಬುದ್ಧಿ ಕಲಿಸಲಿಕ್ಕೆ ಬಂದಿದ್ದಾರೆ.

ಶ್ರೀ ಟಿ. ಚನ್ನಯ್ಯ.—ಅದೆಲ್ಲಾ ಒಬ್ಬೊಬ್ಬರ ಇನ್‌ಫ್ಲೂಯನ್ಸ್ ಮೇಲೆ ಹಾಗೆ ಆಗುತ್ತದೆ.

ಶ್ರೀ ವಿ. ವೆಂಕಟಪ್ಪ.—ನಾನು ಹೇಳುತ್ತಾ ಇರುವುದೂ ಅದೇ. ತಾವು ಅಂಥ ಇನ್‌ಫ್ಲೂಯನ್ಸಿಗೆ ಒಳಗಾಗುವುದರಿಂದ ಇಂಥಾದ್ದೆಲ್ಲಾ ಆಗುತ್ತದೆ.

ಶ್ರೀ ಟಿ. ಚನ್ನಯ್ಯ.—ಅನೇಕ ಗ್ರಾಮಗಳಲ್ಲಿ ಅಕ್ವಿಜಿಷನ್ ಆಗುವುದೂ ಇದೇ ಕಾರಣದಿಂದಲೇ?

ಶ್ರೀ ವಿ. ವೆಂಕಟಪ್ಪ.—ಇದು ಒಂದೇ ಅಲ್ಲ, ಈ ರೀತಿ ಇನ್ನೂ ಅನೇಕವು ಇವೆ. ಆದ್ದರಿಂದ ದಯವಿಟ್ಟು......

Mr. SPEAKER.—The Hon'ble Minister must have some time to reply.

ಶ್ರೀ ವಿ. ವೆಂಕಟಪ್ಪ.—ಏನೂ ಇಲ್ಲ. ಅಂಥ ಸಂದರ್ಭಗಳಲ್ಲಿ ಕೆಲವುಸಾರಿ ಆ ರೀತಿ ಡಿಲೇ ಆಗತಕ್ಕದ್ದು ಇದೆ. ಅದಕ್ಕೆ ಮಂತ್ರಿಗಳೇ ಅವಕಾಶ ಕೊಟ್ಟು ಸೆಕ್ರೆಟೇರಿಯಟ್‌ನಲ್ಲೇ ನಿಧಾನಮಾಡುತ್ತಿರುವಾಗ ಇನ್ನು ಸಣ್ಣ ಸಣ್ಣ ಕಚೇರಿಗಳಲ್ಲಿ ನಿಧಾನವಾಗುವುದು ಹೆಚ್ಚೇನಲ್ಲ ಎಂಬುದು ಗೊತ್ತಾಗತಕ್ಕ ವಿಷಯ. ಆದ್ದರಿಂದ ಆ ರೀತಿ ಮಾಡುವುದಕ್ಕೆ ಅವಕಾಶ ಕೊಡಬಾರದು ಎಂದು ಹೇಳುತ್ತೇನೆ.

*ಶ್ರೀ ಕೆ. ಪುಟ್ಟಸ್ವಾಮಿ (ಶ್ರೀರಂಗಪಟ್ಟಣ).—ಒಂದು ವಿಚಾರ ಹೇಳಬೇಕೆಂದು ಇದ್ದೇನೆ. ನಾನೇನೂ ಭಾಷಣ ಮಾಡುವುದಿಲ್ಲ. ಮಂತ್ರಿಗಳು ಮಾತನಾಡುತ್ತಾ ಇನ್‌ಫ್ಲೂಯನ್ಸಿಗೆ ಒಳಗಾದರು ಎಂದು ಹೇಳಿದರು. ಸರ್ಕಾರದ ಮೇಲೆ ಇದರ ಒಂದು ರಿಪರ್ಕಷನ್ ಏನಾಗುತ್ತದೆ ಎಂಬುದನ್ನು ನೋಡಬೇಕು. ಈ ರೀತಿ ಹೇಳುತ್ತಾ ಹೋದರೆ ಸರ್ಕಾರದವರು ಬೇರೆ ಯವರು, ಇನ್‌ಫ್ಲೂಯನ್ಸಿಗೆ ಒಳಗಾಗುತ್ತಾರೆ ಎಂಬ ಭಾವನೆ ಜನರಲ್ಲಿ ಬರುತ್ತದೆ. ಆದ್ದರಿಂದ ಸರ್ಕಾರಕ್ಕೆ ಅಷ್ಟೇ ಅಲ್ಲ, ಈ ಸಭೆಗೂ ಒಂದು ಅಪಖ್ಯಾತಿ ಬರುತ್ತದೆ.

Sri Kadidal MANJAPPA (Minister for Revenue and Public Works).—Mr. Speaker, Sir, there is some force in what the Hon'ble Members said. But I do not concede that everything is in chaos, and there is enormous and inordinate delay in the disposal of all papers. Even now, I am not fully satisfied with the way in which the papers are being disposed of in the taluk offices and other offices. We are doing our best to improve the efficiency and minimise the delay in the disposal of papers. As I have already said, Sir, the Revenue Commissioner and myself are conducting surprise inspections and even the Deputy Commissioners have been instructed to conduct surprise inspections. No doubt there is delay in some branches, particularly the darkhast and acquisition. As I have already said, delay in some cases is due to unavoidable reasons; in some cases due to avoidable reasons. In the case of darkhasts, Sir, a party who applies for land in forest and date-grove, applies first to the Amildar, then to the Sub-Division Officer, then to the Deputy Commissioner and then to the Minister also. Many a time applications will not contain the requisite stamp, even postage stamp required to send endorsement. I receive on an average about 60 to 75 petitions every day, mostly darkhast petitions. Many of them are darkhast for grant of lands either in the forest area or in the date-groves or in amritmahal kavals or gomals. Necessarily, I will have to refer these petitions to the Deputy Commissioners for disposal in some cases and in some cases where I find there is undue delay in the disposal of petitions, I call for a report. When the petition is sent to the Deputy Commissioner, he refers to the forest officers or excise officers for their opinion. Naturally it takes some time for the concerned officers to send their opinions. In such cases, there is unavoidable delay and I cannot help it. In certain other cases, the parties will have been endorsed that the land is not available for disposal. But in spite of that the party persists and applies to the Deputy Commissioner and then to the Revenue Commissioner and also to the Minister. Once again, I will have to refer back the petition. So we cannot say that in every case, there is delay.

As regards decentralisation, I am already at it; and I think within a period of six months, I will do something in that direction. I will avoid some of these circuitous ways of submission of records. For instance, I can avoid Sub-Division Officers and in some cases, even the Revenue Commissioners.

Sri Prabhakar said that there must be a change in the outlook. I entirely agree with him. There should be a change of outlook on the part of the officers, on the part of Members and on the part of the public as well. Unless there is hearty co-operation in the

(SRI KADIDAL MANJAPPA.)

matter, public administration cannot be improved.

Sir, I have got as much anxiety as Hon'ble Members regarding this subject. I assure the Hon'ble Members that I will do my best to improve the efficiency of the Department and to reduce the delay.

Sri G. NARAYANA GOWDA.—I seek leave to withdraw my cut motion.

The cut motion was, by leave, withdrawn.

5 P.M.

Mr. SPEAKER.—The question is:

"That a sum not exceeding Rs. 41,40,900 be granted to the Government to defray the charges which will come in course of payment during the year ending 31st day of March 1955, in respect of 'General Administration (F. District Administration)'."

The motion was adopted.

DEMAND No. 36.—WORKING EXPENSES (FOREST.)

X. Forest—3 (1) Wood Preservation Plant—Working Expenses and Seigniorage.

Mr. SPEAKER.—The question is:

"That a sum not exceeding Rs. 4,40,000 be granted to the Government to defray the charges which will come in course of payment during the year ending 31st day of March 1955, in respect of 'X. Forest—3 (1) Wood Preservation Plant–Working Expenses and Seigniorage'."

The motion was adopted.

DISCUSSION ON QUESTION No. 153.

TENDERS FOR SALE OF SANDALWOOD.

Mr. SPEAKER.—Now, Sri N. C. Nagaiah Reddy's question—question No. 153.

ಶ್ರೀ ಎನ್. ಸಿ. ನಾಗಯ್ಯರೆಡ್ಡಿ (ಗೋರಿಬಿದನೂರು).—ಸ್ವಾಮಿ, ಮೈಸೂರು ಗಂಧದ ಮರದ ಮಾರಾಟದಲ್ಲಿ ಬಹಳ ಹೆಸರುವಾಸಿಯನ್ನು ಪಡೆದು ಮುಂದುವರಿದಿರುವುದನ್ನು ಯಾರಿಗೂ ಹೊಸದಾಗಿ ಹೇಳಬೇಕಾಗಿಲ್ಲ. ಇದನ್ನು ಮಾರಾಟಮಾಡಲು ಇತರ ಸಂಸ್ಥಾನಗಳಲ್ಲಿ ಏಜೆನ್ಸಿ ಏರ್ಪಾಡುಮಾಡಿರುತ್ತಾರೆ. ಡೊಮೆಸ್ಟಿಕ್ ಮತ್ತು ರಿಲಿಜಿಯಸ್ ಪರ್ಪಸ್‌ಗೆ ಒಂದು ಕಂಡೀಷನ್ ಹಾಕಿ ಇತರ ಸಂಸ್ಥಾನಗಳಲ್ಲಿ ಮಾರುವುದಕ್ಕೆ ಏರ್ಪಾಡು ಮಾಡಿರುತ್ತಾರೆ. ಆ ಏಜೆನ್ಸಿಯನ್ನು ಟೆಂಡರ್ ಮೂಲಕ ಡಿಸ್ಪೋಸ್ ಮಾಡುವ ವಾಡಿಕೆಯಿದೆ. ಆದರೆ ಟೆಂಡರು ಕರೆದರೂ ಕೂಡ ಕೆಲವು ಸಂದರ್ಭಗಳಲ್ಲಿ ಸುಮಾರು 20 ವರ್ಷಗಳಿಂದ ಒಬ್ಬರಿಗೇ ಮನಾಪಲಿಯಿದೆ; ಒಬ್ಬರೇ ತೆಗೆದುಕೊಳ್ಳುತ್ತಾರೆ. ಅದಕ್ಕೆ ಕಾರಣವೇನೆಂದು ಸರ್ಕಾರದವರು ತಿಳಿಸಬೇಕಾಗಿದೆ. ಕೆಲವು ಸಂದರ್ಭಗಳಲ್ಲಿ ಟೆಂಡರು ಹಾಕಿರುವ ಪರ್ಸೆಂಟೇಜ್ ಕಡಮೆಯಿದ್ದರೂ ಕೂಡ ಅದನ್ನು ರಿಜೆಕ್ಟ್ ಮಾಡಿ ಹೆಚ್ಚು ಪರ್ಸೆಂಟೇಜ್ ಹಾಕಿರುವವರಿಗೆ ಕೊಟ್ಟಿದ್ದಾರೆಂದು ನನ್ನ ಗಮನಕ್ಕೆ ಬಂದಿದೆ. ಇದಕ್ಕೆ ಕಾರಣವೇನೆಂಬುದಕ್ಕೆ ಸರ್ಕಾರ ಜವಾಬು ಕೊಡಬೇಕಾಗಿದೆ. ಏಕೆ ಹೀಗೆ ಕೊಡುತ್ತಾರೆ? ಅನುಭವವಿಲ್ಲವೆಂದೇ ಅಥವಾ ಇನ್ನೇನಾದರೂ ಕಾರಣದಿಂದ ಹೀಗೆ ಮಾಡುತ್ತಿರುವರೇ ಎಂಬುದು ವಿಶದವಾಗಬೇಕು. ಎಷ್ಟಕ್ಕೆ ಮಾರಿದರೂ ಶೇಕಡ ಹತ್ತರಷ್ಟು ಏಜೆಂಟಿಗೆ ಕೊಡುವಾಗ ಅವರನ್ನಿಟ್ಟುಕೊಳ್ಳುವುದೇಕೆ? ಒಂದು ಸಂದರ್ಭದಲ್ಲಿ ಶ್ರೀಮಾನ್ ಚನ್ನಿಗರಾಮಯ್ಯನವರು ಮಂತ್ರಿಗಳಾಗಿದ್ದಾಗ ಶೇಕಡ 5 ರಂತೆ ದರಖಾಸ್ತು ಬಂದರೂ ಶೇಕಡ 10 ರಂತೆ ಕೇಳಿದವರಿಗೆ ಕೊಟ್ಟರು. ಅದಕ್ಕೆ ಕಾರಣವನ್ನು ವಿಚಾರಿಸಲು ಶೇಕಡ 5 ರಂತೆ ಟೆಂಡರು ಹಾಕಿದ್ದು ಒಂದು ದಿವಸ ಲೇಟಾಗಿ ಬಂತು ಎಂದು ಹೇಳಿದರು. ತಿರುಗಿ ಟೆಂಡರು ಕರೆಯಿರಿ ಎಂದು ಹೇಳಿದಾಗ ಕಾಲ ಮೀರಿ ಹೋಯಿತು, ಕೆಲಸಮಾಡುವುದಕ್ಕೆ ಸಾಧ್ಯವಾಗುವುದಿಲ್ಲ, ಮುಂದಿನ ವರ್ಷ ನೋಡೋಣ ಎಂದು ಹೇಳಿದರು. ಹೀಗೆ ಈ ಏಜೆನ್ಸಿಯನ್ನು ಸುಮಾರು 20 ವರ್ಷಗಳಿಂದ ಒಬ್ಬರಿಗೇ ಕೊಡುತ್ತಿದ್ದಾರೆ. ಸಿ.ಪಿ., ಯು.ಪಿ., ಬಂಗಾಳ ಮತ್ತು ಡೆಲ್ಲಿ ಈ ಪ್ರಾಂತಗಳಲ್ಲಿ ಒಬ್ಬರಿಗೇ ಸರ್ಕಾರದ ಕೃಪಾದೃಷ್ಟಿಯಿಂದ ಸಿಕ್ಕುತ್ತಿದೆ.

ಆ ಮೇಲೆ ಇದನ್ನು ಇಪ್ಪತ್ತು ವರ್ಷಗಳಿಂದ ಏನು ಮಾಡಿದ್ದಾರೆಂದರೆ, ಯಾವ ಸ್ಥಳಗಳಿಗೆ ಕಳುಹಿಸಬೇಕೋ ಆ ಸ್ಥಳಗಳಿಗೆ ಕಳುಹಿಸಿಲ್ಲ, ಅದನ್ನು ಬೊಂಬಾಯಿಯಲ್ಲಿ ನವರೋಜಿ ಎಂಬುವವರಿಗೆ ಕಳುಹಿಸಿದ್ದಾರೆ. ಸರ್ಕಾರದವರು 'ಇಲ್ಲ' ಎಂದು ಹೇಳಿದರೆ ನನ್ನ ಹತ್ತಿರ ಈ ಬಗ್ಗೆ ರೈಲ್ವೆ ರಸೀತಿಗಳಿವೆ, ಕಳುಹಿಸಿದ bags ಯಾವ ಯಾವ ದಿನ ಎಷ್ಟೆಷ್ಟು ಕಳುಹಿಸಲ್ಪಟ್ಟಿವೆಯೆಂಬ ಬಗ್ಗೆ ನನ್ನ ಹತ್ತಿರ ದಾಖಲೆಗಳಿವೆ. ಇವರ condition ಇದ್ದದ್ದು, domestic purposesಗೆ ಎಂದು. ಆದರೆ ಇದನ್ನು C. P., U. P. ಮತ್ತು Delhi, Calcutta ಗೆ ಅಲ್ಲದೆ Bombay ಗೆ ಕಳುಹಿಸಿರುವ ಅನೇಕ ಸಂದರ್ಭಗಳಿವೆ. ಅದಕ್ಕೆ ಇಲ್ಲಿ ಅಂದರೆ ಮೊದಲು ನಾಲ್ಕು ಸ್ಥಳಗಳಲ್ಲಿ ಹೆಚ್ಚಿಗೆ ದುಡ್ಡು ಬರಲು ಅವಕಾಶವಿಲ್ಲ. ಈ ವಿಚಾರ ಹಾಗೂ ಹೀಗೂ ಆಂಟಿಕರಪ್ಷನ್ ಡಿಪಾರ್ಟ್‌ಮೆಂಟ್ ತನಿಖೆಗೆ ಹೋಯಿತು. ಆಂಟಿಕರಪ್ಷನ್ ಡೈರೆಕ್ಟರವರು ಈ ಬಗ್ಗೆ ತನಿಖೆನಡೆಸಿ ಕೊನೆಗೆ ಈ ಬಗ್ಗೆ ತಪ್ಪು ನಡೆವಳಿಕೆ ಆಗಿರುವುದು ಕಂಡು ಬಂದು, ಸರ್ಕಾರಕ್ಕೆ ಇವರ ಏಜೆನ್ಸಿಯನ್ನು ಕ್ಯಾನ್ಸಲ್ ಮಾಡಿ, ಇವರ ಡಿಪಾಜಿಟ್ forfeit ಮಾಡಿಕೊಳ್ಳಬೇಕೆಂದು ತಿಳಿಸಿದರು. ಅನಂತರ ಈ ವಿಚಾರವಾಗಿ ಫಾರೆಸ್ಟ್ ಮಿನಿಸ್ಟರ್ ಮುಂದಿನ ಕಾರ್ಯಕ್ರಮ ಕೈಗೊಂಡರು. ಈ ಬಗ್ಗೆ ಅದೇ ರೀತಿ ಮಾಡಿ, fresh tenders call for ಮಾಡಿದರು. ಆದರೆ ಟೆಂಡರ್ call for ಮಾಡಿದ ದಿನ ತಿರುಗಿ ಹಿಂದಿನ ಏಜೆನ್ಸಿಯನ್ನೇ restore ಮಾಡಿದೆ ಎಂದು ತಿಳಿಸಿದರು! ಆಂಟಿಕರಪ್ಷನ್ ಡೈರೆಕ್ಟರವರ ಸಲಹೆಯಂತೆ ಕಾರ್ಯಕ್ರಮ ಕೈಗೊಂಡು, ಇವರ ಏಜೆನ್ಸಿ ವಜಾಮಾಡಿ, ಡಿಪಾಜಿಟ್ forfeit ಮಾಡಿಕೊಂಡು, fresh tenders call for ಮಾಡಿದ ದಿನ ಇವರ ಏಜೆನ್ಸಿಯನ್ನೇ